ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 49

ಡಿಸೆಂಬರ್ 07, 2008

ರೂ. 5/-



ಮುಂಬೈಯಲ್ಲಿ ಕಂಡ ಉಗ್ರರ ಕ್ರೌರ್ಯದ ಕರಾಳ ಮುಖ






ಜನರನ್ನು ಸುಲಿಯುತ್ತಿರುವ ಸಾರಿಗೆ ಸಂಸ್ಥೆ



4ನೇ ರಾಜ್ಯ ಸಮ್ಮೇಳನ

ಅಂಗನವಾಡಿ ನೌಕರರ ಚಳುವಳಿಗೆ ಹೊಸ ಹುರುಪು



ತತ್ವಬದ್ಧ ರಾಜಕಾರಣಿ ವಿ.ಪಿ. ಸಿಂಗ್

ಗಜೇಂದ್ರಗಢ : ಹಾಸ್ಟೆಲ್‌ಗಾಗಿ ವಿದ್ಯಾರ್ಥಿನಿಯರ ಹೋರಾಟ

ನೋಟ

'ಮತಾಂತರ' ಚರ್ಚೆಯ ಕುರಿತು



ಡಾ. ಜಿ. ಭಾಸ್ಕರ ಮಯ್ಯ

ದೇಶಾದ್ಯಂತ ಕ್ರೈಸ್ತರ ಮೇಲೆ ಅವರ ಪೂಜಾ ಸ್ಥಾನಗಳ ಮೇಲೆ ನಡೆಸಿದ ಗೂಂಡಾಗಿರಿ, ಹಲ್ಲೆ, ಅತ್ಯಾಚಾರ, ಅನಾಚಾರಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಚಿಂತೆಯ ಗೆರೆಗಳನ್ನು ಮೂಡಿಸಿದವು. ಭಾರತದ ಸಂವಿಧಾನ ಮತ್ತು ಧರ್ಮ ನಿರಪೇಕ್ಷತೆಯ ಮೌಲ್ಯಗಳನ್ನು ಗಾಳಿಗೆ ತೂರಲಾಯಿತು. 1992 ರಿಂದೀಚೆಗೆ ಭಾರತವು ಜಾಗತಿಕ ಮಟ್ಟದಲ್ಲಿ ಹಲವಾರು ಬಾರಿ ತಲೆತಗ್ಗಿಸುವಂತಹ ಘಟನೆಗಳು ನಡೆದು ಹೋದವು. ಇಂದು ಪ್ರಜಾಪ್ರಭುತ್ವ ಅಪಾಯದ ಅಂಚಿನಲ್ಲಿದೆ.

ದ್ವೇಷಪೂರಿತವಾದ ಮತಿಹೀನ ಕಾರ್ಯಾಚರಣೆಗೆ ಇಂತಹ ಸಂದರ್ಭದಲ್ಲಿ ಕ್ರೈಸ್ತರ ಮೇಲಾದ ದೌರ್ಜನ್ಯಕ್ಕೆ ಒಂದು ತಾತ್ವಿಕ ಸಮರ್ಥನೆಯನ್ನು ನೀಡಲು 'ಮತಾಂತರ'ದ ನೆಪವನ್ನು ಒತ್ತಿ ಒತ್ತಿ ಹೇಳಲಾಯಿತು. ಡಾ|| ಎಸ್. ಎಲ್. ಭೈರಪ್ಪ ಮತ್ತು ಚಿದಾನಂದ ಮೂರ್ತಿಯವರು ಪ್ರಾಯಶಃ ಭಾರತದ ಸಾಹಿತ್ಯ ಕ್ಷಿತಿಜದಲ್ಲಿ ವಿರಳವಾಗಿ ಗುರುತಿಸಲ್ಪಡುವ ಸಂಘ ಪರಿವಾರದ ವಕ್ತಾರರು ಹಾಗೂ ದಾರ್ಶನಿಕರು. ಕನ್ನಡದ ಬಹುತೇಕ ಹೆಚ್ಚಿನ ಸಾಹಿತಿಗಳು ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವವರು. ಕನ್ನಡದ ಸಾಹಿತ್ಯ ಲೋಕದಲ್ಲಿ ಈ ಎರಡು ಜೀವಿಗಳು ಮಾತ್ರ ಒಂದು ಅಪವಾದ. ಇರಲಿ, ಈಗ ಇವರು ಸುದೀರ್ಘವಾಗಿ ಬರೆದು ಚರ್ಚೆಗೆ ಹಚ್ಚಿದ 'ಮತಾಂತರ'ದ ಕುರಿತು ಒಂದು ವಿವೇಚನೆ:

ಗೌರಿ ಲಂಕೇಶಪತ್ರಿಕೆಯಲ್ಲಿ ವರದಿಗಾರರೊಬ್ಬರು ಹೀಗೆ ಬರೆದಿದ್ದರು: ಪ್ರಮುಖ ಚಡ್ಡಿ ಎಸ್. ಎಲ್. ಭೈರಪ್ಪನ ಲೇಖನವೊಂದನ್ನು ಪ್ರಕಟಿಸುವ ಮೂಲಕ ಮತಾಂತರ ಕುರಿತು ಭಟ್ಟರು ಒಂದು ನಕಲಿ 'ಸಂವಾದ'ವನ್ನು ಆರಂಭಿಸಿದ್ದು ಈಗ ಹಳೆಯ ಸುದ್ದಿ. ಈ ಚರ್ಚೆಯನ್ನು ಅವರೆಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿರುವುದರಿಂದ ನಾಡಿನ ಪ್ರಜ್ಞಾವಂತರಾರೂ ಈ ಚರ್ಚೆಯಲ್ಲಿ ಭಾಗವಹಿಸುತ್ತಿಲ್ಲ.' - ಈ ಮಾತು ಬಹಳಷ್ಟು ಮಟ್ಟಿಗೆ ನಿಜ. ಏಕೆಂದರೆ ಅದು ಪ್ರತಿಕ್ರಿಯೆಗೂ ಯೋಗ್ಯವಾಗಿಲ್ಲ ಎಂಬುದು ಖರೆ. ಅಂತೆಯೇ ಚರ್ಚೆಯಲ್ಲಿ ಭಾಗವಹಿಸಿದವರನ್ನು 'ಪ್ರಜ್ಞಾವಂತರಲ್ಲ' ಎನ್ನುವಂತೆಯೂ ಇಲ್ಲ. ಆದಾಗ್ಯೂ, ವರದಿಗಾರರು ಯೋಚಿಸಿದಂತೆಯೇ ಅದು ಎಲ್ಲಿಗೆ ಬಂದು ನಿಲ್ಲಬೇಕಾಗಿತ್ತೊ ಅಲ್ಲಿಗೇ ಬಂದು ನಿಂತಿತು. ಆದರೆ, ಭೈರಪ್ಪ ಹಾಗೂ ಸಂವಾದದಲ್ಲಿ ಭಾಗವಹಿಸಿದ ಪಂಡಿತರೆಲ್ಲಾ ಒಟ್ಟಾರೆಯಾಗಿ 'ಮತ-ಧರ್ಮ-ದರ್ಶನ, ಮೂಲಭೂತವಾದ, ಕೋಮುವಾದ, ಭಯೋತ್ಪಾದನೆ ಮತ್ತು ಫ್ಯಾಸಿಸಮ್' ಇವುಗಳನ್ನೆಲ್ಲಾ ಒಂದರೊಡನೊಂದು ಸೇರಿಸಿ 'ಕನ್‌ಫ್ಯೂಸ್' ಮಾಡಿರುವುದರಿಂದ ಆಯಾಯ ಶಬ್ದಗಳ ಕುರಿತು ಒಂದು ಸ್ಪಷ್ಟನೆ ನೀಡಲು ಪ್ರಯತ್ನಿಸುತ್ತೇನೆ.

ಪರಂಪರೆಯಲ್ಲಿ ಕ್ರೈಸ್ತ ಧರ್ಮ, ಹಿಂದೂ ಧರ್ಮ, ಇಸ್ಲಾಂ ಧರ್ಮ ಎಂಬುದಾಗಿ ಶಬ್ದಗಳು ಬಳಕೆಯಲ್ಲಿದ್ದರೂ ಧರ್ಮಕ್ಕೂ ಮತಕ್ಕೂ ಅರ್ಥಭೇದವಿದೆ. ಧರ್ಮ ಎಂಬುದು ಅತೀ ವ್ಯಾಪಕ ಅರ್ಥವುಳ್ಳ ಪದ. ಅದು ನೀತಿ ಶಾಸ್ತ್ರವನ್ನು ಹೇಳುತ್ತದೆ. ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ. ವಿನಯ, ಔದಾರ್ಯ, ದಯೆ, ಕರುಣೆ, ನ್ಯಾಯಶೀಲತೆ, ಸಹಿಷ್ಣುತೆ, ಆತ್ಮ ಸಂಯಮ, ಆತ್ಮಗೌರವ, ಸನ್ನಡತೆ, ಪರೋಪಕಾರ ಇತ್ಯಾದಿ ಸದ್ಗುಣಗಳೇ ಧರ್ಮದ ಮೂಲ ದ್ರವ್ಯ. ಯಾವುದೇ ಮತದಲ್ಲಿ ಈ ಸದ್ಗುಣಗಳಿಲ್ಲದಿದ್ದರೆ ಆ ಮತವು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಅಥವಾ ಅದೊಂದು ಬರ್ಬರ ರಾಕ್ಷಸೀಯ ಮತವಾಗಿರುತ್ತದೆ. ಆದರೆ ಧರ್ಮಕ್ಕೆ ಮತದ ಆಧಾರ ಬೇಕಿಲ್ಲ; ಆದರೆ ಮತಕ್ಕೆ ಧರ್ಮದ ಆಧಾರ ಬೇಕೇ ಬೇಕು. 'ಮತ'ವಿಲ್ಲದೇ ಒಬ್ಬ ಧಾರ್ಮಿಕನಾಗಿರಬಹುದು. ನಿರೀಶ್ವರವಾದಿ, ಭೌತವಾದಿ ಹಾಗೂ ಮಾರ್ಕ್ಸ್‌ವಾದಿಗಳು ಪರಮ ಧಾರ್ಮಿಕರು. ಅವರಿಗೆ ಯಾವುದೇ ಮತದ ಅವಶ್ಯಕತೆಯಿಲ್ಲ. ಧರ್ಮದಿಂದ ಕೂಡಿದ ಮತವನ್ನೇ ವ್ಯವಾಹಾರದಲ್ಲಿ 'ಧರ್ಮ'ವೆಂದು ಕರೆಯಲಾಗುತ್ತದೆ. ಹಾಗಾಗಿ ಕ್ರೈಸ್ತ ಧರ್ಮ, ಇಸ್ಲಾಂ ಧರ್ಮ ಇತ್ಯಾದಿ ಶಬ್ದಗಳು ಪ್ರಚಲಿತವಾಗಿದೆ.

ಇನ್ನು ಮತವೆಂದರೇನು? ಮತದಿಂದ 'ಧರ್ಮ'ದ ಅಂಶವನ್ನು ಬೇರ್ಪಡಿಸಿದರೆ (ಅಂದರೆ ಮೇಲೆ ಹೇಳಲಾದ 'ಧರ್ಮ'ವು ಎಲ್ಲಾ ಮತಗಳಲ್ಲೂ ಇರುವ ಸಾಮಾನ್ಯ ತತ್ವ. ಮತಧರ್ಮಗಳೆಂದರೆ - ac ad, ad, ap ಇತ್ಯಾದಿ. ಧರ್ಮ 'ಚಿ' ಸಾಮಾನ್ಯ. ಮಿಕ್ಕುಳಿಯುವುದು b, c, d, p ಮತಗಳು ಮಾತ್ರ) ಅಲ್ಲಿ ಉಳಿದಿರುವುದು ವಿಭಿನ್ನ ದೇವರ ಸ್ವರೂಪ, ಕಟ್ಟು ಕಟ್ಟಳೆಗಳು, ಆಚಾರ ವಿಚಾರಗಳು, ಜನಿವಾರ, ಶಿವದಾರ, ಶಿಲುಬೆ, ಟೊಪ್ಪಿ, ಮುಂಜಿ, ಬ್ಯಾಪ್ಟಿಸಮ್, ಉಪನಯನ ಇತ್ಯಾದಿಗಳು. ಎಲ್ಲಾ ಮತಗಳಲ್ಲೂ ರಾಶಿ ರಾಶಿ ಕಟ್ಟುಕತೆಗಳು, ಅತಾರ್ಕಿಕ ವಿಚಾರಗಳು, ಗೊಡ್ಡು ನಂಬಿಕೆಗಳು ತುಂಬಿರುತ್ತವೆ. ಈ ವಿಚಾರದಲ್ಲಿ ಹಿಂದೂ, ಕ್ರೈಸ್ತ, ಇಸ್ಲಾಂ, ಬೌದ್ಧ, ಜೈನ ಎಲ್ಲವೂ ಒಂದೇ. ಅವೆಲ್ಲಾ ಬೇರೆ ಬೇರೆ ಬ್ರ್ಯಾಂಡಿನ ಸರಾಯಿ ಇದ್ದಂತೆ. ಒಂದು ಮತ ರಾಯಲ್ ಚಾಲೇಂಜ್ ಆದರೆ ಇನ್ನೊಂದು ಮತ ಪೀಟರ್ಸ್ ಸ್ಕಾಚ್. ಅಷ್ಟೇ ಅಂತರ. ಆದ್ದರಿಂದಲೇ ಕಾರ್ಲ್‌ಮಾರ್ಕ್ಸ್‌ರವರು ಅದನ್ನು 'ಅಫೀಮು' ಎಂದು ಕರೆದರು. ಈ ತರ್ಕವನ್ನು ಇಲ್ಲಿಗೇ ನಿಲ್ಲಿಸುವಂತಿಲ್ಲ. ಏಕೆಂದರೆ ಯಾಂತ್ರಿಕ ಭೌತವಾದಿಗಳು ಇಲ್ಲಿಗೇ ನಿಲ್ಲಿಸಿ ಮತಗಳ ಇನ್ನೊಂದು ಮುಖವನ್ನು ಕಾಣುವಲ್ಲಿ ಎಡವುತ್ತಾರೆ. ಮಾರ್ಕ್ಸ್‌ರವರು ಹೀಗೆನ್ನುತ್ತಾರೆ-'ಇದು ಶೋಷಿತ ಜನರ ನಿಟ್ಟುಸಿರು, ಹೃದಯಹೀನ ಸಮಾಜದ ಹೃದಯ, ಚೈತನ್ಯಹೀನ ಪರಿಸ್ಥಿತಿಗಳ ಚೈತನ್ಯ'. ಜನರ ಭ್ರಾಮಕ ಸಂತೋಷವಾದ ಈ ಮತವನ್ನು ಕಿತ್ತೆಸೆಯಬೇಕಾದರೆ ನಿಜವಾದ ಸುಖಕ್ಕಾಗಿ ಹೋರಾಟ ಮಾಡಬೇಕು. ಈ ಜಗತ್ತು ವರ್ಗ ಶೋಷಣೆಯ ಆಧಾರದಲ್ಲಿಯೇ ನಿಂತಿರುವುದರಿಂದ ಈ ಮತಗಳು ಅಸ್ತಿತ್ವದಲ್ಲಿವೆ. ಈ ನಿಟ್ಟಿನಲ್ಲಿ 'ಮತಾಂತರ'ವೆಂದರೆ ಒಂದು ಬಗೆಯ ಶರಾಬನ್ನು ಬಿಟ್ಟು (ಕೊಡೆಸ್ ರಮ್ ಬಿಟ್ಟು ಓಲ್ಡ್ ಮೊಂಕ್ ತೆಗೆದು ಕೊಂಡ ಹಾಗೆ) ಇನ್ನೊಂದು ಬಗೆಯ ಶರಾಬನ್ನು ಸೇವಿಸಿದ ಹಾಗೆ. ಅಷ್ಟೇ ವ್ಯತ್ಯಾಸ. ಇದನ್ನು ನಾನು ಹೀನಾರ್ಥದಲ್ಲಿ ಬಳಸುತ್ತಿಲ್ಲ. ಅಂತೆಯೇ ನಂಬಿದವನಿಗೆ ಮತ ಕೊಡುವ ನೆಮ್ಮದಿಯನ್ನೂ ನಿರಾಕರಿಸುತ್ತಿಲ್ಲ.

ತನ್ನ ಮತ-ಧರ್ಮಕ್ಕೆ ನಿಷ್ಠನಾಗಿರುವ ವ್ಯಕ್ತಿಯಿಂದ ಸಮಾಜಕ್ಕೆ ಯಾವ ಹಾನಿಯೂ ಇಲ್ಲ. 'ಮತ' ಬೀದಿಗೆ ಬಂದಾಗ ರಾಜಕೀಯಕ್ಕೊಳಗಾದಾಗ ಅದು ಮತ-ಧರ್ಮವಾಗಿ ಉಳಿಯುವುದಿಲ್ಲ. 'ಬೇಟೆಗಾರ'ನಾಗುತ್ತದೆ. ಆದರೆ, ಭೈರಪ್ಪ ಹೇಳುವ ಹಾಗೆ ಕ್ರೈಸ್ತ ಇಸ್ಲಾಂ ಮತ ಧರ್ಮಗಳು ಬೇಟೆಗಾರ ಧರ್ಮಗಳಲ್ಲ; ಬದಲಿಗೆ ಬೇಟೆಗಾರರು ಕ್ರೈಸ್ತರಲ್ಲೂ ಇದ್ದಾರೆ, ಮುಸ್ಲಿಮರಲ್ಲೂ ಇದ್ದಾರೆ, ಹಿಂದೂಗಳಲ್ಲೂ ಇದ್ದಾರೆ. ಈ ಬೇಟೆಗಾರರ ಜಾತಿಯೇ ಬೇರೆ. ಅವರನ್ನು ಮೂಲಭೂತವಾದಿಗಳು, ಕೋಮುವಾದಿಗಳು ಎಂದು ಕರೆಯುತ್ತೇವೆ. ಭೈರಪ್ಪನವರು ಓರ್ವ ಹಿರಿಯ ತತ್ವಶಾಸ್ತ್ರದ ವಿದ್ಯಾರ್ಥಿ. ನಾನೂ ತತ್ವಶಾಸ್ತ್ರದ ವಿದ್ಯಾರ್ಥಿಯೇ. ಅದರಲ್ಲಿ ಅವರಂತೆಯೇ ಪಿ.ಎಚ್.ಡಿ. ಮಾಡಿದವನು. ಅವರು ಹಿರಿಯರು. ಆದರೆ, ಭೈರಪ್ಪ ಸಂಘಪರಿವಾರದ ಉನ್ಮಾದದ ಮತ್ತಿನಲ್ಲಿ ತತ್ವಶಾಸ್ತ್ರವನ್ನು ಪೂರ್ತಿಯಾಗಿ ಮರತಂತೆ ಕಾಣಿಸುತ್ತದೆ. ಇದೇ ತಪ್ಪನ್ನು ಸಂವಾದದಲ್ಲಿ ಭಾವಹಿಸಿದ ಹಲವರು ಮಾಡಿದ್ದಾರೆ. ಇವರ ಕನ್‌ಫ್ಯೂಶನ್ ಇಲ್ಲಿಗೇ ಮುಗಿಯುವುದಿಲ್ಲ. ಇವರು ಉಪನಿಷತ್ತು, ದರ್ಶನ ಶಾಸ್ತ್ರ, ಆಧ್ಯಾತ್ಮ 'ಏಕಂ ಸದ್ ವಿಪ್ರಾ: ಬಹುಧಾ ವದಂತಿ' 'ಹೀಗಾಗಿ ಇಲ್ಲಿ ಪ್ರವಾದಿ ಮತದ ಮೂಲ ಮತಾಂಧತೆಗೆ ಅವಕಾಶವಾಗಲಿಲ್ಲ. ವೇದ ಮತ್ತು ಉಪನಿಷತ್ತುಗಳು ಋಷಿಗಳ ಪ್ರವಾದಿಗಳಲ್ಲ' ಇತ್ಯಾದಿ ಹೇಳಿಕೆಗಳ ಮೂಲಕ ಹಿಂದೂ ದರ್ಶನವನ್ನು ಕೊಂಡಾಡಿ ಉಳಿದವುಗಳನ್ನು ಬರೇ ಬೇಟೆಗಾರ ಧರ್ಮವೆನ್ನುತ್ತಾರೆ.

ತತ್ವಶಾಸ್ತ್ರ ಅಥವಾ ದರ್ಶನ ಶಾಸ್ತ್ರ ಜಾಗತಿಕವಾದುದು. ಭಾರತದಲ್ಲಿ ಬ್ರಹ್ಮಸೂತ್ರ, ಷಡ್ದರ್ಶನ, ಶಾಂಕರ ವೇದಾಂತ ಇತ್ಯಾದಿಗಳಿದ್ದರೆ, ಪಾಶ್ಚಾತ್ಯರಲ್ಲಿ ಸೈಂಟ್ ಅಗಸ್ಟಿನ್, ಸೈಂಟ್ ಎನ್‌ಸ್ಲೆಮ್, ಸ್ಪಿನೋಜಾ, ಕಾಂಟ್ ಇತ್ಯಾದಿ ನಾನಾ ದಾರ್ಶನಿಕರಿದ್ದರು. ಅವರಲ್ಲಿ ಕ್ರಿಶ್ಚನರು ಸಾಕಷ್ಟು ಇದ್ದರು. ಸ್ಪಿನೋಜಾ ಹೇಳುವ Substance ಶಂಕರರು ಹೇಳುವ 'ಬ್ರಹ್ಮನ್' ಅನ್ನು ಹೋಲುತ್ತದೆ. ಇದೇ ರೀತಿ ಮುಸ್ಲಿಮರಲ್ಲೂ ಸಾಕಷ್ಟು ದಾರ್ಶನಿಕರಿದ್ದರು. ಅವರ ಹಲವು ಪಂಥಗಳಿದ್ದವು ಫರಾಬಿ, ಮಸ್ಕವಿಯಾ, ಬಾಬಾ-ಅಲೀ-ಸೀನಾ, ಅಲ್-ಬರೂನಿ, ಹಜಾಲಿ, ಸೂಫಿದರ್ಶನ ಇತ್ಯಾದಿ ಹಲವಾರು ದಾರ್ಶನಿಕ ಪಂಥಗಳೂ ದಾರ್ಶನಿಕರೂ ಇದ್ದರು. ಒಟ್ಟಿನಲ್ಲಿ ದರ್ಶನ ಶಾಸ್ತ್ರದಲ್ಲಿ ವಿಭಿನ್ನ ಬಗೆಯ ಚಿಂತನೆಗಳಿವೆ. ಪಾಶ್ಚಾತ್ಯ ದಾರ್ಶನಿಕರಲ್ಲೂ ಈಶ್ವರವಾದಿಗಳಿದ್ದಂತೆ ನಿರೀಶ್ವರವಾದಿ ಗಳಿದ್ದರು. ಭಾರತದಲ್ಲೂ ಇವೆರಡೂ ಧಾರೆಗಳು ಪ್ರಮುಖವಾಗಿದ್ದವು. ಇಸ್ಲಾಂ ದಾರ್ಶನಿಕರಲ್ಲೂ ನಿರೀಶ್ವರವಾದಿಗಳಿದ್ದರು. ಗಜಾಲಿ ದೇವರ ಅಸ್ತಿತ್ವವನ್ನು ಸ್ವರೂಪವನ್ನು ಸಿದ್ಧಮಾಡಲಾಗುವುದಿಲ್ಲ ಎಂದಿದ್ದ. ಆತ ನಾಸ್ತಿಕನಾಗಿದ್ದ. ಹೀಗೆ ದರ್ಶನಶಾಸ್ತ್ರಕ್ಕೆ ಎಲ್ಲೆಗಳಿಲ್ಲ. ನಮ್ಮ ಕಲಿಕೆಯ ಸೌಲಭ್ಯಕ್ಕೆ ಗ್ರೀಕ್ ಫಿಲಾಸಫಿ, ವೆಸ್ಟರ್ನ್ ಫಿಲಾಸಫಿ, ಇಂಡಿಯನ್ ಫಿಲಾಸಫಿ ಇತ್ಯಾದಿ ವಿಭಾಗಿಸಿಕೊಳ್ಳುತ್ತೇವೆ ಅಷ್ಟೇ. ದರ್ಶನಶಾಸ್ತ್ರ ಜ್ಞಾನಕ್ಕೆ ಸಂಬಂಧ ಪಟ್ಟ ವಿಚಾರ ಆಚರಣೆಗೆ ಅದು ಅಲ್ಲ. ಉದಾ: ಶಂಕರರ ಅದ್ವೈತ 'ಬ್ರಹ್ಮನ್' ಅನ್ನು ಪೂಜೆ ಮಾಡಲಿಕ್ಕಾಗುವುದಿಲ್ಲ. ಏಕೆಂದರೆ ಅದು ನಿರ್ಗುಣ. ಇದು ವ್ಯವಹಾರಕ್ಕೆ ಬರುವುದಿಲ್ಲ. ಭಾರತೀಯ ದರ್ಶನಶಾಸ್ತ್ರದ ಬಗ್ಗೆ ಪ್ರಶಂಸೆಯ ಸುರಿಮಳೆಗರೆಯುತ್ತಾ ಉಳಿದ ಯಾವ ಮತದವರಿಂದಲೂ ದರ್ಶನಶಾಸ್ತ್ರದಂತಹ ಉನ್ನತ ವಿಚಾರಗಳು ಹುಟ್ಟಿಲ್ಲ ಎನ್ನುವುದು ಮೂರ್ಖತನ. 'ಕ್ರೈಸ್ತ ಧರ್ಮವಂತೂ ಅತ್ಯಂತ ಪೊಳ್ಳು' 'ಇಸ್ಲಾಂ ಧರ್ಮ ತಲೆಚಿಟ್ಟು ಹಿಡಿಸುವಷ್ಟು ಮೌಢ್ಯಗಳನ್ನು ತನ್ನ ಅಂತರ್ಯದಲ್ಲಿ ಇಟ್ಟುಕೊಂಡಿರುವ ಧರ್ಮ' ಅಗ್ನಿ ಶ್ರೀಧರ್ ಎಂದಿದ್ದಾರೆ. ಇದೇ ವಿಶೇಷಣಗಳನ್ನು ಹಿಂದೂ ಮತಗಳಿಗೂ ಕೊಡಬಹುದು. ಹಿಂದೂ ಪುರಾಣಗಳು ಅತ್ಯಂತ ಅಸಹ್ಯಕರವಾಗಿವೆ. ಅಸಂಬದ್ಧವಾಗಿವೆ. ಸಾವಿರ ವರ್ಷಗಳ ತನಕ ತಪಸ್ಸು ಮಾಡುವ ಋಷಿಗಳು, ಕಿವಿಯಿಂದ, ಜಡೆಯಿಂದ, ಮೂಗಿನಿಂದ ಹುಟ್ಟುವವರು ಇತ್ಯಾದಿ ಇತ್ಯಾದಿ. ನಾನು ಈ ಮೊದಲೇ ವಿಸ್ತಾರವಾಗಿ ಹೇಳಿದಂತೆ ಎಲ್ಲಾ ಮತಗಳು ಮೌಢ್ಯಗಳ ಕಂತೆ. ಆದ್ದರಿಂದ ಮತಗಳಲ್ಲಿ ಯಾವುದು ಶ್ರೇಷ್ಠ ಎಂಬ ಪ್ರಶ್ನೆಯೇ ಅರ್ಥಹೀನ:

ಮತ ಬೇರೆ, ದರ್ಶನ ಬೇರೆ

ಈ ರೀತಿ ಧರ್ಮ ಬೇರೆ, ಮತ ಬೇರೆ, ದರ್ಶನ ಬೇರೆ. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ ಮತವು ಒಂದು ವ್ಯಕ್ತಿಗತ ನಂಬಿಕೆ. ಅದು ತನ್ನ ವ್ಯಕ್ತಿಗತ ಸೀಮೆಯನ್ನು ದಾಟಿದಾಗ, ರಾಜಕೀಯದಿಂದ ಕಲುಷಿತವಾದಾಗ ಕೋಮುವಾದವಾಗಿ ಮಾರ್ಪಡುತ್ತದೆ. ವಸ್ತುಸ್ಥಿತಿಯಲ್ಲಿ ಕೋಮುವಾದಕ್ಕೂ ಮತಧರ್ಮಗಳಿಗೂ ಯಾವುದೇ ಸಂಬಂಧವಿಲ್ಲ. ಕೋಮುವಾದ ಮತಧರ್ಮಗಳನ್ನು ಉಪಯೋಗಿಸಿ ಕೊಳ್ಳುತ್ತದೆ. ಮತ ಕೋಮುವಾದಕ್ಕೆ ವಾಹನ. ಅಷ್ಟೇ. ಅದರ ಗುರಿಯು ಮತವೂ ಅಲ್ಲ; ಧರ್ಮವೂ ಅಲ್ಲ, ಇದನ್ನು ಇನ್ನೂ ಸ್ಪಷ್ಟಪಡಿಸುವುದಾದರೆ-ಕ್ರಿಶ್ಚನ್ ಜರ್ಮನರು ಮತ್ತು ಯಹೂದಿ ಜರ್ಮನರ ನಡುವೆ ಖಂಡಿತವಾಗಿಯೂ ಭೇದವಿತ್ತು. ಆದರೆ ಮತದ ಅಂತರವಿತ್ತು. ನಾಜೀವಾದಕ್ಕೆ ಅದು ಖಂಡಿತವಾಗಿಯೂ ಕಾರಣವಲ್ಲ.

ಮುಂದುವರಿಯುವುದು

ಸಂಪಾದಕೀಯ

ಉಪ ಚುನಾವಣೆ : ಬಿಜೆಪಿಗೆ ಪಾಠ ಕಲಿಸುವ ಸಂದರ್ಭ

ಕರ್ನಾಟಕದ ಎಂಟು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಯ ಘೋಷಿತವಾದದ್ದು 'ರಾಜಕೀಯ ವಲಯ'ದಲ್ಲಿ ಚಟುವಟಿಕೆಗಳಿಗೆ ಹೆಚ್ಚಿನ ಚಾಲನೆ ತಂದಿದೆ. ಈ ಚುನಾವಣೆಗಳು ಈಗ ಘೋಷಿತ ಅವಧಿಯೊಳಗೆ ನಡೆಯದಿದ್ದಲ್ಲಿ ನಾಲ್ಕು ಹಾಲಿ ಸಚಿವರ ಸ್ಥಾನಕ್ಕೆ ಕುತ್ತು ಬರುತ್ತದೆ ಎಂದೂ ಹೇಳಲಾಗಿತ್ತು.

ಈಗಿನ ಚುನಾವಣೆಯು ಆಡಳಿತಾರೂಢ ಬಿಜೆಪಿಯು ಎಸಗಿದ ಅಪರಾಧದಿಂದ ಬಂದಿದೆ.ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷಕ್ಕೆ ಸಂಪೂರ್ಣ ಬಹುಮತವನ್ನು ಜನತೆ ನೀಡಲಿಲ್ಲ. ಕೊನೆಗೆ ಸ್ವತಂತ್ರ ಅಭ್ಯರ್ಥಿಗಳ ಬೆಂಬಲದಿಂದ ಸರ್ಕಾರವನ್ನು ರಚಿಸಿತು. ಆದರೆ ತನ್ನ ಸರ್ಕಾರದ ಸಚಿವರು, ಶಾಸಕರ ಮೇಲೆ ವಿಶ್ವಾಸವಿರಿಸದೆ ಯಾವುದೆ ಅನೈತಿಕ ಮಾರ್ಗಗಳಿಂದಾದರೂ ಸರಿಯೇ ಅಧಿಕಾರ ಉಳಿಸಿಕೊಳ್ಳಬೇಕೆಂದು ವಿರೋಧ ಪಕ್ಷಗಳ ಶಾಸಕರ ಖರೀದಿಗೆ ಮುಂದಾಯಿತು. ಜೆಡಿ(ಎಸ್) ಮತ್ತು ಕಾಂಗ್ರೆಸ್‌ನ ಒಟ್ಟು ಏಳು ಶಾಸಕರನ್ನು ಹಣ, ಅಧಿಕಾರದ ಆಮಿಷಗಳಿಂದ ಅವರು ಆಗಷ್ಟೇ ಚುನಾಯಿತರಾಗಿದ್ದ ಸ್ಥಾನಗಳಿಗೆ ರಾಜೀನಾಮೆ ಕೊಡಿಸಲಾಯಿತು. ಹೀಗೆ ಆರಿಸಿದ ಜನತೆಗೆ, ರಾಜ್ಯಕ್ಕೆ ದ್ರೋಹ ಬಗೆದವರಿಗೆ ಮಂತ್ರಿ, ಇತ್ಯಾದಿ ಪದವಿಗಳನ್ನು ನೀಡಿತಲ್ಲದೇ ತನ್ನದು 'ಆಪರೇಷನ್ ಕಮಲ' ಎಂದೆಲ್ಲಾ ಸಮರ್ಥಿಸಿಕೊಂಡು ನಿರ್ಲಜ್ಜತನ ತೋರಿಸಿತು. ಇಂತಹ ಅಕ್ರಮ, ಅನೈತಿಕ ಮತ್ತು ಜನದ್ರೋಹದ, ಜನತಂತ್ರವನ್ನೇ ಅಣಕಿಸಿದ ಬಿಜೆಪಿ ಕೃತ್ಯದಿಂದಾಗಿ ಈ ಚುನಾವಣೆಗಳನ್ನು ಹೇರಲ್ಪಟ್ಟಿದೆ.

ಹಠಾತ್ ನಿಧನರಾದ ಜೆಡಿ(ಎಸ್) ಶಾಸಕ ಸಿದ್ಧರಾಜುರವರ ಸ್ಥಾನ ಬಿಟ್ಟರೆ, ಜೆಡಿ(ಎಸ್)ನ ನಾಲ್ಕು, ಕಾಂಗ್ರೆಸ್‌ನ ಮೂರು ಶಾಸಕರು 'ಆಪರೇಷನ್ ಕಮಲ'ದಲ್ಲಿ ಬಲಿತುಕೊಂಡವರು. ಅರಭಾವಿ, ಹುಕ್ಕೇರಿ, ದೇವದುರ್ಗ, ಕಾರವಾರ, ಮದ್ದೂರು, ದೊಡ್ಡಬಳ್ಳಾಪುರ, ತುರುವೇಕೆರೆ, ದೇವದುರ್ಗ, ಮಧುಗಿರಿ ಇಲ್ಲಿ ಚುನಾವಣೆಗಳಿಗೆ ಆಯೋಗವು ಡಿಸೆಂಬರ್ 27 ರಂದು ಮತದಾನಕ್ಕೆ ನಿಗದಿಮಾಡಿದೆ. ಡಿಸೆಂಬರ್ 3 ರಿಂದ ಚುನಾವಣೆ ಪ್ರಕ್ರಿಯೆಗಳು ಆರಂಭವಾಗಿವೆ. ಇಂತಹ ಜನದ್ರೋಹಿಗಳಿಗೆ ಪಾಠ ಕಲಿಸಲು ಮತ್ತೊಂದು ಸಂದರ್ಭ ಜನರ ಎದುರಿದೆ. ಉಪಚುನಾವಣೆಯಲ್ಲಿ ಎಲ್ಲವೂ ಅಲ್ಲವಾದರೂ ಬಿಜೆಪಿಯ ಆರು ತಿಂಗಳ ದುರಾಡಳಿದ ವಿರುದ್ಧ ಜನತೆ ಕೊಡುವ ತೀರ್ಪೂ ಇದಾಗಲಿದೆ. ಇಲ್ಲಿ ಎಲ್ಲಾ ಸ್ಥಾನಗಳಲ್ಲಿಯೂ ಸೋತು ಹೋದರೆ ಬಿಜೆಪಿಯ ಕೋಮುವಾದಿ ಫ್ಯಾಸಿಸ್ಟ್ ಮಾದರಿಯ ಹಾಗೂ ಜನದ್ರೋಹಿ ನೀತಿಗಳಿಗೆ ಒಂದು ಬಲವಾದ ಪೆಟ್ಟಾಗಲಿದ್ದು, ಧರ್ಮ ನಿರಪೇಕ್ಷತೆ(ಸೆಕ್ಯುಲರ್)ಯನ್ನು ಕಾಯುವ ಒಂದು ಮಹತ್ವದ ಅಂಶವಾಗಿಯೂ ಜನಾದೇಶ ಪ್ರಕಟಗೊಳ್ಳಲಿದೆ.

ಬಿಜೆಪಿ ಅಧಿಕಾರ, ಹಣದ ಮದದಿಂದ ರಾಜ್ಯದ ಜನತೆಗೆ ತಂದೊಡ್ಡಿರುವ ಸಂಕಷ್ಟಗಳಿಗೆ ಲೆಕ್ಕವೇ ಇಲ್ಲದಂತಾಗಿದೆ. ಸತತವಾಗಿ ಕ್ರಿಶ್ಚಿಯನ್, ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಅಮಾನವೀಯವಾದ, ಧರ್ಮದ ಆಶಯಗಳಿಗೆ ವಿರೋಧವಾದ ಧಾಳಿಗಳನ್ನು ಸಂಘ ಪರಿವಾರ ನಡೆಸಿದೆ. ಸಂಘ ಪರಿವಾರದ ಭಾಗವೇ ಆಗಿರುವ ಬಿಜೆಪಿಯು ಅಧಿಕಾರದ ಆಡಳಿತ ಯಂತ್ರವನ್ನೇ ಬಳಸಿ ಅಂತಹ ಸಂವಿಧಾನ ವಿರೋಧಿ ಧಾಳಿಗಳಿಗೆ ಬೆಂಬಲಿಸಿದೆ ಮಾತ್ರವಲ್ಲ ಹಲವಾರು ಕಡೆಗಳಲ್ಲಿ ಪೋಲೀಸ್ ಒಳಗೊಂಡು ಆಡಳಿತ ಯಂತ್ರವೇ ಕೈ ಜೋಡಿಸಿದೆ. ಬಿಜೆಪಿ ಭಜರಂಗದಳ ಇತ್ಯಾದಿಗಳ ಧಾಳಿಯನ್ನು ಬಹಿರಂಗವಾಗಿ ಸಮರ್ಥಿಸಿಕೊಂಡಿದೆ. ಮುಖ್ಯಮಂತ್ರಿ ಮತ್ತಿತರ ಸಚಿವರೂ ಇದೇ ನೀತಿ ಅನುಸರಿಸಿದ್ದಾರೆ. ಜನಮತ ನೀಡಿದ್ದು ತಮ್ಮ ಸಂಕಷ್ಟಗಳಿಗೆ ಪರಿಹಾರ ನೀಡಲಿ ಎಂಬುದರ ಬದಲಾಗಿ ಫ್ಯಾಶಿಸ್ಟ್ ಮಾದರಿ ಅಜೆಂಡಾ ಜಾರಿಗೊಳಿಸಿ ಆರ್.ಎಸ್.ಎಸ್.ನ ಜೊತೆಯನ್ನು ವಿಸ್ತರಿಸಿಕೊಳ್ಳಲು ಅವಕಾಶ ನೀಡಿದೆ. ರಾಜ್ಯವನ್ನು ಹತ್ಯಾಕಾಂಡದ ಗುಜರಾತ್ ಮಾದರಿಯನ್ನಾಗಿಸಲು ಬಿಜೆಪಿ ಪ್ರಕಟಿಸಿದ್ದು, ಮೋದಿಯನ್ನೇ ವಿಜೃಂಭಿಸಿದ್ದು ರಾಜ್ಯದಲ್ಲಿ ಭಯೋತ್ಪಾದನೆ ಬೆಳೆಯಲು ಅವಕಾಶ ಕಲ್ಪಿಸಿದೆ. ಸ್ವತಃ ಸಂಘ ಪರಿವಾರದ ಅಂಗಸಂಸ್ಥೆಗಳೇ ಭಯೋತ್ಪಾದನೆಯ ಕೃತ್ಯಗಳಲ್ಲಿ ತೊಡಗಿರುವುದು ಮಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಹೊರಬಂದಿದೆ. ಸಂಘ ಪರಿವಾರದ ಕೋಮುವಾದವು, ಅಲ್ಪಸಂಖ್ಯಾತರಲ್ಲಿ ಮೂಲಭೂತವಾದಿ ಶಕ್ತಿಗಳು ಬಲಗೊಳ್ಳಲು ಅವಕಾಶ ಉಂಟು ಮಾಡಿದ್ದು, ಎರಡೂ ಒಂದನ್ನೊಂದು ಪೋಷಿಸುವ ಶಕ್ತಿಗಳಾಗಿ ರಾಜ್ಯ ಹಾಗೂ ದೇಶಕ್ಕೆ ಗಂಡಾಂತರಕಾರಿಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದರೊಂದಿಗೆ ಬಿಜೆಪಿಯು ಅನುಸರಿಸುತ್ತಿರುವ ಆರ್ಥಿಕ ನೀತಿಗಳು, ಅತ್ಯಂತ ಭ್ರಷ್ಟಾಚಾರ, ಜನಜೀವನವನ್ನು ಸ್ಫೋಟಕ ಸ್ಥಿತಿಗೆ ತಂದು ನಿಲ್ಲಿಸಿವೆ. ಬಿಜೆಪಿಯೇ ಪರಿಹಾರ ಎಂದೇ ವ್ಯಾಪಕ ಪ್ರಚಾರ ಮತ ಪಡೆದ ಬಿಜೆಪಿಯ ರಾಜ್ಯವನ್ನು ದಿವಾಳಿಯಂಚಿಗೆ ತಂದು ನಿಲ್ಲಿಸುತ್ತಿದೆ. ನಿಲ್ಲದ ರೈತರ ಆತ್ಮಹತ್ಯೆಗಳು, ಸಿಗದ ರೇಷನ್‌ಕಾರ್ಡ್, ಬೀಜಗೊಬ್ಬರ ಕೇಳಿದ್ದಕ್ಕೆ ಗೋಲಿಬಾರ್ ನಡೆಸಿ ರೈತರ ಬಲಿ ತೆಗೆದುಕೊಂಡಿದ್ದು ಯಡಿಯೂರಪ್ಪನವರ ಸರ್ಕಾರದ 'ಸಾಧನೆಗೆ' ಹಿಡಿದ ಕನ್ನಡಿ. ಹೀಗಾಗಿ ಮಠಗಳಿಕೆಗೆ ಲಿಂಗಾಯತ ಇತ್ಯಾದಿ ಮಠಾಧೀಶರ, ಆ ಮೂಲಕ ಆ ಜಾತಿಗಳ ಓಲೈಕೆಗೆ ಮುಂದಾಗಿದೆ.

ಇಂತಹ ಸ್ಥಿತಿಯಿಂದ ಚುನಾವಣೆಯಲ್ಲಿ ಸೋಲುವ ಭಯದಿಂದ ಉಪಚುನಾವಣೆಗಳು ನಡೆಯುತ್ತಿದ್ದ ಕ್ಷೇತ್ರಗಳಿಗೆ ಸರ್ಕಾರದ ಬೊಕ್ಕಸದಿಂದ ಅಪಾರ ಹಣವನ್ನು ಎಲ್ಲೇ ಮೀರಿ ಸುರಿಯಲಾಗಿದೆ. ಅಧಿಕಾರಿಗಳನ್ನು ಮನಬಂದಂತೆ ಲೆಕ್ಕಚಾರ ಮಾಡಿ ವರ್ಗಾವಣೆ ಮಾಡಲಾಗಿದೆ. ಭೂ, ಗಣಿ ಇತ್ಯಾದಿಯಲ್ಲಿ ಅಕ್ರಮ ಸಂಪತ್ತು ದೋಚಿದ ಹಣ ಬಳಸಿ ಚುನಾವಣೆ ಗೆಲ್ಲುವ ತಂತ್ರ ರೂಪಿಸಿದೆ. ಆದ್ದರಿಂದ ಈ ಚುನಾವಣೆಯಲ್ಲಿ ಬಿಜೆಪಿಯನ್ನು ಪೂರ್ಣವಾಗಿ ಸೋಲಿಸುವುದು ಜಾತ್ಯಾತೀತತೆ, ಪ್ರಜಾತಂತ್ರದ ಉಳಿವಿಗೆ ಅತೀ ಅಗತ್ಯ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಜಾತ್ಯಾತೀತ ಶಕ್ತಿಗಳೂ ಸಹ ಬಿಜೆಪಿಯನ್ನು ಸೋಲಿಸಲು ಸೂಕ್ತವಾದ ಕಾರ್ಯತಂತ್ರವನ್ನು ಅನುಸರಿಸುವುದು ಅಗತ್ಯ.


ತತ್ವಬದ್ಧ ರಾಜಕಾರಣಿ ವಿ.ಪಿ.ಸಿಂಗ್

ಮಾಜಿ ಪ್ರಧಾನಿ ವಿಶ್ವನಾಥ ಪ್ರತಾಪ್‌ಸಿಂಗ್ ತಮ್ಮ 77ನೇ ವಯಸ್ಸಿನಲ್ಲಿ ಮೃತರಾಗಿದ್ದಾರೆ. ಕಳೆದ ಸುಮಾರು 15 ವರ್ಷಗಳಿಂದ ರಕ್ತ ಕ್ಯಾನ್ಸರ್‌ನೊಂದಿಗೆ ಹೋರಾಡುತ್ತಲೇ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದ ವಿ.ಪಿ.ಸಿಂಗ್ ಅದೇ ಕಾಯಿಲೆಗೆ ಬಲಿಯಾಗಿದ್ದಾರೆ.

ವಿ.ಪಿ.ಸಿಂಗ್ ಭಾರತದ ರಾಜಕಾರಣಕ್ಕೆ ಸಮಾಜದ ನೀಡಿದ ಕೊಡುಗೆಗಳು ಹಲವು. ಹಲವು ಕಾರಣಗಳಿಗಾಗಿ ತಮ್ಮ ಸಮಕಾಲೀನ ಸಹೋದ್ಯೋಗಿಗಳಿಂದ ಭಿನ್ನವಾಗಿ ನಿಲ್ಲುವ ರಾಜಕಾರಣಿಯಾಗಿದ್ದರು ವಿ.ಪಿ.ಸಿಂಗ್.

ವಿ.ಪಿ.ಸಿಂಗ್ ರಾಜೀವ್‌ಗಾಂಧಿಯವರ ನೇತೃತ್ವದ ಸರ್ಕಾರದಲ್ಲಿ ಕೇಂದ್ರದಲ್ಲಿ ಸಚಿವರಾಗಿದ್ದವರು. ಅದಕ್ಕೂ ಮೊದಲು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದವರು. ಕೇಂದ್ರದಲ್ಲಿ ಸಚಿವರಾಗಿದ್ದಾಗ ಬೋಫೋರ್ಸ್ ಹಗರಣದ ವಾಸನೆ ಹೊಡೆಯಲಾರಂಭಿಸಿದಾಗ ಅದರ ಬಗೆಗೆ ತನಿಖೆಗೆ ಆದೇಶಿಸಿದವರು. ಪ್ರಮುಖವಾಗಿ ಇದೇ ಪ್ರಕರಣದಿಂದಾಗಿ ಕಾಂಗ್ರೆಸ್ ಪಕ್ಷದಿಂದ ಸಿಡಿದು ನಿಂತವರು. ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ರಾಜಕೀಯವನ್ನು ರೂಪಿಸುವ ನಿಟ್ಟಿನಲ್ಲಿ ಜನಮೋರ್ಚಾ, ಜನತಾಪಕ್ಷ, ಲೋಕದಳ ಕಾಂಗ್ರೆಸ್(ಎಸ್) ಮುಂತಾದ ಪಕ್ಷಗಳನ್ನು ಒಂದುಗೂಡಿಸಿ ಜನತಾದಳವನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಜನತಾದಳದ ಪ್ರಥಮ ಅಧ್ಯಕ್ಷರು. 1989ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಮತ್ತು ನಂತರ ರಾಷ್ಟ್ರೀಯ ರಂಗ ಸರ್ಕಾರಕ್ಕೆ ಬಿಜೆಪಿಯ ಬಾಹ್ಯ ಬೆಂಬಲ ಪಡೆದ ತಪ್ಪಿನ ಹೊರತಾಗಿಯೂ ಜಾತ್ಯತೀತತೆಯ ತತ್ವಕ್ಕೆ ಬದ್ಧವಾಗಿ ಉಳಿದವರು.

ವಿ.ಪಿ.ಸಿಂಗ್ ಪ್ರಧಾನಿಯಾಗಿದ್ದರು. ಬಿಜೆಪಿಯ ಅಡ್ವಾಣಿ ತಮ್ಮ ರಥಯಾತ್ರೆ ಎಂಬ ರಕ್ತ ಯಾತ್ರೆ ನಡೆಸಿ ದೇಶಾದ್ಯಂತ ರಕ್ತದೋಕುಳಿ ಆಡುತ್ತಿದ್ದ ಕಾಲವದು. ಅಡ್ವಾಣಿಯವರನ್ನು ಬಂಧಿಸಿದರೆ ನಮ್ಮ ಸರ್ಕಾರ ಉಳಿಯಲಾರದೆಂದು ಅವರಿಗೆ ಗೊತ್ತಿತ್ತು. ಆದರೂ ಜಾತ್ಯಾತೀತ ನೀತಿಗೆ ಬದ್ಧರಾಗಿ ಉಳಿದರು. ಸರ್ಕಾರ ಉರುಳಿತು.



ಭೂಹೀನರಿಗೆ ಭೂಮಿಯ ಹಂಚಿಕೆ ಸೇರಿದಂತೆ ಹಲವು ಉತ್ತಮ ಶಿಫಾರಸ್ಸುಗಳನ್ನು ಒಳಗೊಂಡ ಮಂಡಲ್ ವರದಿಯ ಧೂಳು ಕೊಡವಿ ಅದರಲ್ಲಿ ಹಿಂದುಳಿದ ವರ್ಗಗಳಿಗೆ ಕೇಂದ್ರ ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ ನೀಡುವ ಶಿಫಾರಸ್ಸನ್ನು ಜಾರಿಗೆ ತರುವ ಉತ್ತಮ ತೀರ್ಮಾನ ಕೈಗೊಂಡರು.

ಸಾಮಾಜಿಕ ನ್ಯಾಯದ ತತ್ವಕ್ಕೆ ತದ್ವಿರುದ್ಧವಾದ ಹಿಂದೂ ರಾಷ್ಟ್ರ ಸಿದ್ಧಾಂತದ ಸಂಘ ಪರಿವಾರ ಅಂದು 'ಮಂಡಲ್' (ವರದಿ) ವಿರುದ್ಧ ಬಾರಿ ದೊಡ್ಡ ಗಲಭೆ ಎಬ್ಬಿಸಿ ಯುವಜನರಲ್ಲಿ ಮೀಸಲಾತಿ' ವಿರೋಧಿ ಸಮೂಹ ಸನ್ನಿಯನ್ನೇ ಸೃಷ್ಟಿಸಿತು. ಮಂಡಲಕ್ಕೆ ಪ್ರತಿಯಾಗಿ 'ಕಮಂಡಲ' ಎನ್ನುತ್ತಾ ಅಯೋಧ್ಯಾ ಚಳುವಳಿಯನ್ನು ಕೋಮುವಾದಿ ಚಳುವಳಿಯನ್ನು ತೀವ್ರಗೊಳಿಸಿತು.

ವಿ.ಪಿ.ಸಿಂಗ್ ಪ್ರಧಾನಿಯಾಗಿದ್ದ 11 ತಿಂಗಳ ಅವಧಿಯಲ್ಲಿ ಉದ್ಯೋಗವನ್ನು ಮೂಲಭೂತ ಹಕ್ಕನ್ನಾಗಿ ಮಾಡುವ ನಿಟ್ಟಿನಲ್ಲಿ ಒಂದಷ್ಟು ಪ್ರಯತ್ನ, ರೈತರ ಸಾಲ ಮನ್ನಾ ಇತ್ಯಾದಿ ಹಲವು ಸಕಾರಾತ್ಮಕ ಬೆಳವಣಿಗೆಗಳಾದವು.

ಅಧಿಕಾರದಿಂದ ಇಳಿದ ಮೇಲೆ ಸಹ ವಿ.ಪಿ.ಸಿಂಗ್ ದೇಶದಲ್ಲಿ ಕಾಂಗ್ರೆಸ್, ಬಿಜೆಪಿಗಳಿಗೆ ರಾಜಕೀಯ ಪರ್ಯಾಯ ರೂಪಿಸುವ ನಿಟ್ಟಿನಲ್ಲಿ ಶ್ರಮಿಸಿದರು. ಮಾತ್ರವಲ್ಲ. ರೈತರು, ದಲಿತರು, ಹಿಂದುಳಿದವರು, ಕಾರ್ಮಿಕರು, ಗುಡಿಸಲು ವಾಸಿಗಳು ಹೀಗೆ ಅನ್ಯಾಯಕ್ಕೊಳಗಾದ ಜನರ ಹೋರಾಟಗಳಲ್ಲಿ ತಮ್ಮನ್ನು ಗುರುತಿಸಿಕೊಂಡರು. ಕೋಮುವಾದಿ ವಿರೋಧಿ ಚಳುವಳಿಯಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು.

ಅಧಿಕಾರಕ್ಕಾಗಿ ಅವಕಾಶವಾದಿಗಳಾಗಿ ತತ್ವ ಸಿದ್ಧಾಂತಗಳನ್ನು ಗಾಳಿಗೆ ತೂರುವ ರಾಜಕಾರಣಿಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ ವಿ.ಪಿ.ಸಿಂಗ್‌ರವರು ಜಾತ್ಯಾತೀತ ತತ್ವಗಳ ರಕ್ಷಣೆಗಾಗಿ ಪ್ರಧಾನ ಮಂತ್ರಿ ಸ್ಥಾನವನ್ನು ತ್ಯಜಿಸಿದ ತತ್ವನಿಷ್ಠರಾಗಿ ಉಳಿದವರಾಗಿದ್ದಾರೆ. ಇಂತಹ ಹಲವು ಕಾರಣಗಳಿಗಾಗಿ ವಿ.ಪಿ.ಸಿಂಗ್ ಸ್ಮರಣೀಯರಾಗಿದ್ದಾರೆ.

ರಾಯಚೂರಿನ ನಂದವಾಡಗಿ ಎರಡನೇ ಹಂತದ ನೀರಾವರಿ ಯೋಜನೆಗಾಗಿ ಹೋರಾಟದ ಸಿದ್ಧತೆ ನಡೆದಿದೆ. ಅದರ ಸ್ಪೂರ್ತಿಯಲ್ಲಿ ಇನ್ನಷ್ಟು ಚಳುವಳಿಗಳು ಮೂಡಿಬರುವ ಉತ್ಸಾಹದಾಯಕ ಮಾತುಗಳೂ ಕೇಳಿಬರುತ್ತಿವೆ.

ನಂದವಾಡಗಿ ಮತ್ತು ಗೌಡೂರು ಏತ ನೀರಾವರಿಗಾಗಿ ರೈತರ ಬೃಹತ್ ಸಮಾವೇಶ

ರಾಯಚೂರು ಜಿಲ್ಲೆಯ ಅತ್ಯಂತ ಪ್ರಮುಖ ಏತ ನೀರಾವರಿಯಾದ ನಂದವಾಡಗಿ ಯೋಜನೆಯ ಸರ್ವೆಗಾಗಿ ಒತ್ತಾಯಿಸಿ 28 ದಿನಗಳ ಅಹೋರಾತ್ರಿ ಧರಣಿ ಸತ್ಯಾಗ್ರಹ ಮತ್ತು 14 ದಿನಗಳ ಪ್ರಚಾರ ಜಾಥಾ ಮಾಡುವ ಮೂಲಕ ಈ ಹೋರಾಟದ ಕಡೆ ಸೆಳೆಯಲು ಸಾಧ್ಯವಾಯ್ತು. ಜನಸಂಪನ್ಮೂಲ ಸಚಿವ ಬಸವರಾಜಬೊಮ್ಮಾಯಿಯವರು ಹೋರಾಟದ ಸ್ಥಳಕ್ಕೆ ಭೇಟಿ ನೀಡಿ ಮಾರುತಿ ಮಾನ್ಪಡೆಯವರ ನೇತೃತ್ವದ ನಿಯೋಗದೊಂದಿಗೆ ಚರ್ಚಿಸಿ ಸರ್ವೆಗೆ ಆದೇಶ ನೀಡುವುದಾಗಿ ಭರವಸೆ ಕೊಟ್ಟರು. ಸಂಘದ ರಾಜ್ಯ ಕೇಂದ್ರದ ನಿರಂತರ ಪ್ರಯತ್ನದ ಫಲವಾಗಿ ದಿ:16-09-08 ರಂದು ಸರ್ವೆಗಾಗಿ ಆದೇಶ ಹೊರಬಿದ್ದಿತು. ಪ್ರದೇಶದಲ್ಲಿ ನೀರಿನ ಮೂಲದ ಬಗ್ಗೆ ಸರ್ಕಾರವು ಸೂಕ್ತವಾಗಿ ಪರಿಶೀಲಿಸಲಿದೆಯೆಂದು ಮುಂದೆ ಹೊಂದಾಣಿಕೆ ಮಾಡಲಾಗುವುದೆಂದು ಅಸ್ಪಷ್ಟವಾಗಿ ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಸಂಘದ ಜಿಲ್ಲಾ ಸಮಿತಿ ಸಭೆ ಸೇರಿ ನೀರನ್ನು ಒದಗಿಸುವ ಬಗ್ಗೆ ಸ್ಪಷ್ಟವಾಗಿ ಆದೇಶ ಹೊರಡಿಸಬೇಕೆಂಬ ಬೇಡಿಕೆಯನ್ನು ಇಟ್ಟುಕೊಂಡು 9-12-2008ರಂದು ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲು ತೀರ್ಮಾನಿಸಿತು. ಜೊತೆಗೆ ಜಿಲ್ಲೆಯ ಇನ್ನೊಂದು ಏತ ನೀರಾವರಿ ಯೋಜನೆಯಾದ 'ಗೌಡೂರು ಏತ ನೀರಾವರಿ ಯೋಜನೆ' ಮಂಜೂರಾತಿ ಬೇಡಿಕೆ ಇಟ್ಟುಕೊಳ್ಳಲಾಯಿತು.

ಪ್ರಸ್ತುತ ನಂದವಾಡಗಿ ಏತ ನೀರಾವರಿ ಸರ್ವೆಗೆ ನೀಡಿದ ಆದೇಶದ ಪ್ರತಿಗಳನ್ನು ಹಿಡಿದುಕೊಂಡು ಹಳ್ಳಿಗಳನ್ನು ಪ್ರವೇಶ ಮಾಡಿದಾಗ ಸಂಘದ ಮುಖಂಡರಿಗೆ ಉತ್ತಮ ಸ್ವಾಗತ ಸಿಗುತ್ತಲಿದೆ. ಹೆಚ್ಚಿನ ರೈತರು 'ಈ ಯೋಜನೆಯ ಸರ್ವೆ ಆಗುವುದಿಲ್ಲವೆಂದು ನಂಬಿದ್ದೆವು. ಅಂತಹುದು ಹೋರಾಟ ಮಾಡಿ ಆದೇಶ ತಂದಿದ್ದೀರಿ. ಈಗ ನಾವು ಖಂಡಿತಾ ಬರುತ್ತೇವೆ' ಎಂದು ಖುಷಿಯಿಂದಲೇ ಹೇಳುತ್ತಾರೆ. ಈ ಸಮಾವೇಶದ ಖರ್ಚಿಗಾಗಿ ರೈತರೇ ಪಟ್ಟಿ ಮಾಡಿ ಹಣ ಕೊಡಬೇಕು ಎಂದು ವಿನಂತಿಸಿದಾಗ ಆ ಸಭೆಯಲ್ಲಿ 500 ರಿಂದ 1000ದವರೆಗೆ ಸಂಗ್ರಹವಾಗುತ್ತಿದೆ. ರೈತರು ತಾವೇ ಪಟ್ಟಿ ಮಾಡಿಕೊಂಡು ತಮ್ಮ ಗ್ರಾಮದಲ್ಲಿ ದೊರಕಬಹುದಾದ ವಾಹನದ ಮೂಲಕ ಸಮಾವೇಶಕ್ಕೆ ಬರುವುದಾಗಿ ತಿಳಿಸುತ್ತಿದ್ದಾರೆ. ಕೆಲ ಹಳ್ಳಿಗಳಲ್ಲಂತೂ ಟ್ರ್ಯಾಕ್ಟರ್ ಇಟ್ಟುಕೊಂಡಿರುವ ದೊಡ್ಡ ರೈತರು 'ನಾನು ಬಾಡಿಗೆ ಇಲ್ಲದ ಟ್ರ್ಯಾಕ್ಟರ್ ಬಿಡ್ತೀನಿ. ನೀವು ರೈತರೆಲ್ಲಾ ಪಟ್ಟಿ ಮಾಡಿ ಅದರಲ್ಲಿ ಡೀಸೆಲ್ ಹಾಕಿಸಿಕೊಂಡು ಹೋಗಿ ಬರೋಣ' ಎಂದು ಹೇಳುತ್ತಿದ್ದಾರೆ. ಪ್ರತಿದಿನ 2 ರಿಂದ 3 ಹಳ್ಳಿಗಳಲ್ಲಿ ಸಭೆಗಳಾಗುತ್ತಿವೆ. ಆ ಸಭೆಗಳಲ್ಲಿ ಸಮಿತಿಗಳ ರಚನೆಗಳಾಗುತ್ತಿವೆ. ಕಳೆದ ಮೂರ್ನಾಲ್ಕು ದಿನಗಳಲ್ಲಿ ರೋಡಲಬಂಡ, ತವಗ, ಪಾಮನಕೆಲ್ಲೂರು, ಹರ್ವಾಪುರ, ತುಪ್ಪದೂರು, ಬೆಂಚಮರಡಿ, ಇಲಾಲಪುರ, ಗುಡಿಹಾಳ, ಚಿಲ್ಕರಾಗಿ ಮತ್ತು ಆನಂದಗಲ್‌ಗಳಲ್ಲಿ ಸಮಿತಿಗಳ ರಚನೆಗಳಾಗಿವೆ. ಸದಸ್ಯತ್ವ ಮತ್ತು ನಿಧಿ ಸಂಗ್ರಹ ನಡೆಯುತ್ತಿದೆ.

ಗೌಡೂರು ಏತ ನೀರಾವರಿ ಭಾಗದ ಜನ ಗ್ರಾಮಕ್ಕೆ ಬಂದ ರೈತ ಮುಖಂಡರಿಗೆ 'ನೀವು ನಂದವಾಡಗಿ ಏತ ನೀರಾವರಿ ಸಲುವಾಗಿ ತಿಂಗಳಗಟ್ಟಲೆ ಹೋರಾಟ ಮಾಡಿದ್ದೀರಿ. ಈಗ ಸರ್ವೆಗೆ ಆದೇಶಾನೂ ಬಂತು. ಸಂಘದ ಹೋರಾಟದ ಬಗ್ಗೆ ನಮಗೆ ವಿಶ್ವಾಸ ಐತೆ. ನಾವು ಸಮಾವೇಶಕ್ಕೆ ಖಂಡಿತ ಬರುತ್ತೇವೆ' ಎನ್ನುತ್ತಿದ್ದಾರೆ. ಇದು ಜಿಲ್ಲೆಯ ರೈತ ಮುಖಂಡರಿಗೆ ಹುಮ್ಮಸ್ಸು ತರುತ್ತಿದೆ. ಈ ಸಮಾವೇಶದ ಯಶಸ್ವಿಗಾಗಿ ಮಲ್ಲಯ್ಯ ಜಾಲಹಳ್ಳಿ ನೇತೃತ್ವದಲ್ಲಿ ಒಂದು ಗುಂಪು ರಚಿಸಲಾಗಿದ್ದು ಅದರಲ್ಲಿ ಸಂಗಾತಿಗಳಾದ ಸಿದ್ದಪ್ಪ ಪೂಜಾರಿ, ಆದೆಪ್ಪ ಅಂಬಿಗೇರ, ಅಮೀನುದ್ದೀನ್ ಹಟ್ಟಿ, ನಾಗರಾಜ ಮತ್ತು ಅಯ್ಯಪ್ಪ ಹಾಗೂ ಬಸವರಾಜ ಕಡ್ಡೋಣಿ ಇದ್ದಾರೆ. ಹನುಮಗೌಡರ ನಾಯಕತ್ವದ ಮತ್ತೊಂದು ಗುಂಪಿನಲ್ಲಿ ಸಂಗಾತಿಗಳಾದ ಅಮರೇಶ್ ಬಿ.ಕಲ್ಲೂರ, ಶಂಕರಗೌಡ ಗುಂಡಿಸಾಗರ, ಮಲ್ಲೇಶ ಗುರಗುಂಟ ಮುಂತಾದವರಿದ್ದಾರೆ.

ಈ ಸಮಾವೇಶಕ್ಕೆ ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ವರದರಾಜನ್, ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಜಿ.ಸಿ.ಬಯ್ಯಾರೆಡ್ಡಿ ಬರುತ್ತಿದ್ದಾರೆಂಬ ಸುದ್ದಿ ರೈತರಲ್ಲಿ ಮತ್ತು ಸಂಘದ ಕಾರ್ಯಕರ್ತರಲ್ಲಿ ಹುಮ್ಮಸ್ಸು ತಂದಿದೆ.

ಸಂಘದ ಮುಖಂಡರು ಸಭೆ ನಡೆಸಿದ ನಂತರ ಬಹುತೇಕ ರೈತರು ಹೇಳುವ ಪ್ರಮುಖ ಸಮಾವೇಶ ಮುಗಿದ ತಕ್ಷಣ ವಿದ್ಯುತ್‌ಗಾಗಿ ಹೋರಾಟಕ್ಕೆ ಇಳಿಯೋಣ ಅಂತ. ಕೆಲವರು ಬಿಪಿಎಲ್ ಕಾರ್ಡ್‌ಗಳಿಗಾಗಿ, ಕೆಲವರು ನಿವೇಶನ/ ಮನೆಗಳಿಗಾಗಿ ಹೋರಾಟಕ್ಕೆ ಇಳಿಯುವ ಮಾತನಾಡುತ್ತಿದ್ದಾರೆ. ಒಟ್ಟಾರೆ ನಂದವಾಡಗಿ ನೀರಾವರಿಗಾಗಿ ಎರಡನೇ ಹಂತದ ಹೋರಾಟಕ್ಕಾಗಿ ಜನತೆ ಮತ್ತೊಂದು ಸಾರಿ ಸಿದ್ಧವಾಗುತ್ತಿದ್ದಾರೆ.

ವರದಿ: ಮಲ್ಲಯ್ಯ ಜಾಲಹಳ್ಳಿ

'ಒಟ್ನಲ್ಲಿ ಜನಕ್ಕೆ ನೆಮ್ದಿ ಇಲ್ಲ ಬಿಡು'

'ಅಯ್ಯೋ ಸಿವನೇ, ಏನ್ ದುರವಸ್ಥೆ ಬಂತಲ್ಲಾ ನಮ್ ದೇಸುಕ್ಕೆ?'

'ಯಾಕ್ಲಾ? ಏನಾತ್ಲಾ ನಮ್ ದೇಸುಕ್ಕೆ?'

'ಇನ್ನೇನಾಗಬೇಕೇಳು, ದಿನ ಬೆಳಗಾದ್ರೆ ಅಲ್ಲಿ ಬಾಂಬು ಇಲ್ಲಿ ಬಾಂಬು, ಅವ್ರಿಕ್ಕಿದ್ರು ಅಂತ ಇವ್ರು, ಇವ್ರಿಕ್ಕಿದ್ರು ಅಂತ ಅವರು, ಒಟ್ನಲ್ಲಿ ಜನಕ್ಕೆ ನೆಮ್ದಿ ಇಲ್ಲ ಬುಡು'.

'ಊ ಕನಲಾ, ಮುಂಬೈಯಲ್ಲಿ ನೋಡು ನೂರಾರು ಜನಗಳ್ನ ಸಾಯ್ಸಿ, ನೂರಾರು ಜನಗಳ್ನ ಗಾಯ ಮಾಡಿ, ಇಡೀ ದೇಸಾನೆ ಮೂರ್ನಾಕು ದಿನ ನಡ್ ಗುಸ್ ಬುಟ್ರಲ್ಲಾ..., ಅವ್ರ ಮನೆ ಹಾಳಾಗೋಗ, ಥೂ..., ಅವ್ರೇನ್ ಮನುಸ್ರೇನಲಾ..., ಮನುಸ್ರಾಗಿ ಉಟ್ಟಿ, ಯಾಕಿಂಗೆ ರಾಕ್ಷಸರ ಅಂಗೆ ಜನಗಳ್ನ ಸಾಯುಸ್ತಾರೆ ಅಂತ?.'

'ಅವ್ರ ಮನೆ ಆಳಾಗೋಗ ಅಂತ ಬೈತಿಯಲ್ಲ, ಆ ನೀಚರಿಗೆ ಮನೆ, ಮಟ, ಜಾತಿ, ಧರ್ಮ ಯಾವುದೂ ಇರಲ್ಲ ಕಣಲಾ..,ಮನುಸ್ರಲ್ಲ ಕಣಲಾ ಅವರು ಪಿಸಾಚಿಗುಳು....,ಥೂ..., ಏನೇನ್ ಕೆಟ್ ಮಾತಲ್ಲಿ ಬೈದ್ರೂ ಸಾಲ್ದು ನೋಡು.'

'ಇಂಗೆ ಆದ್ರೆ ನಾಳೆ ನಮ್ಮ ಅಳ್ಳಿಗುಳಿಗೂ ಬತ್ತರೇನೋ ಆ ಭಯೋತ್ಪಾದಕರು ಅನ್ನೋ ಪಿಸಾಚಿಗುಳು?'

'ಬಂದ್ರಿದ್ರಂತೆ ಕಣಲಾ..., ಇಲ್ಲಿ ಇಪ್ಪತ್ ನಾಕ್ ಗಂಟೆನೂ ಕರೆಂಟಿಲ್ದೆ, ಬರೀ ಕತ್ಲಾಗೆ ಏನೂ ಕಾಣದಲೆ ಒಂಟೋದರಂತೆ'.

'ಏ..., ಅಂಗಲ್ಲ ಕಣಲಾ...., ಇಲ್ಲಿ ರಸ್ತೆ ಅಗಲ ಮಾಡತೀವಿ ಅಂತ ಸರಕಾರನೇ ಬಿಲ್ಡಿಂಗುಗಳನೆಲ್ಲ ಒಡ್ ದಾಕಿದ್ ನೋಡಿ, ಇಲ್ಲಿ ಬಾಂಬ್ ದಾಳಿ ಮಾಡಾಗಿದೆ ಅಂತ ಅನ್ಕೊಂಡು ಸುಮ್ಕೆ ಒಂಟೋದರಂತೆ.'

'ಸುಮ್ಕಿರ್ರಲಾ, ಏನೇನೋ ಬಾಯಿಗ್ ಬಂದಿದ್ ಮಾತಾಡ್ ಬ್ಯಾಡ್ರೀ.., ಇನ್ನು ಹದಿನೆಂಟು ತಿಂಗಳು ಆಟೆಯಾ ಕರಂಟ್ ಪರಿಸ್ ತಿತಿ ಇಂಗಿರದು ಅಂತ ಏಳವ್ರೆ ಮಿನಿಟ್ರು.'

'ಅಂದ್ರೆ ಆಮೇಲೆ ಸರೋಯ್ತದೆ ಅಂತ್ಲೋ...?'

'ಸರೋಯ್ತುದೋ ಬುಡ್ ತದೋ ಗೋತ್ತಿಲ್ಲ, ಆದ್ರೆ ಆಟೋತ್ತಿಗೆ ಎಲ್ರಿಗೂ ಇದೇ ಅಬ್ಯಾಸ ಅಂತೂ ಆಗಿರ್ತವೆ.'

'ಪರಪಂಚದ ಪರಿಸ್ ತಿತಿನೇ ಅಂಗಾಗಿದೆ ಬುಡು, ಎಂತೆಂತ ದೋಡ್ ದೋಡ್ ಕಮ್ನಿಗಳೇ ಪಾಪರ್ ಚೀಟಿ ತಗೋತಿವೆಯಂತೆ..,'

'ಅಲ್ಲಪಾ ಗುಜರಾತಲ್ಲಿ ಓಮ ಮಾಡ್ತಾವ್ರಂತೆ..'

ಶ್ರೀ

'ಲೇ.., ನಾವು ಪಾಪರ್ ಚೀಟಿ ಇಚಾರ ಮಾತಾಡ್ ತಿದ್ರೆ ನೀನು ಓಮ ದ ಇಸ್ಯ ಯಾಕ್ಲಾ ಎತ್ತುತಿಯ?'

'ಅಯ್ಯೋ ದಡ್ಡ, ಅದೇ ಇಚಾರಕ್ಕೆ ಕಣಲಾ.., ಓಮ ಮಾಡ್ತಿರದು.'

'ಅದ್ರಲ್ಲೇನು ಇಸೇಸ ಬುಡು, ನಿಂತಿದ್ ಕುಂತಿದ್ದುಕ್ಕೆಲ್ಲ ಈಗ ಓಮ ಮಾಡದೊಂದು ಆಟ ಆಗ್ ಬುಟದೆ.

'ಇಸೇಸ ಐತೆ ಕಣಲಾ.., ಒಂದ್ಕೇ ಸಮನೆ ಬುಟ್ಬೋ ಬುಡದೆ ಎರಡೊರ್ಸ ಓಮ ಮಾಡ್ತಾ ಇರ್ತರಂತೆ.'

'ಯಾಕೇಂತ?'

'ಅದೇ ಏಳ್ಲಿಲ್ವೇನ್ಲಾ...., ಪರಪಂಚದ ಆರ್ತಿಕ ಪರಿಸ್‌ತಿತಿ ಎಕ್ಕುಟ್ಬೋಗಿದೆಯಲ್ಲ? ನೆಟ್ಟಾಗ್ಲಿ ಅಂತ ಅಂತೆ.'

'ಅವ್ರೂ ಬುದ್ವಂತ್ರು ಬುಡ್‌ಲಾ.., ಎಲ್ಡೊರ್ಸದಲ್ಲಿ ಪರಿಸ್‌ತಿತಿ ಇಂಗೆ ಇರ್ತವಾ ಏನಾರೂ ಆಗ್ಲೇಬೇಕಲ್ಲ? ನಾವು ಓಮ ಮಾಡಿ ಎಲ್ಲ ಸರಿ ಮಾಡುದ್ವಿ ಅಂತ ಏಳ್ಕೋಬೋದು.'

'ಪರಪಂಚದ ಆರ್ತಿಕ ಪರಿಸ್‌ತಿತಿ ನೆಟ್ ಗಾಯ್ತುದೋ ಬುಡ್ ತದೋ..., ಎಲ್ಡೊರ್ಸ ಓಮ ಮಾಡಕ್ಕ ಕೋಟ್ರಾಂತ್ರ ರೂಪಾಯಿ ಕರ್ಚು ಮಾಡ್ತರಂತೆ . ಆ ಓಮ ಮಾಡೋರ್ ಆರ್ತಿಕ ಪರಿಸ್‌ತಿತಿ ಅಂತೂ ಸಂದಾಗಾಗುತ್ತೆ ಬುಡು.'

'ಅಲ್ಲ, ನಮ್ಮ ಕರ್ ನಾಟಕದಲ್ಲೂ ಕರಂಟ್ ಓಮ ಮಾಡ್ಸಬೋದಾಗಿತ್ತಲ್ಲ ?'

'ಯಾಕೆ ಮೊಂಬತ್ತಿನೂ ಸಿಗದಂಗಾಗ್ಯತೆ ಅದುಕ್ಕೆ ಓಮದ ಬೆಳಕಲ್ಲೇ ಏನಾರ ಕೆಲ್ಸ ಮಾಡ್ಕೋಬೋದು ಅಂತಾನಾ?'

ಮತಾಂಧ ಸಿದ್ಧಾಂತ ಆಧಾರಿತ ಭಯೋತ್ಪಾದನೆ ಅತ್ಯಂತ ಅಪಾಯಕರ

ಜಿ.ವಿ. ಶ್ರೀರಾಮರೆಡ್ಡಿ

ಮಾಧ್ಯಮಗಳು ಸೇರಿದಂತೆ. ಭಯೋತ್ಪಾದನೆ ಎಂದರೆ ಅದು ಮುಸ್ಲಿಂ ಭಯೋತ್ಪಾದನೆ ಎಂದು ದೊಡ್ಡ ವ್ಯವಸ್ಥಿತ ಪ್ರಚಾರ ಮಾಡಲಾಗುತ್ತಿದೆ. ಇದರ ಆಧಾರದಲ್ಲಿಯೇ ಬಿಜೆಪಿ ಅಧಿಕಾರಕ್ಕೆ ಬಂದಿತು.

ಭಯೋತ್ಪಾದನೆಯನ್ನು ಕೇವಲ ಸಮಾಜ ವಿರೋಧಿ ಕೃತ್ಯ, ಹೇಡಿಗಳ ಕೃತ್ಯ ಎಂದು ಸುಲಭವಾಗಿ ತಳ್ಳಿ ಹಾಕುವಂತಿಲ್ಲ. ಏಕೆಂದರೆ ಈ ಭಯೋತ್ಪಾದನೆಯ ಹಿಂದೆ ಮತಾಂಧ ಸಿದ್ಧಾಂತದ ಪ್ರೇರಣೆ ಇದೆ. ಇದು ಸಮಾಜದ ಸರ್ವಾಂಗೀಣ ಕೋಮುವಾದಿಯನ್ನಾಗಿ ಮಾಡುತ್ತದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ:ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹಾಸನ ಸ್ಥಳೀಯ ಸಮಿತಿಯು ಆಯೋಜಿಸಿದ್ದ ಕೋಮುವಾದ, ಭಯೊತ್ಪಾದನೆ ಜಾತಿವಾದ, ಭಾಷಾಂಧತೆ ಮತ್ತು ಪ್ರಾದೇಶಿಕವಾದ ವಿರೋಧಿಸಿ ಸೌಹಾರ್ದ ಕರ್ನಾಟಕ ರಾಜ್ಯೋತ್ಸವ ಎಂಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಭಾಷಾವಾರು ರಾಜ್ಯಗಳ ರಚನೆಯ ಹಿಂದೆ ಈ ದೇಶದ ಕಮ್ಯೂನಿಸ್ಟ್‌ರ ಪರಿಶ್ರಮವಿದೆ. ಸ್ವಾತಂತ್ರ್ಯ ನಂತರದಲ್ಲಿ ಭಾರತವನ್ನು ಒಕ್ಕೂಟ ವ್ಯವಸ್ಥೆಯೊಳಗೆ ಯಾವ ಆಧಾರದಲ್ಲಿ ರಾಜ್ಯಗಳನ್ನು ರಚಿಸಬೇಕೆಂದು ಜಿಜ್ಞಾಸೆ ಆರಂಭವಾದಾಗ ಕಮ್ಯೂನಿಸ್ಟ್‌ರು ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ರಚಿಸಬೇಕೆಂದು ರಾಜ್ಯ ವಿಂಗಡನಾ ಆಯೋಗದ ಮುಂದೆ ಅಹವಾಲು ಮಂಡಿಸಿದರು. ಇವರಲ್ಲಿ ಕಾಂ:ಪಿ.ಸುಂದರಯ್ಯ ಪ್ರಮುಖರು. ಕರ್ನಾಟಕದ ಏಕೀಕರಣಕ್ಕಾಗಿ ದುಡಿದವರ ಆಶಯಗಳು ಇಂದು ಕನ್ನಡದ ಸೈನಿಕರೆಂದು ಹೇಳಿಕೊಳ್ಳುವವರಂತೆ ಇರಲಿಲ್ಲ ಬದಲಿಗೆ ಕುವೆಂಪುರವರ ಆಶಯದ 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವಂತೆ ಇತ್ತು. ಆದರೆ ಇಂದು ಕನ್ನಡದ ಹೋರಾಟಗಾರರು ಎಂದರೆ ರಿಯಲ್ ಎಸ್ಟೇಟ್‌ನವರು, ಬಡ್ಡಿದಂಧೆ ಮಾಡುವವರು, ಮಾಜಿ ಭೂಗತ ವ್ಯಕ್ತಿಗಳು.... ಹೀಗೆ, ಈ ರೀತಿಯ ಹೋರಾಟಗಾರರಿಂದ ಕರ್ನಾಟಕದ ಪರಿಸ್ಥಿತಿ ಏನಾಗಬಹುದು ಎಂದು ಯೋಚಿಸಿ ಎಂದರು. ಏಕೀಕರಣದ ಸಂದರ್ಭದಲ್ಲಿ ಎಲ್ಲ ಧರ್ಮೀಯರು, ಸಾಹಿತಿಗಳು ಎಲ್ಲರೂ ಸೇರಿ ಕರ್ನಾಟಕದ ಏಕೀಕರಣಕ್ಕೆ ದುಡಿದರು. ಆದರೆ ಇಂದು ಈ ನಾಡನ್ನು ಆ ಆಶಯಕ್ಕೆ ವ್ಯತಿರಿಕ್ತವಾಗಿ ನಡೆಸಿಕೊಂಡು ಹೋಗಲಾಗುತ್ತಿದೆ. ಅದರ ಜೊತೆಗೆ ಈಗ ಕೋಮುವಾದಿ ಬಿಜೆಪಿ ಅಧಿಕಾರದಲ್ಲಿರುವುದರಿಂದ ಕರ್ನಾಟಕ ಆತಂಕಕ್ಕೆ ಒಳಗಾಗಿದೆ ಎಂದು ವಿವರಿಸಿದರು. ನವ್ಯ, ನವೋದಯ, ಬಂಡಾಯ ದಲಿತ ಹೀಗೆ ಯಾವ ಸಾಹಿತ್ಯವೂ ವಿಭಜನೆ ಪ್ರವೃತ್ತಿಯಿಂದ ಕೂಡಿರಲಿಲ್ಲ. ಆದರೆ ಇಂದು ಸಾಹಿತಿ ಏನಿಸಿಕೊಂಡವರು ಕೆಲವರು ತಮ್ಮ ಇಡೀ ಸಂಶೋಧನೆಯನ್ನು ವಿಭಜನೆಯನ್ನೇ ಗುರಿಯಾಗಿಸಿಕೊಂಡು ಬರೆಯುತ್ತಿದ್ದಾರೆ. ಇದೂ ಕೂಡ ಅಪಾಯಕಾರಿಯಾದುದು ಎಂದರು.

ವರದಿ: **ಲಿಂಗರಾಜು, ಬಿ.ಎಸ್.**
ಹಾಸನ

ಇಂದಿನ ಪರಿಸ್ಥಿತಿಗೆ ಭಯೋತ್ಪಾದನೆ, ಕೋಮುವಾದ, ಭಾಷಾಂಧತೆ, ಜಾತಿವಾದ ಮತ್ತು ಪ್ರಾದೇಶಿಕವಾದ ವಿರೋಧಿಸುವ ಮೂಲಕ ಸೌಹಾರ್ದ ಕರ್ನಾಟಕ ಕಟ್ಟುವುದು, ಏಕೀಕರಣದ ಆಶಯದ ಪರಂಪರೆಯನ್ನು ಉಳಿಸಿಕೊಂಡು ಹೋಗುವುದು ನಮ್ಮ ಕರ್ತವ್ಯವಾಗಿದ್ದು, ಅದಕ್ಕಾಗಿ ರಚನಾತ್ಮಕ ಹೋರಾಟ ಮಾಡಬೇಕಾಗಿದೆ. ಅದಕ್ಕಾಗಿ ಎಸ್‌ಎಫ್‌ಐ-ಡಿವೈಎಫ್‌ಐನ ಕಾರ್ಯಕರ್ತರು ಬಲಿದಾನ ಮಾಡಿದ್ದಾರೆ ಎಂದು ತಮ್ಮ ಪರಂಪರೆಯನ್ನು ವಿವರಿಸಿದರು.

ಭಯೋತ್ಪಾದನೆಯ ಕರಿನೆರಳು ಇಂದು ಕರ್ನಾಟಕದ ಮೇಲೂ ಬಿದ್ದಿದೆ. ಮಾಧ್ಯಮಗಳು ಸೇರಿದಂತೆ. ಭಯೋತ್ಪಾದನೆ ಎಂದರೆ ಅದು ಮುಸ್ಲಿಂ ಭಯೋತ್ಪಾದನೆ ಎಂದು ದೊಡ್ಡ ವ್ಯವಸ್ಥಿತ ಪ್ರಚಾರ ಮಾಡಲಾಗುತ್ತಿದೆ. ಇದರ ಆಧಾರದಲ್ಲಿಯೇ ಬಿಜೆಪಿ ಅಧಿಕಾರಕ್ಕೆ ಬಂದಿತು. ಮಾಲೆಗಾಂವ್ ಸ್ಫೋಟದ ನಂತರ ಭಯೋತ್ಪಾದನೆಗೆ ಧರ್ಮವಿಲ್ಲ ಎನ್ನುತ್ತಿದ್ದಾರೆ. ಆದರೆ ಸಾಧುಸಂತರು ಮಿಲಿಟರಿ ಅಧಿಕಾರಿಗಳು ಎಲ್ಲರನ್ನೂ ಕೋಮುವಾದಿಗಳನ್ನಾಗಿಸಿದ ಬಿಜೆಪಿ ಮಾಧ್ಯಮವನ್ನು ಬಿಟ್ಟಿಲ್ಲ. ಇದರಿಂದ ಬಿಜೆಪಿಯಿಂದಲೇ ಈ ದೇಶಕ್ಕೆ ಆತಂಕ ಇದೆ ಎಂದು ವಿವರಿಸಿದರು.

ಭಯೋತ್ಪಾದನೆಯು ಎರಡು ರೀತಿಯಲ್ಲಿದ್ದು, ಒಂದು ಧರ್ಮಾಂಧತೆಯ ಆಧಾರದಲ್ಲಿ ಬೆಳೆಯುವಂತಹದ್ದು, ಎರಡು ಸಾಮಾಜಿಕ, ಆರ್ಥಿಕ ಅಸಮಾನತೆಯ ವಿರುದ್ಧದ ಹೋರಾಟ ಎಂದು ಕರೆದುಕೊಳ್ಳುವ ಭಯೋತ್ಪಾದನೆ ಎಂಬುದಾಗಿದ್ದು, ಎರಡೂ ಪ್ರಗತಿ ವಿರೋದಿ, ಪ್ರಜಾಸತ್ತಾತ್ಮಕತೆ ಪ್ರಕ್ರಿಯೆಯಿಂದ ಜನರನ್ನು ಹೊರಗುಳಿಸಿ ಜನ ಚಳುವಳಿಯನ್ನು ನಿಷ್ಕ್ರಿಯಗೊಳಿಸಿ ಆಂತರಿಕವಾಗಿ ದೇಶವನ್ನು ದುರ್ಬಲಗೊಳಿಸುವ ಸಿದ್ಧಾಂತದ ಮೇಲೆ ಇರುವಂತಹ ಭಯೋತ್ಪಾದನೆಯಾಗಿವೆ.

ಆದರೆ ಇಂದು ಸಂಘಪರಿವಾರದ ಸಿದ್ಧಾಂತದ ಆಧಾರದಲ್ಲಿ ಅಲ್ಪಸಂಖ್ಯಾತರ, ದಲಿತರ ಮಹಿಳೆಯರ ಮೇಲೆ ದಾಳಿ ಹೆಚ್ಚಾಗುತ್ತಿವೆ. ಇದಕ್ಕೆ ಪ್ರತಿಕ್ರಿಯೆ ಎನ್ನುವ ಕಾರಣದಿಂದಾಗಿ ಅಲ್ಪಸಂಖ್ಯಾತರಲ್ಲೂ ಭಯೋತ್ಪಾದನೆ ಬೆಳೆಯುತ್ತಿದೆ. ಒಂದಕ್ಕೊಂದು ಪ್ರತಿಕ್ರಿಯಾತ್ಮಕವಾಗಿ ಪೂರಕವಾಗಿಯೇ ಕಾರ್ಯನಿರ್ವಹಿಸುತ್ತಿವೆ ಎಂದು ವಿವರಿಸಿದರು. ಇಂದು ದೇಶದ ಸಮಗ್ರತೆಗೆ ಅಪಾಯ ಇದೆ. ಯುಪಿಎ ಸರ್ಕಾರವು ಈ ಕುರಿತು ದೃಢತೆಯನ್ನೇನೂ ಪ್ರದರ್ಶಿಸುತ್ತಿಲ್ಲ. ಮಾಲೆಗಾಂವ್ ಸ್ಫೋಟದ ಆರೋಪಿಗಳ ತನಿಖೆಯು ನಡೆಯುವಾಗ ಅದರ ವರದಿಯನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರು ಅಡ್ವಾಣಿಗೆ ಹೇಳುವುದೇನಿತ್ತು. ವರದಿ ಮಾಡುವ ಮೂಲಕ ತನಿಖೆಯ ದಿಕ್ಕನ್ನೇ ಯುಪಿಎ ಸರ್ಕಾರ ತಪ್ಪಿಸಿದಂತಾಗಲಿಲ್ಲವೇ ಎಂದು ಪ್ರಶ್ನಿಸಿದರು. ಬಿಜೆಪಿ ಮಾಲೆಗಾಂವ್ ಸ್ಫೋಟದ ಆರೋಪಿಗಳ ನೆರವಿಗೆ ಇಡೀ ದೇಶದ ಹಿಂದೂಗಳು ಎದ್ದು ಬರಬೇಕು ಎನ್ನುವ ಅಡ್ವಾಣಿಗೆ ಜಾಮೀಯ ವಿವಿಯ ಅಮಾಯಕ ವಿದ್ಯಾರ್ಥಿಗಳ ನೆರವಿಗೆ ಯಾಕೆ ಬರಲಿಲ್ಲ ಎಂದು ಪ್ರಶ್ನಿಸಿದರು. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ರಾಜನಾಥಸಿಂಗ್ ಸಾಧುಸಂತರ ಬೆಂಬಲಕ್ಕೆ ನಿಂತಿದ್ದಾರೆ. ಭಯೋತ್ಪಾದಕರು ಯಾರೇ ಆದರೂ, ಸಾಧು ಸಂತರೇ ಆದರೂ ನಾವು ಸುಮ್ಮನಾಗಬೇಕಿಲ್ಲ. ಅಡ್ವಾಣಿಯು ಹೈದರಾಬಾದ್‌ನಲ್ಲಿ Save India Support BJP ಎಂದು ಹೇಳುತ್ತಿದ್ದಾರೆ. ಬಿಜೆಪಿಯೇ ಈ ದೇಶದ ಸಮಗ್ರತೆಗೆ ಅಪಾಯ ತಂದೊಡ್ಡಿದೆ. ಹೀಗಿರುವಾಗ ಬಿಜೆಪಿಯನ್ನು ಬೆಂಬಲಿಸಿದರೆ ಪರಿಣಾಮ ಏನಾಗಬಹುದು. ನೆಹರು ಹೇಳಿದ ಮಾತು Who lives if inda dies who dies if India live' ಎಂದು ಹೇಳಿದ್ದು ಬಿಜೆಪಿ ತಿಳಿಯಬೇಕು ಎಂದರು.

ಹೈದರಾಬಾದ್ ಜುಮ್ಮಮಸೀದಿಯಲ್ಲಿ ಬಾಂಬ್ ಸ್ಫೋಟವಾದಾಗಲೇ ಎಚ್ಚರಿಕೆ ನೀಡಲಾಗಿತ್ತು. ನಂತರದಲ್ಲಿ ಬಾಂಬ್ ತಯಾರಿಸುವಾಗ ಆರ್‌ಎಸ್‌ಎಸ್ ಕಾರ್ಯಕರ್ತರು ಸತ್ತಾಗಲೇ ಎಚ್ಚರಿಕೆ ವಹಿಸಿದ್ದರೆ ಮಾಲೆಗಾಂವ್ ಸ್ಫೋಟದ ಹಿನ್ನೆಲೆಯನ್ನು ಅರಿಯಬಹುದಾಗಿತ್ತು. ಈ ಭಯೊತ್ಪಾದನೆಗೆ ಫ್ಯಾಸಿಸ್ಟ್ ಸ್ವರೂಪವಿದೆ. ಪ್ರಜಾಪ್ರಭುತ್ವದ ನಾಶವೇ ಇದರ ಹಿನ್ನೆಲೆಯಾಗಿದೆ. ಇದಕ್ಕೆ ಧರ್ಮಾಂಧತೆಯ ನೆಲ ಗಟ್ಟಿದೆ. ಫ್ಯಾಸಿಸಂ ಮಿಲಿಟರಿ, ಮೀಡಿಯಾ, ಶಿಕ್ಷಣ, ಆಡಳಿತವನ್ನು ಆವರಿಸಿಕೊಂಡರೆ ಅಲ್ಲಿಗೆ ದೇಶದ ಭವಿಷ್ಯ ನಿರ್ನಾಮ ಎಂದು ಎಚ್ಚರಿಸಿದರು.

ಆಡಳಿತ ಶಿಕ್ಷಣ ಕೇಸರೀಕರಣ ಕೃಷಿಯಲ್ಲೂ ಕೇಸರೀಕರಣ ಮಾಡಿದ ಬಿಜೆಪಿಯು ಸರ್ವಾಂಗೀಣ ಕೇಸರೀಕರಣಕ್ಕೆ ಕೈ ಹಾಕಿದೆ. ಮುಂದೆ ಕರ್ನಾಟಕಕ್ಕೆ ಆತಂಕವಾದಿಗಳಾಗಿ ಬಿಜೆಪಿ ಬೆಳೆದಿದೆ. ಸಾವಯವ ಕೃಷಿ ಹೆಸರಿನಲ್ಲಿ ಗೋಹತ್ಯಾ ನಿಷೇಧಕ್ಕೆ ಸಮರ್ಥನೆ ಬೀಜ, ರಸಗೊಬ್ಬರ, ಕೊರತೆ, ವೈಜ್ಞಾನಿಕ ಬೆಲೆ ನಿಗಧಿಯಂತಹ ನ್ಯೂನತೆಗಳನ್ನು ಮರೆ ಮಾಚುತ್ತಿದೆ. ಚರ್ಚ್‌ಗಳಿಗೆ ನೋಟೀಸ್ ನೀಡಿ ಬೀಗ ಹಾಕುವುದು, ಲೈಸನ್ಸ್ ಕೇಳುವುದು, ಬೀಗ ಹಾಕಲು ಹೇಳಿದವರು ಯಾರು ಎಂದರೆ ಬಾಯಿ ಬಿಡದ ಅಧಿಕಾರಿಗಳು ಯಾರ ಪರವಾಗಿದ್ದಾರೆ ಎನ್ನುವುದನ್ನು ಎಲ್ಲರೂ ತಿಳಿಯಬೇಕಾಗಿದೆ. ತಾಲ್ಲೂಕು ಮಟ್ಟದ ಭೂ ಬ್ಯಾಂಕ್‌ಗಳು, ಸಾವಯವ ಕೃಷಿ ಟ್ರಸ್ಟ್‌ಗಳು ಯಾಕೆ ಎಂದರೆ ಬಿಜೆಪಿಗೆ ಆರ್‌ಎಸ್‌ಎಸ್‌ನ ಕೇಂದ್ರಗಳಾಗಲಿ ಎಂಬುದೇ ಹೊರತು ಅಭಿವೃದ್ಧಿಗೆ ಖಂಡಿತವಲ್ಲ. ಕಾರ್ಗಿಲ್ ಯುದ್ಧದ ವರದಿಗಳನ್ನು ಬಿಜೆಪಿ ಎಂ.ಪಿ.ಗಳಿಗೆ ವಿವರಿಸಬೇಕೆಂದು ಎನ್‌ಡಿಎ ಸರ್ಕಾರದ ರಕ್ಷಣಾ ಸಚಿವ ಮೇಜುವಿಜ್‌ಗೆ ಆದೇಶ ನೀಡಿದ್ದು ಯಾಕೆ? ಆನಂತರ ಶವ ಪೆಟ್ಟಿಗೆ ಹಗರಣ ನಡೆಯಿತು. ಬಿಜೆಪಿ ಕಛೇರಿಯಲ್ಲಿ ಕಾರ್ಗಿಲ್ ಯುದ್ಧದ ವೀಕ್ಷಕ ವಿವರಣೆಯನ್ನು ನೀಡಲು ಮೂರು ಪಡೆಯ ಹಿರಿಯ ಅಧಿಕಾರಿಗಳು ನಿರಾಕರಿಸಿದರು.

ಅದರ ಪರಿಣಾಮ ವಿಷ್ಣು ಭಾಗವತ್ ವಜಾ ಆಯಿತು. ವಜಾ ಆದ ಅಧಿಕಾರಿಗಳು ಅಂದು ಮಿಲಿಟರಿಯನ್ನು ಕೋಮುವಾದೀಕರಣವಾಗಲು ಬಿಡಲಿಲ್ಲ. ವಜಾ ಆಯಿತು. ಈಗ ಮಾಲೆಗಾಂವ್ ಸ್ಫೋಟದಲ್ಲಿ ಸೇನೆಯ ಅಧಿಕಾರಿಗಳು ಭಾಗಿಯಾಗಿದ್ದಾರೆ ಎಂದರೆ ಎನ್.ಡಿ.ಎ. ಸರ್ಕಾರವು ಸೇನೆಯನ್ನು ಕೇಸರೀಕರಣಗೊಳಿಸಿತ್ತು ಎನ್ನುವುದು ತಿಳಿಯುತ್ತದೆ. ಪ್ರಥಮ ಕಾಂಗ್ರೆಸ್ಸೇತರ ಸರ್ಕಾರದಲ್ಲಿ ಪ್ರಸಾರ ಖಾತೆಯ ಸಚಿವ ಅಡ್ವಾಣಿಯು ಮಾಡಿದ ಘನ ಕಾರ್ಯ ಎಂದರೆ ಮೀಡಿಯಾವನ್ನು ಜನಹಿತರಿಂದ ವಿಮುಖಗೊಳಿಸಿದ್ದು ಹಾಗೂ ಕೋಮುವಾದೀಕರಣಗೊಳಿಸಿದ್ದು.

ಬಿಜೆಪಿ ವಚನ ಭ್ರಷ್ಟತೆ

ಜೆಡಿ(ಎಸ್) ನೊಂದಿಗಿನ ಸಖ್ಯ ಮುರಿದ ಮೇಲೆ ಯಡಿಯೂರಪ್ಪನಿಗೆ (ಬಿಜೆಪಿಗೆ ಅಲ್ಲ) ಅಧಿಕಾರ ನೀಡಲಿಲ್ಲ ಎಂದು ಕಣ್ಣೀರು ಹಾಕಿ ನಾಡಲೆಲ್ಲ ಓಡಾಡಿದ ಯಡಿಯೂರಪ್ಪ ಜೆಡಿ(ಎಸ್)ನ ಮೇಲೆ ವಚನ ಭ್ರಷ್ಟತೆಯ ಆರೋಪ ಹೊರಿಸಿದರು. ಅದು ಕೇವಲ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನ ನಡುವಿನ ಒಪ್ಪಂದ, ವಚನಭ್ರಷ್ಟತೆ. ಅದು ವೈಯಕ್ತಿಕ. ಆದರೆ ಬಿಜೆಪಿ ಮತ್ತು ಯಡಿಯೂರಪ್ಪ ಚುನಾವಣಾ ಸಂದರ್ಭದಲ್ಲಿ ಈ ರಾಜ್ಯದ 5.5 ಕೋಟಿ ಜನರಿಗೆ ನೀಡಿದ ವಚನವನ್ನು ಈಡೇರಿಸದ ವಚನಭ್ರಷ್ಟರಾಗಿದ್ದಾರೆ.

ವಚನಭ್ರಷ್ಟರು ಹೇಗೆ ಎಂದರೆ

1. ಉಚಿತವಾಗಿ ವಿದ್ಯುತ್ ಕೊಡುವುದಾಗಿ ಚುನಾವಣೆ ಕಾಲ್ಕಕೆ ಭರವಸೆ ನೀಡಿತ್ತು. ಆದರೆ ಈಡೇರಿಸಲಿಲ್ಲ. 10 ಹೆಚ್.ಪಿ. ವರೆಗಿನ ಪಂಪ್‌ಸೆಟ್‌ಗಳಿಗೆ ಮಾತ್ರ ಉಚಿತವಾಗಿ ವಿದ್ಯುತ್ ನೀಡಲಾಗುವುದು ಎಂದು ಹೇಳಲಾಗಿದೆ. ಮಲೆನಾಡಿಗೆ ಪಂಪ್‌ಸೆಟ್ ಅಷ್ಟಾಗಿ ಅಗತ್ಯವಿಲ್ಲ. ಬಯಲು ಸೀಮೆಯಲ್ಲಿ 600 ಅಡಿ ಕೊರೆದರೆ ಮಾತ್ರ ನೀರು ಲಭ್ಯ, 600 ಅಡಿ ಆಳದಿಂದ ನೀರೆತ್ತಲು 10 ಹೆಚ್.ಪಿ. ಮೋಟಾರ್ ಸಾಲುವುದಿಲ್ಲ. ಹಾಗಾಗಿ ಉಚಿತ ವಿದ್ಯುತ್ ನೀತಿ ಕೆಲಸಕ್ಕೆ ಬಾರದ್ದಾಗಿದೆ ಜೊತೆಗೆ ಷರತ್ತು ಬೇರೆ, ಏನು ಅಂದರೆ ಬಾಕಿ ತೀರಿಸಬೇಕು. 2000 ಕೋಟಿ ಬಾಕಿ ಕಟ್ಟಿದರೆ 700 ಕೋಟಿ ಖರ್ಚು ಮಾಡಿ ಉಚಿತ ವಿದ್ಯುತ್ ನೀಡಲಿದ್ದಾರೆ. ನಮ್ಮ ರೈತ ಪರ ಸರ್ಕಾರದವರು. ಇದು ಪಕ್ಕಾ ಮಾರ್ವಾಡಿ ಬಿಸಿನೆಸ್‌ನ ಕುಟೀಲ ನೀತಿಯದು.

2. 2ರೂ ಗೆ ಅಕ್ಕಿ ನೀಡುವುದು, ಬಿಪಿಎಲ್ ಕಾರ್ಡಿಗೆ ಆದಾಯ ಮಿತಿ ಹೆಚ್ಚಿಸುವುದು, ಯೂನಿಟ್ ಪದ್ಧತಿಗೆ ವಿರೋಧ, 3 ತಿಂಗಳಲ್ಲಿ ಪಡಿತರ ಚೀಟಿ

ಪುಟ 12ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

'ಸೌಹಾರ್ದ ಕರ್ನಾಟಕ' ರಕ್ಷಣೆಗಾಗಿ ರಾಜ್ಯವ್ಯಾಪಿ ಜಾಥಾಗಳು

ಕರ್ನಾಟಕದ ಸೌಹಾರ್ದ ಪರಂಪರೆ ಹಾಗೂ ಜನಸಂಸ್ಕೃತಿಗೆ ಕೋಮುವಾದಿ ಶಕ್ತಿಗಳಿಂದ ಗಂಭೀರ ಅಪಾಯ ಬಂದಿದೆ. ಜನಸಮುದಾಯಗಳ ಐಕ್ಯತೆಯ ಪರಂಪರೆಯನ್ನು ರಕ್ಷಿಸಿಕೊಳ್ಳಬೇಕಾದ ಹಾಗೂ ಜನರ ಬದುಕಿನ ನೈಜ ಪ್ರಶ್ನೆಗಳನ್ನು ಮುಂಚೂಣಿಗೆ ತರಬೇಕಾದ ತುರ್ತು ಸಂದರ್ಭ ಇದಾಗಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಈ ನಿಟ್ಟಿನಲ್ಲಿ ರಾಜ್ಯವ್ಯಾಪಿ ಸಂಚರಿಸುವ ಪ್ರಚಾರ ಜಾಥಾಗಳನ್ನು ಯೋಜಿಸಿದೆ. ಜಾಥಾಗಳ ವಿವರ ಇಲ್ಲಿವೆ. ನಾಡಿನ ಪ್ರಜ್ಞಾವಂತ ಜನತೆ ಈ ಪ್ರಚಾರ ಜಾಥಾಗಳನ್ನು ಆದರದಿಂದ ಬರಮಾಡಿಕೊಂಡು, ಸಭೆ-ಸಮಾರಂಭಗಳನ್ನು ಯಶಸ್ವಿಗೊಳಿಸಬೇಕಾದ ಅಗತ್ಯವಿದೆ.

ಚಿಕ್ಕಮಗಳೂರು - ಶಿವಮೊಗ್ಗ - ಹಾಸನ ಜಾಥಾ ಕಾರ್ಯಕ್ರಮ ಪಟ್ಟಿ

ದಿನಾಂಕ/ವಾರ	ಸಮಯ	ಉದ್ಘಾಟನೆ, ಉಳಿಯುವುದು,
08.12.2008, ಸೋಮವಾರ	ಬೆಳಗ್ಗೆ. 11 ರಿಂದ ಮಧ್ಯಾಹ್ನ 3 ರವರೆಗೆ	ಬಾಬಾಬುಡನ್‌ಗಿರಿ - ಚಿಕ್ಕಮಗಳೂರು ಉದ್ಘಾಟನೆ.
12.12.2008, ಗುರುವಾರ	ಬೆಳಗ್ಗೆ. 11 ಗಂಟೆಗೆ	ಶಿವಮೊಗ್ಗ - ಸಾರ್ವಜನಿಕ ಸಭೆ - ವಿಶ್ರಾಂತಿ
	ಸಂಜೆ 4.30ಕ್ಕೆ	ಭದ್ರಾವತಿ - ಸಾರ್ವಜನಿಕ ಸಭೆ - ತಂಗುವುದು
13.12.2008, ಶುಕ್ರವಾರ	ಬೆಳಗ್ಗೆ 11 ಗಂಟೆಗೆ	ಕಡೂರು - ಸಾರ್ವಜನಿಕ ಸಭೆ
	ಮಧ್ಯಾಹ್ನ 2 ಗಂಟೆಗೆ	ಹಳೇಬಿಡು - ಸಭೆ - ಊಟ
	ಸಂಜೆ 4,00ಕ್ಕೆ	ಬೇಲೂರು - ಸಾರ್ವಜನಿಕ ಸಭೆ - ತಂಗುವುದು
14.12.2008, ಶನಿವಾರ	ಬೆಳಗ್ಗೆ 11 ಕ್ಕೆ	ಅರೇಹಳ್ಳಿ - ಸಾರ್ವಜನಿಕ ಸಭೆ
	ಮಧ್ಯಾಹ್ನ 2 ಗಂಟೆಗೆ	ಸಕಲೇಶಪುರ - ಸಾರ್ವಜನಿಕ ಸಭೆ
	ಸಂಜೆ 4ಕ್ಕೆ	ಬಾಳ್ಳುಪೇಟೆ - ಸಾರ್ವಜನಿಕ ಸಭೆ
	ಸಂಜೆ 6ಕ್ಕೆ	ಹಾಸನ - ತಂಗುವುದು.
15.12.2008, ಭಾನುವಾರ	ಬೆಳಗ್ಗೆ 11 ಕ್ಕೆ	ಹಾಸನ ಸಾರ್ವಜನಿಕ ಸಭೆ
	ಸಂಜೆ 4ಕ್ಕೆ	ಅರಸೀಕೆರೆ - ಸಾರ್ವಜನಿಕ ಸಭೆ
	ಸಂಜೆ 6ಕ್ಕೆ	ತಿಪಟೂರು ತಂಗುವುದು
16.12.2008, ಸೋಮವಾರ	ಬೆಳಗ್ಗೆ 10-30ಕ್ಕೆ	ತಿಪಟೂರು ಸಾರ್ವಜನಿಕ ಸಭೆ
	ಮಧ್ಯಾಹ್ನ 1-00 ಕ್ಕೆ	ತುರುವೆಕೆರೆ ಸಾರ್ವಜನಿಕ ಸಭೆ
	ಸಂಜೆ 4-00 ಕ್ಕೆ	ತುಮಕೂರು ಸಾರ್ವಜನಿಕ ಸಭೆ
	ಸಂಜೆ 6-00 ಕ್ಕೆ	ಕುಣಿಗಲ್ ಸಾರ್ವಜನಿಕ ಸಭೆ
17.12.2008, ಮಂಗಳವಾರ	ಬೆಳಗ್ಗೆ 11 ಕ್ಕೆ	ನೆಲಮಂಗಲಸಾರ್ವಜನಿಕ ಸಭೆ(ರಾತ್ರಿ ವಸತಿ)
	ಮಧ್ಯಾಹ್ನ 1 ಗಂಟೆಗೆ	ದಾಬಸ್ ಪೇಟೆ, ದೊಡ್ಡ ಬೆಳವಂಗಲ,
	ಸಂಜೆ 4 ಗಂಟೆಗೆ	ದೊಡ್ಡಬಳ್ಳಾಪುರದಲ್ಲಿ ತಂಗುವುದು.
18.12.2008, ಬುಧವಾರ	ಬೆಳಗ್ಗೆ 11 ಕ್ಕೆ	ಗೌರಿಬಿದನೂರು
	ಮಧ್ಯಾಹ್ನ 2 ಗಂಟೆಗೆ	ಮಂಚನಹಳ್ಳಿ
	ಮಧ್ಯಾಹ್ನ 3-30 ಕ್ಕೆ	ಚಿಕ್ಕಬಳ್ಳಾಪುರ
	ಸಂಜೆ	ಗುಡಿಬಂಡೆ, (ರಾತ್ರಿ ವಸತಿ)
19.12.2008 ಗುರುವಾರ	ಬೆಳಗ್ಗೆ 11 ಕ್ಕೆ	ಬಾಗೆಪಲ್ಲಿ ಸಾರ್ವಜನಿಕ ಸಭೆ
	ಮಧ್ಯಾಹ್ನ 2-00 ಕ್ಕೆ	ಮಿಟೇಮರಿ, ಸಾರ್ವಜನಿಕ ಸಭೆ
		ಚಿಬ್ಬೂರಪಲ್ಲಿ ಸಾರ್ವಜನಿಕ ಸಭೆ
	ಸಂಜೆ 5-30 ಕ್ಕೆ	ಚಿಂತಾಮಣಿ (ರಾತ್ರಿ ವಸತಿ)
20.12.2008	ಬೆಳಗ್ಗೆ 11 ಗಂಟೆಗೆ	ಶ್ರೀನಿವಾಸಪುರ
	ಮಧ್ಯಾಹ್ನ 2-00 ಕ್ಕೆ	ಹೊಲಗೊರನಹಳ್ಳ ಕ್ರಾಸ್
	ಸಂಜೆ 4-30 ಕ್ಕೆ	ಕೋಲಾರ (ರಾತ್ರಿ ವಸತಿ)
21.12.2008,	ಬೆಳಗ್ಗೆ 11 ಗಂಟೆಗೆ	ಮಾಲೂರು
	ಮಧ್ಯಾಹ್ನ 2 ಕ್ಕೆ	ಬಂಗಾರಪೇಟೆ
	ಸಂಜೆ 5 ಕ್ಕೆ	ಕೆ.ಜಿ.ಎಫ್ (ರಾತ್ರಿ ವಸತಿ)
22.12.2008	ಬೆಳಗ್ಗೆ 10 ಗಂಟೆಗೆ	ಹೊಸಕೋಟೆ
	ಮಧ್ಯಾಹ್ನ 12 ಕ್ಕೆ	ಕೆ.ಆರ್.ಪುರ್
	ಮಧ್ಯಾಹ್ನ 3-00 ಕ್ಕೆ	ಅತ್ತಿಬೆಲೆ
	ಸಂಜೆ 6 ಗಂಟೆಗೆ	ಬೊಮ್ಮನಹಳ್ಳಿ (ರಾತ್ರಿ ವಸತಿ)
23.12.2008	ಬೆಳಗ್ಗೆ, ರ್‍ಯಾಲಿಗೆ	ಬೆಂಗಳೂರು

ಬಸವ ಕಲ್ಯಾಣದಿಂದ ಬೆಂಗಳೂರಿಗೆ ಜಾಥಾ ಕಾರ್ಯಕ್ರಮ ಪಟ್ಟಿ

ದಿನಾಂಕ/ವಾರ	ಸಮಯ	ಉದ್ಘಾಟನೆ, ಉಳಿಯುವುದು,
		ಬಸವ ಕಲ್ಯಾಣ - ಉದ್ಘಾಟನೆ.
09.12.2008, ಮಂಗಳವಾರ	ಬೆಳಗ್ಗೆ. 11-30	ಕನ್ನಟ್ಟಾ ಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ಭಾಲ್ಕಿ ಸಾರ್ವಜನಿಕ ಸಭೆ (ರಾತ್ರಿ ವಸತಿ)
	ಸಂಜೆ 6-00	
10.12.2008, ಬುಧವಾರ	ಬೆಳಗ್ಗೆ 09-00	ಚಳಕಾಪುರ ಸಭೆ
	ಮಧ್ಯಾಹ್ನ 1-00	ಹುಮ್ನಾಬಾದ್ ಸಾರ್ವಜನಿಕ ಸಭೆ
	ಸಂಜೆ 4-00	ಹಳ್ಳಿಖೇಡ್ (ಬಿ) ಸಾರ್ವಜನಿಕ ಸಭೆ
		ಬೀದರ್ (ರಾತ್ರಿ ವಸತಿ)
11.12.2008, ಗುರುವಾರ	ಬೆಳಗ್ಗೆ 09-00	ಕಾಡವಾದ ಸಾರ್ವಜನಿಕ ಸಭೆ
	ಬೆಳಗ್ಗೆ 11-30	ಕಾಶಂಪುರ ಸಾರ್ವಜನಿಕ ಸಭೆ
	ಸಂಜೆ 4-00	ಬೀದರ್ ನಗರ ಸಾರ್ವಜನಿಕ ಸಭೆ
	ಸಂಜೆ 7-00	ಚಾಂಗ್ಲೇರಾ ಸಾರ್ವಜನಿಕ ಸಭೆ (ರಾತ್ರಿ ವಸತಿ)
12.12.2008, ಶುಕ್ರವಾರ	ಬೆಳಗ್ಗೆ 11-00	ಚಿಂಚೋಳಿ ಸಾರ್ವಜನಿಕ ಸಭೆ
	ಮಧ್ಯಾಹ್ನ 1-00	ಸುಲೇಪೇಟ್ ಸಾರ್ವಜನಿಕ ಸಭೆ
	ಸಂಜೆ 3-30	ಕೊಡ್ಲಿ ಸಾರ್ವಜನಿಕ ಸಭೆ
	ಸಂಜೆ 6-00	ರಟ್ಕಲ್ ಸಾರ್ವಜನಿಕ ಸಭೆ (ರಾತ್ರಿ ವಸತಿ)
13.12.2008, ಶನಿವಾರ	ಬೆಳಗ್ಗೆ 10-00	ಕಮಲಾಪುರ ಸಾರ್ವಜನಿಕ ಸಭೆ
	ಬೆಳಗ್ಗೆ 11-30	ಮಹಾಗಾಂವ ಸಭೆ
	ಮಧ್ಯಾಹ್ನ 2-00	ಗುಲ್ಬರ್ಗಾ ಸಾರ್ವಜನಿಕ ಸಭೆ
	ಸಂಜೆ 5-30	ಜೇವರ್ಗಿ ಸಾರ್ವಜನಿಕ ಸಭೆ
		ಶಹಾಪುರ (ರಾತ್ರಿ ವಸತಿ)
14.12.2008, ಭಾನುವಾರ	ಬೆಳಗ್ಗೆ 11-00	ಶಹಾಪುರ ಸಾರ್ವಜನಿಕ ಸಭೆ
	ಮಧ್ಯಾಹ್ನ 1-00	ಸುರಪುರ ಸಾರ್ವಜನಿಕ ಸಭೆ
	ಸಂಜೆ 5-00	ಜಾಲಹಳ್ಳಿ ಸಾರ್ವಜನಿಕ ಸಭೆ (ರಾತ್ರಿ ವಸತಿ)
15.12.2008, ಸೋಮವಾರ	ಬೆಳಗ್ಗೆ 11-00	ದೇವದುರ್ಗ ಸಾರ್ವಜನಿಕ ಸಭೆ
	ಸಂಜೆ 4-00	ಮಸರಕಲ್ ಸಾರ್ವಜನಿಕ ಸಭೆ
	ಸಂಜೆ 6-00	ರಾಯಚೂರು ಸಾರ್ವಜನಿಕ ಸಭೆ (ರಾತ್ರಿ ವಸತಿ)
16.12.2008, ಮಂಗಳವಾರ	ಬೆಳಗ್ಗೆ 10-00	ರಾಯಚೂರು ಪತ್ರಿಕಾಗೋಷ್ಠಿ
	ಮಧ್ಯಾಹ್ನ 1-00	ಹಟ್ಟಿ ಸಾರ್ವಜನಿಕ ಸಭೆ
	ಸಂಜೆ 4-00	ಲಿಂಗಸೂರು ಸಾರ್ವಜನಿಕ ಸಭೆ
	ಸಂಜೆ 7-00	ತಾವರಗೆರೆ ಸಾರ್ವಜನಿಕ ಸಭೆ (ರಾತ್ರಿ ವಸತಿ)
17.12.2008, ಬುಧವಾರ	ಬೆಳಗ್ಗೆ 11-00	ಕುಷ್ಟಗಿ ಸಾರ್ವಜನಿಕ ಸಭೆ
	ಮಧ್ಯಾಹ್ನ 1-00	ಕೊಪ್ಪಳ ಸಾರ್ವಜನಿಕ ಸಭೆ
	ಸಂಜೆ 4-00	ಗಂಗಾವತಿ ಸಾರ್ವಜನಿಕ ಸಭೆ
	ಸಂಜೆ 6-30	ಸಿಂಧನೂರು ಸಾರ್ವಜನಿಕ ಸಭೆ (ರಾತ್ರಿ ವಸತಿ)
18.12.2008, ಗುರುವಾರ	ಬೆಳಗ್ಗೆ 11-00	ಸಿರುಗುಪ್ಪ ಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ಕುರುಗೋಡು ಸಾರ್ವಜನಿಕ ಸಭೆ
	ಸಂಜೆ 5-30	ಹೊಸಪೇಟೆ ಸಾರ್ವಜನಿಕ ಸಭೆ (ರಾತ್ರಿ ವಸತಿ)
19.12.2008, ಶುಕ್ರವಾರ	ಬೆಳಗ್ಗೆ 11-00	ಹಗರಿಬೊಮ್ಮನಹಳ್ಳಿ ಸಾರ್ವಜನಿಕ ಸಭೆ
	ಸಂಜೆ 5-00	ಹರಪನಹಳ್ಳಿ ಸಾರ್ವಜನಿಕ ಸಭೆ (ರಾತ್ರಿ ವಸತಿ)
20.12.2008, ಶನಿವಾರ	ಬೆಳಗ್ಗೆ 9-30	ದಾವಣಗೆರೆ ಪತ್ರಿಕಾಗೋಷ್ಠಿ
	ಬೆಳಗ್ಗೆ 10-30	ದಾವಣಗೆರೆ ಸಾರ್ವಜನಿಕ ಸಭೆ
	ಮಧ್ಯಾಹ್ನ 1-00	ಚಿತ್ರದುರ್ಗ ಸಾರ್ವಜನಿಕ ಸಭೆ
	ಸಂಜೆ 4-00	ಚಳ್ಳಕೆರೆ ಸಾರ್ವಜನಿಕ ಸಭೆ (ರಾತ್ರಿ ವಸತಿ)
21.12.2008, ಭಾನುವಾರ	ಬೆಳಗ್ಗೆ 10-00	ಪಾವಗಡ ಸಾರ್ವಜನಿಕ ಸಭೆ
	ಮಧ್ಯಾಹ್ನ 2-30	ಮಧುಗಿರಿ ಸಾರ್ವಜನಿಕ ಸಭೆ
	ಸಂಜೆ 5-00	ಕೊರಟಗೆರೆ ಸಾರ್ವಜನಿಕ ಸಭೆ
		ಬೆಂಗಳೂರು (ರಾತ್ರಿ ವಸತಿ)
22.12.2008, ಸೋಮವಾರ		(ಬೆಂಗಳೂರು ಜಿಲ್ಲೆ)
23.12.2008	ರ್‍ಯಾಲಿಯತ್ತ	

ಪುಟ 15ಕ್ಕೆ

ವಿಧಾನಸಭಾ ಚುನಾವಣೆ

ಜಮ್ಮು - ಕಾಶ್ಮೀರ

ಜಮ್ಮು-ಕಾಶ್ಮೀರ ರಾಜ್ಯದ ಚುನಾವಣೆ ಸಾಧಾರಣ ಒಂದು ರಾಜ್ಯದ ಚುನಾವಣೆಯಂತಲ್ಲ. ಅದಕ್ಕೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಹತ್ವವಿದೆ.

ಜಮ್ಮು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುತ್ತಿವೆ. 5 ಹಂತಗಳ ಚುನಾವಣೆಯಲ್ಲಿ ಈಗಾಗಲೇ 2 ಹಂತಗಳ ಚುನಾವಣೆಗಳು ಮುಗಿದಿವೆ. 3 ಹಂತ ಬಾಕಿ ಇವೆ.

ಜಮ್ಮು ಕಾಶ್ಮೀರದ ಸ್ಥಿತಿ ಬಹಳ ಸಂಕೀರ್ಣವಾಗಿದೆ, ಗಂಭೀರವಾಗಿದೆ. ಒಂದೆಡೆ ವಿವೇಕ ಹೀನ ಭಯೋತ್ಪಾದಕ ಕೃತ್ಯಗಳು. ಮತ್ತೊಂದೆಡೆ ಭಯೋತ್ಪಾದನೆ ನಿಗ್ರಹದ ಹೆಸರಿನಲ್ಲಿ ಗಂಭೀರ ಮಾನವ ಹಕ್ಕುಗಳ ಉಲ್ಲಂಘನೆ. ಇಡೀ ರಾಜ್ಯ ಈ ತಿಕ್ಕಾಟದಲ್ಲಿ ನಲುಗಿದೆ:

ಅಮರನಾಥ ಭೂ ಮಂಜೂರು ವಿವಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೋಮು ವಿಭಜನೆಯನ್ನು ತೀವ್ರಗೊಳಿಸಿ, ಭಾವೋದ್ರೇಕ ಸೃಷ್ಟಿಸಿದ ಆತಂಕಕಾರಿ ಬೆಳವಣಿಗೆಗಳ ಹಿಂದೆಯೇ ಈ ಚುನಾವಣೆ ನಡೆಯುತ್ತಿದೆ.

ಜಮ್ಮು-ಕಾಶ್ಮೀರ ಸಮಸ್ಯೆ ಕೇವಲ ಗಡಿ ವಿವಾದವಲ್ಲ. ಅದು ಕೇವಲ ಒಂದು ಕಾನೂನು ಸುವ್ಯವಸ್ಥೆಯ ಪ್ರಶ್ನೆಯಲ್ಲ. ಈ ಸಮಸ್ಯೆಯ ಹಿಂದೆ ಒಂದು ಐತಿಹಾಸಿಕ ಹಿನ್ನಲೆ ಇದೆ. ಈ ಐತಿಹಾಸಿಕ ಹಿನ್ನೆಲೆಯನ್ನು ಸರಿಯಾಗಿ ಅರ್ಥೈಸಿಕೊಂಡು ಜನರ ಭಾವನೆಗಳ ತೀವ್ರತೆಯನ್ನು ಪರಿಗಣಿಸಿ ಅದಕ್ಕೆ ಸ್ಪಂದಿಸುವ ರಾಜಕೀಯ ಪರಿಹಾರವನ್ನು ರೂಪಿಸುವುದು ಅಗತ್ಯವಾಗಿದೆ.

ಭಾರತ-ಪಾಕಿಸ್ತಾನಗಳ ನಡುವೆ ಸಂಬಂಧ ಸುಧಾರಣೆ, ಈ ನಿಟ್ಟಿನಲ್ಲಿ ಎರಡೂ ಕಡೆಗಳಿಂದ ಪ್ರಾಮಾಣಿಕ ಪ್ರಯತ್ನ, ಜಮ್ಮು ಕಾಶ್ಮೀರದ ವಿಚಾರದಲ್ಲಿ ಸಂಬಂಧಿಸಿದ ಎಲ್ಲರನ್ನೂ ಒಳಗೊಳ್ಳುವ ಮುಕ್ತ ಚರ್ಚೆಯನ್ನು ನಡೆಸುವುದು ಮತ್ತು ಅದನ್ನು ಅರ್ಥಪೂರ್ಣವಾದ ರೀತಿಯಲ್ಲಿ ಹಾಗೂ ಫಲಿತಾಂಶ ಸಿಗುವಂತಹ ರೀತಿಯಲ್ಲಿ ನಿರಂತರಗೊಳಿಸುವುದು ಈ ಸಂದರ್ಭದ ಅಗತ್ಯವಾಗಿದೆ.

ಪಾಕಿಸ್ತಾನ-ಭಾರತಗಳ ನಡುವೆ ಮಾತ್ರವಲ್ಲ ಇಡೀ ಉಪಖಂಡದಲ್ಲಿ ಶಾಂತಿ ಸ್ಥಾಪನೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾದ ಜಮ್ಮು ಕಾಶ್ಮೀರ ಸಮಸ್ಯೆ ಬಗೆಹರಿಸುವಲ್ಲಿ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆ ಅತ್ಯಂತ ಆದ್ಯತೆಯ ವಿಷಯವಾಗಬೇಕಿದೆ.

ಜಮ್ಮು-ಕಾಶ್ಮೀರ ರಾಜ್ಯವು ಭಾರತ, ಪಾಕಿಸ್ತಾನಗಳ ನಡುವೆ ಎರಡು ತುಂಡುಗಳಾಗಿ ಇಲ್ಲಿನ ಜನತೆಯ ಜನಜೀವನ, ಕೌಟುಂಬಿಕ ಹಾಗೂ ಸ್ನೇಹ ಸಂಬಂಧಗಳನ್ನು ವಿಭಜಿಸಿದೆ. ಕರಳು ಬಳ್ಳಿಯನ್ನು ಬೇರ್ಪಡಿಸಿದೆ. ಈ ಗಡಿಯಲ್ಲಿ ವ್ಯಾಪಾರ ವಹಿವಾಟುಗಳಿಗೆ ಅವಕಾಶ ನೀಡುವ ಪ್ರಯತ್ನ ಒಂದು ಸಕರಾತ್ಮಕ ಯತ್ನವಾಗಿದ್ದು, ಅದನ್ನು ಮುಂದುವರೆಸಿ ಗಡಿಗಳ ಮಿತಿಯನ್ನು ಮೀರಿ ಎರಡೂ ಭಾಗಗಳ ನಡುವೆ, ವ್ಯಾಪಾರ, ವಾಣಿಜ್ಯ, ಸ್ನೇಹ ಸೌಹಾರ್ದ ಸಂಬಂಧಗಳ ಬೆಸುಗೆ ಅವಕಾಶ ಆಗಬೇಕಿದೆ.

ಮದ್ದು ಗುಂಡುಗಳ ಸಿಡಿತ ಗ್ರನೇಟ್, ಬಾಂಬ್‌ಗಳ ದಾಳಿಗಳ ನಡುವೆ ಜಮ್ಮು ಕಾಶ್ಮೀರದ ಪ್ರವಾಸೋದ್ಯಮ, ಕೃಷಿ, ಕೈಗಾರಿಕೆಗಳು ನಲುಗಿವೆ. ಅದಕ್ಕೆ ಪುನಶ್ಚೇತನ ಬೇಕಿದೆ.

ಶಿಕ್ಷಣ, ಆರೋಗ್ಯ, ಉದ್ಯೋಗ, ಸೃಷ್ಟಿ ಯೋಜನೆಗಳು, ಆದ್ಯತೆ ಪಡೆದುಕೊಳ್ಳಬೇಕಿದೆ. ಸಾಮಾನ್ಯ ಜನರ ಮೇಲೆ ಭದ್ರತಾ ಪಡೆಗಳ ಅತಿರೇಕಗಳನ್ನು ತಡೆಯುವುದು, ಜನರ ದೈನಂದಿನ ಜೀವನದಲ್ಲಿ ಬಾರಿ ಕಿರಿಕಿರಿಯನ್ನುಂಟು ಮಾಡುವ ಪ್ರಮಾಣದ ಭದ್ರತಾ ಪಡೆಗಳ ದಟ್ಟಣೆಯನ್ನು ಕಡಿತಗೊಳಿಸುವುದು, ಮಾನವ ಹಕ್ಕುಗಳ ಆಯೋಗದ ವರದಿಗಳಿಗೆ, ಶಿಫಾರಸ್ಸುಗಳಿಗೆ ಬೆಲೆಯೇ ಇಲ್ಲದ ಪರಿಸ್ಥಿತಿ ನಿವಾರಿಸಿ ಅವುಗಳಿಗೆ ಮಾನ್ಯತೆ ಸಿಗುವಂತೆ ಮಾಡುವುದು ಹೀಗೆ ಎಷ್ಟೋ ತುರ್ತು ಕ್ರಮಗಳು ಅಗತ್ಯವಾಗಿವೆ. ಜಮ್ಮು ಕಾಶ್ಮೀರ ಹಿಂಸಾಚಾರದಿಂದ ರಾಜ್ಯ ತೊರೆದವರಿಗೆ ಪುನರ್ ವಸತಿ, ರಾಜ್ಯದಲ್ಲಿ ಕಾರ್ಮಿಕರಿಗೆ ಸಮರ್ಪಕ ಕಾರ್ಮಿಕ ಕಾನೂನು, ಕನಿಷ್ಠ ಕೂಲಿಯ ಜಾರಿ



ಸೇರಿದಂತೆ ಹಲವು ಪ್ರಶ್ನೆಗಳು ಪರಿಹಾರವಾಗಬೇಕಿದೆ.

ಇಂತಹ ಹಲವು ಪ್ರಶ್ನೆಗಳ ಆಧಾರದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ಕಳೆದ ವಿಧಾನಸಭೆಯಲ್ಲಿ ಚುನಾಯಿತರಾಗಿದ್ದ ಇಬ್ಬರು ಸಿಪಿಐ(ಎಂ) ಶಾಸಕರು ಇದೇ ನಿಲುವುಗಳ ಆಧಾರದಲ್ಲಿ ಶಾಸನ ಸಭೆಯ ಒಳಗೆ, ಹೊರಗೆ ಸತತವಾಗಿ ಹೋರಾಟ ನಡೆಸಿದ್ದಾರೆ. ಪ್ರಸಕ್ತ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಜಮ್ಮು ವಿಭಾಗದಲ್ಲಿ ಒಂದು ಸ್ಥಾನ ಸೇರಿದಂತೆ ಒಟ್ಟು 8 ಸ್ಥಾನಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ.

ದಾವಣಗೆರೆಯಲ್ಲಿ ಸೌಹಾರ್ದ ಕರ್ನಾಟಕ ರಾಜ್ಯೋತ್ಸವ

ರಾಜಕೀಯ ಲಾಭಕ್ಕೆ ಅಲ್ಪಸಂಖ್ಯಾತರ ಮೇಲೆ ಧಾಳಿ - ಶ್ರೀರಾಮರೆಡ್ಡಿ

ಬಲವಂತದ ಮತಾಂತರ ಎಂಬ ಗುಮ್ಮನನ್ನು ಮುಂದಿಟ್ಟುಕೊಂಡು ಚರ್ಚ್‌ಗಳ ಮೇಲೆ ಧಾಳಿ ನಡೆಸಲಾಗುತ್ತಿದೆ. ಮುಂದಿನ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ರಾಜಕೀಯ ಲಾಭಕ್ಕಾಗಿ ವ್ಯವಸ್ಥಿತ ಧಾಳಿ ನಡೆಸಲಾಗಿದೆ. ಕರ್ನಾಟಕದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾದರೂ ಯಾವುದೇ ವಚನವನ್ನು ಪಾಲಿಸಿಲ್ಲ. ಉಚಿತ ವಿದ್ಯುತ್ ಪಡಿತರ ಚೀಟಿ, ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ, ನಿರುದ್ಯೋಗ ಭತ್ಯೆ ಇವುಗಳನ್ನು ಕೊಡದ ವಚನಭ್ರಷ್ಟ ಮತ್ತು ಕರ್ನಾಟಕ ಕಂಡ ಅತ್ಯಂತ ಭ್ರಷ್ಟ ಸರ್ಕಾರ ಬಿಜೆಪಿ ಸರ್ಕಾರ. ಈ ಸರ್ಕಾರವನ್ನು ನಾಗಪುರದಿಂದ ಮತ್ತು ಕೇಶವ ಶಿಲ್ಪದಿಂದ ನಡೆಸಲಾಗುತ್ತಿದೆ. ಇಂತಹ ಅಪಾಯಕಾರಿ ಫ್ಯಾಸಿಸ್ಟಿಕ್ ಮನೋಭಾವದ ಸರ್ಕಾರದ ವಿರುದ್ಧ ಜನತೆ ಒಗ್ಗಟ್ಟಾಗಿ ಹೋರಾಡಬೇಕು. ಮತಾಂಧತೆಯನ್ನು ಯಾವುದೇ ರಾಜಿ ಇಲ್ಲದೆ ಪ್ರತಿಯೊಬ್ಬರೂ ವಿರೋಧಿಸಬೇಕು. ಇಲ್ಲದಿದ್ದಲ್ಲಿ 'ಸರ್ವ ಜನಾಂಗದ ಶಾಂತಿಯ ತೋಟ'ವಾದ ಕರ್ನಾಟಕಕ್ಕೆ ಮತ್ತು ದೇಶಕ್ಕೆ ಉಳಿಗಾಲವಿಲ್ಲ. ಇದೇ ಸಮಯದಲ್ಲಿ ಜಾತ್ಯಾತೀತ ಮುಖವಾಡದ ಕಾಂಗ್ರೆಸ್ ಕೂಡಾ ಹಿಂದೂಗಳ ಮತ ಕೈತಪ್ಪುವ ಭಯದಿಂದ ಕೋಮುವಾದದ ವಿರುದ್ಧ ಧ್ವನಿಯನ್ನು ಎತ್ತುತ್ತಿಲ್ಲವೆಂದು ದಾವಣಗೆರೆಯಲ್ಲಿ ಸೌಹಾರ್ದ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 'ಕೋಮುವಾದ ಮತ್ತು ಭಯೋತ್ಪಾದನೆ' ಬಗ್ಗೆ ನಡೆದ, ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಸಿ.ಪಿ.(ಎಂ) ಪಕ್ಷದ ಬಾಗೇಪಲ್ಲಿಯ ಮಾಜಿ ಶಾಸಕರಾದ ಶ್ರೀರಾಮರೆಡ್ಡಿಯವರು ತಿಳಿಸಿದರು.



ಜಿ.ವಿ.ಶ್ರೀರಾಮರೆಡ್ಡಿಯವರಿಂದ ಸೌಹಾರ್ದ ರಾಜ್ಯೋತ್ಸವ ಉದ್ಘಾಟನೆ.

ಎಸ್.ಎಚ್.ಪಟೇಲ್ ನಿವೃತ್ತ ಪ್ರಾಂಶುಪಾಲರು ಕಾನೂನು ಕಾಲೇಜು ದಾವಣಗೆರೆ ಇವರು ಮಾತನಾಡುತ್ತಾ ಬಿಜೆಪಿಗೆ ಈಗ ಮತಾಂತರಕ್ಕಿಂತಲೂ ಮತಗಳ ಚಿಂತೆ ಆಗಿದೆ. ಬಿಜೆಪಿ ವಿರುದ್ಧ ಗೆದ್ದವರು ಮತ್ತೆ ಬಿಜೆಪಿಗೆ ಸೇರಿರುವುದರ ಅರ್ಥವೇನು ಎಂದು ಪ್ರಶ್ನಿಸಿದರಲ್ಲದೆ, ಎಲ್ಲರನ್ನು ಸಮಾನತೆಯಿಂದ ನೋಡಬೇಕಾಗಿರುವುದು ಎಲ್ಲ ಸರ್ಕಾರಗಳ ಮತ್ತು ಪಕ್ಷಗಳ ಕರ್ತವ್ಯ ಎಂದರು.

ಸಿ.ಐ.ಟಿ.ಯು. ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕೆ.ಎಲ್.ಭಟ್, ಡಿವೈಎಫ್ಐ.ನ ರಾಜ್ಯ ಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್, ಗ್ರಾಮ ಪಂಚಾಯತ್ ನೌಕರರ ಸಂಘಟನೆಯ ಉಪಾಧ್ಯಕ್ಷ ಆರ್.ಎಸ್.ಬಸವರಾಜ್ ಮೊದಲಾದವರು ಸಭೆಯಲ್ಲಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಮುದಾಯದ ರಾಜ್ಯ ಮುಖಂಡರಾದ ಪ್ರೊ. ಡಿ.ಬಿ.ಬಡಿಗೇರ ವಹಿಸಿದ್ದರು. ಬಿಜಿವಿಎಸ್‌ನ ಜಿಲ್ಲಾ ಕಾರ್ಯದರ್ಶಿ ಚಂದ್ರಪ್ಪ ಕಾರ್ಯಕ್ರಮ ನಿರೂಪಿಸಿದರು. ಎಸ್.ಎಫ್.ಐ.ನ ಶೆಟ್ಟಿ ನಾಯ್ಕ ಎಸ್‌ಎಫ್ಐ, ಡಿವೈಎಫ್ಐ, ಸಮುದಾಯ ಕೂಲಿಕಾರರ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ದೇವದಾಸಿ ಮಹಿಳಾ ವಿಮೋಚನಾ ಸಂಘ, ಸಿ.ಐ.ಟಿ.ಯು. ಗ್ರಾಮ ಪಂಚಾಯತ್ ನೌಕರರ ಸಂಘ, ವಿಮಾ ನೌಕರರ ಸಂಘಟನೆಗಳು ಈ ವಿಚಾರ ಸಂಕಿರಣವನ್ನು ನಡೆಸಿದ್ದವು. ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು.



ಒಂದೆಡೆ ತನ್ನ ಅತಿಯಾದ ದರ ಏರಿಕೆಯ ಮೂಲಕ ಸಾಮಾನ್ಯ ಪ್ರಯಾಣಿಕರನ್ನು ಶೋಷಿಸುತ್ತಿರುವ ಕೆ.ಎಸ್.ಆರ್.ಟಿ.ಸಿ. ಇನ್ನೊಂದೆಡೆ ಸಂಸ್ಥೆಯನ್ನು ಬೆವರು-ರಕ್ತ ಸುರಿಸಿ ಕಟ್ಟಿ ಬೆಳೆಸಿದ ಕಾರ್ಮಿಕರನ್ನು ಬರ್ಬರವಾಗಿ ಶೋಷಿಸುತ್ತಿದೆ. ಖಾಸಗೀಕರಣದ ವಿಷಗಾಳಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಸುತ್ತುವರಿದಿದೆ. ಈ ವಿಷಗಾಳಿ ಆವರಿಸುವ ಮೊದಲೇ ಎಚ್ಚೆತ್ತು ಕಾರ್ಮಿಕ ವರ್ಗ ಸಮರಧೀರ ಹೋರಾಟಕ್ಕೆ ಸಜ್ಜಾಗಿದೆ ಎನ್ನುವುದೊಂದು ಸಂತಸದ ಸಮಾಚಾರ

ಜನರನ್ನು ಸುಲಿಯುತ್ತಿರುವ ಸಾರಿಗೆ ಸಂಸ್ಥೆ

ಲಾಭಕ್ಕೆ ಕಾರ್ಮಿಕರ ನಿರ್ದಯ ಶೋಷಣೆಯೇ ಆಧಾರ

ಲಿಂಗರಾಜು

ಬಡಜನರ ಸಾರಿಗೆ ಎಂದೇ ಬಿಂಬಿತವಾಗಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಾಮಾನ್ಯರಿಂದ ದಿನೇ ದಿನೇ ದೂರವಾಗುತ್ತಿರುವುದು ಆತಂಕದ ವಿಚಾರ. ಸಾಮಾನ್ಯ ಜನರೊಂದಿಗಿನ ಕೆಂಪು ಬಸ್ ಭಾವನಾತ್ಮಕ ಸಂಬಂಧಕ್ಕೆ ಎಳ್ಳುನೀರು ಬಿಡುವ ಕಾಲ ಹತ್ತಿರವೆನಿಸುತ್ತದೆ.

ಖಾಸಗೀಕರಣದ ವಿಷಗಾಳಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಸುತ್ತುವರಿದಿದೆ. ಈ ವಿಷಗಾಳಿ ಆವರಿಸುವ ಮೊದಲೇ ಎಚ್ಚೆತ್ತು ಕಾರ್ಮಿಕ ವರ್ಗ ಸಮರಧೀರ ಹೋರಾಟಕ್ಕೆ ಸಜ್ಜಾಗಿದೆ.

ಒಂದೆಡೆ ತನ್ನ ಅತಿಯಾದ ದರ ಏರಿಕೆಯ ಮೂಲಕ ಸಾಮಾನ್ಯ ಪ್ರಯಾಣಿಕರನ್ನು ಶೋಷಿಸುತ್ತಿರುವ ಕೆ.ಎಸ್.ಆರ್.ಟಿ.ಸಿ. ಇನ್ನೊಂದೆಡೆ ಸಂಸ್ಥೆಯನ್ನು ಬೆವರು-ರಕ್ತ ಸುರಿಸಿ ಕಟ್ಟಿ ಬೆಳೆಸಿದ ಕಾರ್ಮಿಕರನ್ನು ಬರ್ಬರವಾಗಿ ಶೋಷಿಸುತ್ತಿದೆ.

1959 ರಲ್ಲಿ ಜನರನ್ನು ಹೊತ್ತೊಯ್ಯುವ ಸದುದ್ದೇಶದೊಂದಿಗೆ ಹುಟ್ಟಿದ ಸರ್ಕಾರದ ಸ್ವಾಯತ್ತ ಸಂಸ್ಥೆ "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ" ಬಡವರ ವಿಮಾನವಾಗಿ ಕಂಡಿದ್ದರಲ್ಲಿ ಆಶ್ಚರ್ಯವಿರಲಿಲ್ಲ. ಆದರೆ 1997 ರಲ್ಲಿ ಸಂಸ್ಥೆಯನ್ನು 4 ವಿಭಾಗಗಳಾಗಿ ವಿಂಗಸಿಡುವ ಮೂಲಕ ಖಾಸಗೀಕರಣ ಸೂಚನೆಯನ್ನು ನೀಡಲಾಯಿತು.




1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
3. ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
4. ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಈ ವಿಂಗಡನೆಯ ಉದ್ದೇಶ ಹೇಳುವಾಗ ವಿಭಜನೆಯಿಂದಾಗಿ ಸಾಕಷ್ಟು ಅಭಿವೃದ್ಧಿ ಸಾಧಿಸುವುದು, ಗುಣಮಟ್ಟ ಹೆಚ್ಚಿಸುವುದು. ಮುಖ್ಯವಾಗಿ ನಗರಗಳು ಅಭಿವೃದ್ಧಿಯಾಗುತ್ತವೆ ಎಂಬ ಕಾರಣಗಳನ್ನು ನೀಡಲಾಯಿತು. ಅಂದರೆ ಕಾರ್ಮಿಕ ಸಂಘ ಸರ್ಕಾರದ ಈ ಧೋರಣೆಯನ್ನು ಬಲವಾಗಿ ವಿರೋಧಿಸಿತ್ತು. ಇದು ಖಾಸಗೀಕರಣ ಮಾಡುವ ಹುನ್ನಾರವಾಗಿದೆ ಎಂದು ಟೀಕಿಸಿತ್ತು.

ಕಾರ್ಮಿಕ ಸಂಘದ ಶಂಕೆ ಇಂದು ನಿಜವಾಗತೊಡಗಿದೆ. ಸಂಸ್ಥೆಯನ್ನು ವಿಭಜನೆಗೊಳಿಸಿದರೆ ಅಭಿವೃದ್ಧಿಯಾಗುತ್ತದೆ ಎಂಬ ಸರ್ಕಾರದ ಸಮಜಾಯಿಸಿ ಸುಳ್ಳು ಎಂಬುದು ಸಾಬೀತಾಗಿದೆ. ಕಳೆದ 11 ವರ್ಷಗಳಿಂದಲೂ ವಾಯುವ್ಯ ಹಾಗೂ ಈಶಾನ್ಯ ಕ.ರಾ.ರಸ್ತೆ ಸಾರಿಗೆ ನಿಗಮಗಳು ತೀವ್ರ ನಷ್ಟದಲ್ಲಿ ನಡೆಯುತ್ತಿವೆ. ಆದರೆ ಸರ್ಕಾರ ಈ ಬಗ್ಗೆ ಕನಿಷ್ಠ ಕಾಳಜಿಯನ್ನು ತೋರಿಸಿಲ್ಲ. ಮಾತ್ರವಲ್ಲ ಉತ್ತಮಪಡಿಸುವ ಯಾವುದೇ ಕ್ರಮಗಳನ್ನೂ ಸೂಚಿಸಿಲ್ಲ. ಅಂದರೆ ಸರ್ಕಾರದ ಈ ಧೋರಣೆ ಖಾಸಗೀಕರಿಸುವ ಪೂರ್ವ ತಯಾರಿಯಲ್ಲದೆ ಮತ್ತೇನು ಇಲ್ಲ. ಏಕೆಂದರೆ ಈಗಾಗಲೇ ಹುಬ್ಬಳ್ಳಿ ಮಹಾನಗರದಲ್ಲಿ ಬೇಂದ್ರೆ ಸಾರಿಗೆ(ಖಾಸಗಿ)ಗೆ ತೀವ್ರ ವಿರೋಧದ ನಡುವೆಯೂ ಅವಕಾಶ ಮಾಡಿಕೊಟ್ಟಿರುವುದು ಮೇಲಿನ ಹೇಳಿಕೆಯನ್ನು ಪುಷ್ಟೀಕರಿಸುತ್ತದೆ.

ಖಾಸಗೀಕರಣದ ಈ ಪೂರ್ವ ತಯಾರಿ ಕ್ರಮದ ಧೋರಣೆಯನ್ನು ಸಿಐಟಿಯು ಸೇರಿದಂತೆ ಹೆಚ್.ಎಂ.ಎಸ್ ಇತರೆ ಸಂಘಗಳು ತೀವ್ರವಾಗಿ ವಿರೋಧಿಸಿ ಕಾರ್ಮಿಕರ ಐಕ್ಯ ಹೋರಾಟಕ್ಕೆ ಕರೆ ನೀಡಿರುವುದು ಒಳ್ಳೆಯ ಬೆಳವಣಿಗೆ ಎಂಬುದನ್ನು ಗುರ್ತಿಸಬಹುದು.



ನಷ್ಟದಲ್ಲಿದ್ದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಲಾಭ ಗಳಿಸುವ ಹಂತಕ್ಕೆ ತಂದಿದ್ದೇವೆ ಎಂದು ಸರ್ಕಾರ ಹೆಮ್ಮೆಯಿಂದ ಬಾರಿ ಸಾಧನೆ ಮಾಡಿದ ರೀತಿಯಲ್ಲಿ ಹೇಳಿಕೆ ನೀಡುತ್ತಿರುವುದು ಹಾಸ್ಯಾಸ್ಪದ ಎನಿಸುತ್ತದೆ. ಏಕೆಂದರೆ ನಿಗಮದ ಒಳಗಿನ ಅಧಿಕಾರಿಗಳು ಹಾಗೂ ರಾಜಕಾರಣಿಗಳ ವ್ಯಾಪಕ ಭ್ರಷ್ಟಾಚಾರ ನಡೆದಿರುವ ಮಧ್ಯೆಯೇ ಲಾಭವನ್ನು ತೋರಿಸುವ ಅದರ ಶ್ರಮವನ್ನು ಮೆಚ್ಚಲೇಬೇಕು......

ಈ ಲಾಭದ ಹಿಂದಿರುವ ಗುಟ್ಟೇನು......?

ಒಂದೇ ಮಾತಿನಲ್ಲಿ ಹೇಳುವುದಾದರೆ ಕಾರ್ಮಿಕರ ಬರ್ಬರ ಶೋಷಣೆಯೇ ಲಾಭದ ಹಿಂದಿರುವ ಗುಟ್ಟು ಎಂಬುದು ಯಾವುದೇ ಅನುಮಾನವಿಲ್ಲದ ಬಹಿರಂಗ ಸತ್ಯ. ಏಕೆಂದರೆ ಇಲ್ಲಿವೆ ಲಾಭದ ಗುಟ್ಟಿನ ಹಲವು ಮುಖಗಳು.

1. ಕಳೆದ ವರ್ಷಗಳಿಂದ ಎಕ್ಸ್‌ರೇಷಿಯಾ (ಸಂಸ್ಥೆಯ ಲಾಭದ ಮೇಲಿನ ಕಾರ್ಮಿಕರ ಪಾಲು) ಹಣವನ್ನು ಕಾರ್ಮಿಕರಿಗೆ ನೀಡಿಲ್ಲ.
2. ಅನಿಯಮಿತ ಹೆಚ್ಚುವರಿ ರಜೆಗಳಿಕೆ ಹಣವನ್ನು ನಿಲ್ಲಿಸಲಾಗಿದೆ.
3. ಹಣವಿಲ್ಲ ಎಂಬುದು ಸರ್ಕಾರದ ಹೇಳಿಕೆ (ಲಾಭ ಎಲ್ಲಿಂದ ಬಂತು)
4. ನಿವೃತ್ತ ಕಾರ್ಮಿಕರಿಗೆ ಕಳೆದ ಎರಡು ವರ್ಷಗಳಿಂದ ಭವಿಷ್ಯನಿಧಿ ಹಣ ಹಾಗೂ ಗ್ರ್ಯಾಚ್ಯುಯಿಟಿ ಹಣವನ್ನು ನೀಡಿಲ್ಲ. ಮಾತ್ರವಲ್ಲ ವಿನಾಕಾರಣ ಅಲೆಸುವುದು ನಡೆದಿದೆ.
5. ತರಬೇತಿ ಹೆಸರಿನಲ್ಲಿ ಕಳೆದ 5 ವರ್ಷಗಳಲ್ಲಿ 30 ಸಾವಿರ ತರಬೇತುದಾರರು (ನೌಕರರಲ್ಲ) ತುಂಬಿಕೊಳ್ಳಲಾಗಿದೆ ಮತ್ತು ಖಾಯಂ ನೌಕರರನ್ನು ಸಕಾರಣವಿಲ್ಲದೆ ಕೆಲಸದಿಂದ ವಜಾ ಮಾಡುವುದು ನಡೆದಿದೆ.
6. ಈ ತರಬೇತುದಾರರಿಗೆ ತಿಂಗಳಿಗೆ 2,500 ರೂ ಮಾತ್ರ ವೇತನ. ಇದರಿಂದಾಗಿ 120 ಕೋಟಿ ಹಣವನ್ನು ಉಳಿಸಿದ್ದಾರೆ.

ಪ್ರಯಾಣಿಕರ ಸುಲಿಗೆ

ದೇಶದ ಯಾವುದೇ ರಾಜ್ಯಗಳಲ್ಲಿನ ಸಾರಿಗೆ ಸಂಸ್ಥೆ ದರಗಳಿಗೆ ಹೋಲಿಸಿದಲ್ಲಿ ಅತಿ ಹೆಚ್ಚು ದರಗಳಿರುವುದು ಕರ್ನಾಟಕದಲ್ಲಿ. ಪ್ರಯಾಣಿಕರ ಸುಖ ಪ್ರಯಾಣವೇ ನಮ್ಮ ಗುರಿ ಎನ್ನುವ ಸಂಸ್ಥೆಯ ಘೋಷಣೆ ಬೋಗಸ್ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.



ಉದಾಹರಣೆಗೆ ನಮ್ಮದೇ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ದರಗಳಲ್ಲಿರುವ ವ್ಯತ್ಯಾಸ ಹೀಗಿದೆ ನೋಡಿ :

ಬೆಂಗಳೂರಿನಿಂದ ವೆಲ್ಲೂರು (ತಮಿಳುನಾಡು) - 220 ಕಿ.ಮೀ.ಗೆ 75 ರೂ.



[illegible] ದೂರವಾಗುತ್ತಿರುವ ಬೆಂಗಳೂರು ನಗರ ಸಾರಿಗೆ

ಬೆಂಗಳೂರಿನಿಂದ ಮೈಸೂರಿಗೆ 140 ಕಿ.ಮೀ- 80 ರೂ.

ಮಹಾನಗರ ಸಾರಿಗೆ ದೆಹಲಿ-ಬೆಂಗಳೂರು ನಡುವಿನ ವ್ಯತ್ಯಾಸ

- **ದೆಹಲಿ** - 2 ಕಿ.ಮೀ.ಗೆ ರೂ. 2.00
  35 ಕಿ.ಮೀವರೆಗೆ ರೂ.10.00
- **ಬೆಂಗಳೂರು** 1 ಕಿ.ಮೀ.ಗೆ ರೂ.3.00
  2 ಕಿ.ಮೀ.ಗೆ ರೂ.5.00
  15 ಕಿ.ಮೀ.ವರೆಗೆ ಮಾತ್ರ ರೂ.10.00

ಅಲ್ಲದೆ ಪ್ರಯಾಣಿಕರಿಂದ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಫಂಡ್ (ಮೂಲ ಸೌಕರ್ಯಗಳ ಅಭಿವೃದ್ಧಿ ನಿಧಿ) ಎಂದು ಹಣ ವಸೂಲಿ ಮಾಡಲಾಗುತ್ತಿದೆ.

ದರ ವಸೂಲಿ ಹೀಗಿದೆ

ಟಿಕೇಟ್ ದರ ರೂ.20 ರಿಂದ ರೂ.49 ಗೆ ರೂ.1 ವಸೂಲಿ
ರೂ.50 ರಿಂದ ರೂ.99ಗೆ ರೂ.2 ವಸೂಲಿ
ರೂ.100 ಗೆ ಮೇಲ್ಪಟ್ಟು ರೂ.5 ವಸೂಲಿ

ಇದರಿಂದ ದಿನಕ್ಕೆ 2.5 ಕೋಟಿ ರೂ.ಗಳನ್ನು ಸಂಗ್ರಹಿಸಲಾಗುತ್ತದೆ. (ಅಂದರೆ ವಾರ್ಷಿಕ 900 ಕೋಟಿ) ಇದನ್ನು ಪ್ರಯಾಣಿಕರಿಗೆ ನೀಡಿದ ಟಿಕೆಟ್ ದರಗಳಲ್ಲೇ ಸೇರಿಸಲಾಗಿದೆ. ಹೀಗಾಗಿ ಪ್ರಯಾಣಿಕರಿಗೆ ಅರಿವಿಗೆ ಬಾರದಂತೆ ವಸೂಲಿ ಮಾಡಲಾಗುತ್ತದೆ. ಹೀಗಿದೆ ವಸೂಲಿ ವಿಧಾನ....

ಇನ್ನೊಂದೆಡೆ ಶೌಚಾಲಯಗಳ ನಿರ್ವಹಣೆಗೆ ಈ ಹಿಂದೆ ಇದ್ದ ಟೆಂಡರ್ ಪದ್ಧತಿಯನ್ನು ತೆಗೆದುಹಾಕಲಾಗಿದೆ. ಇದರಿಂದ ಮಾಸಿಕ 30 ಸಾವಿರ ರೂ. ಹಣವನ್ನು ಸಂಗ್ರಹಿಸಲಾಗುತ್ತಿತ್ತು. ಆದರೆ ಸದ್ಯ ಸಂಸ್ಥೆಯೇ 30 ಸಾವಿರವನ್ನು ನೀಡಿ ಪ್ರಯಾಣಿಕರಿಂದ ಶೌಚಾಲಯ ಬಳಕೆಗೆ ನೀಡುವ ಹಣವನ್ನು ಸಂಸ್ಥೆ ನೇರವಾಗಿ ಪಡೆಯುತ್ತದೆ. ಅಂದರೆ ಒಂದೆಡೆ ಪ್ರಯಾಣಕರಿಂದ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೆಂದು ಹಣ ಸಂಗ್ರಹಿಸುವುದು ಮತ್ತೊಂದೆಡೆ ಶೌಚಾಲಯ ಬಳಕೆಗೂ ಹಣ ವಸೂಲಿ ಮಾಡುವುದು.

ಮೆಕಾನಿಕ್‌ಗಳ ಯಾತನಾಮಯ ಬದುಕು

ಕಳೆದ ಹಲವಾರು ವರ್ಷಗಳಿಂದ ಮೆಕಾನಿಕ್‌ಗಳ ನೇಮಕಾತಿ ನಡೆದಿಲ್ಲ, ಇನ್ನೊಂದೆಡೆ ಬಸ್‌ಗಳ ಖರೀದಿ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಹೀಗಾಗಿ ಹೆಚ್ಚುವರಿ ಕೆಲಸವನ್ನು ಇರುವ ಮೆಕಾನಿಕ್‌ಗಳ ಮೇಲೆ ಹೊರಿಸಲಾಗಿದೆ.

ನಿಯಮದ ಪ್ರಕಾರ - 1:1.2 ಇರಬೇಕು. ಅಂದರೆ 100 ಬಸ್‌ಗಳಿಗೆ 120 ಮೆಕಾನಿಕ್‌ಗಳು ಇರಬೇಕು

ಆದರೆ ಸದ್ಯ - 100 ಬಸ್‌ಗಳಿಗೆ ಕೇವಲ 40 ಮೆಕಾನಿಕ್‌ಗಳು ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ.

ಅಂದರೆ ಶೇ.40 ಹೆಚ್ಚುವರಿ ಕೆಲಸವನ್ನು ಇರುವ ನೌಕರರ ಮೇಲೆ ಹೇರಲಾಗಿದೆ. ಹೀಗಾಗಿ ನೌಕರರು ತೀವ್ರ ಶೋಷಣೆಗೆ ಒಳಗಾಗುತ್ತಿದ್ದಾರೆ. ಜೊತೆಗೆ ಪದೇ ಪದೇ ಅಪಘಾತಗಳಿಗೆ ಒಳಗಾಗುತ್ತಿದ್ದಾರೆ. ಹೆಚ್ಚುವರಿ ಕೆಲಸಗಳನ್ನು ಮಾಡಿಸಿಕೊಂಡಾಗಲೂ ಇವರಿಗೆ ಯಾವುದೇ ಹೆಚ್ಚುವರಿ ಭತ್ಯೆಯಾಗಲಿ, ತುಟ್ಟಿಭತ್ಯೆ ಆಗಲಿ ಕೊಡುವುದಿಲ್ಲ. ಜೊತೆಗೆ ಮೇಲಾಧಿಕಾರಿಗಳು ವಿನಾಕಾರಣ ದೌರ್ಜನ್ಯ ನಡೆಸುವುದು ಮಾಮೂಲಾಗಿದೆ.

ಸದ್ಯ ಐಟಿಐ ಮುಗಿಸಿ ಬರುವ ಮೆಕಾನಿಕ್‌ಗಳಿಗೆ 4ನೇ ದರ್ಜೆ ನೌಕರರಾಗಿ ಪರಿಗಣಿಸಲಾಗುತ್ತಿದೆ. ಅಂದರೆ ಇತರ ಮೆಕಾನಿಕ್‌ಗಳಿಗಿಂತ ಕಡಿಮೆ ವೇತನ ಇತ್ಯಾದಿ. ಅಂದರೆ ನೌಕರರ ಮಧ್ಯೆಯೇ ತಾರತಮ್ಯ ಧೋರಣೆ ಅನುಸರಿಸುತ್ತಿದೆ. 4ನೇ ದರ್ಜೆ ನೌಕರರ ನೇಮಕಗೊಂಡ ಇತರೆ ಮಾಸಿಕ ವೇತನ ಕೇವಲ 4800 ರೂ. ಆದರೆ ಐಟಿಐ ತರಬೇತುದಾರರಿಗೆ ಇತರೆ ಸಂಸ್ಥೆಗಳಲ್ಲಿ (ಕೆಪಿಟಿಸಿಎಲ್ ಇತರೆ) 8 ಸಾವಿರದಿಂದ 9500 ರೂ.ಗಳವರೆಗೆ ಮಾಸಿಕ ವೇತನ ನೀಡಲಾಗುತ್ತದೆ.

ಅಂದರೆ ಹೆಚ್ಚುವರಿ ಕೆಲಸದ ಮೂಲಕ ವೇತನದ ವೆಚ್ಚ ಉಳಿಸಿದರೆ ಇನ್ನೊಂದೆಡೆ ಕಡಿಮೆ ವೇತನದ ಮೂಲಕ ಸಂಸ್ಥೆಯು ಬೊಕ್ಕಸ ತುಂಬಿಸಿಕೊಳ್ಳಲಾಗುತ್ತಿದೆ.



ಬಿಎಂಟಿಸಿ ಮಾರಲು ಹೊರಟಿರುವ ಬಿಜೆಪಿ ಸರ್ಕಾರ

ಲಾಭದಲ್ಲಿರುವ ಬಿಎಂಟಿಸಿಯನ್ನು ಷೇರು ವಿಕ್ರಯದ ಮೂಲಕ ಆಡಳಿತ ರೂಢ ಬಿಜೆಪಿ ಸರ್ಕಾರ, ಖಾಸಗಿಯವರಿಗೆ ಮಾರಲು ಸಂಚು ರೂಪಿಸಿದೆ. ಇದರ ಮೂಲಕ 30 ಕೋಟಿ ಸಂಗ್ರಹಿಸಿ ನಿಧಾನವಾಗಿ ಖಾಸಗಿ ಪ್ರಾಬಲ್ಯ ಹೆಚ್ಚುವ ರೀತಿಯಲ್ಲಿ ಯೋಜನೆಯನ್ನು ಮುಂದಿಡುತ್ತಿದೆ. ಈ 30 ಕೋಟಿ ಷೇರುಗಳಿಗೆ ಮತ್ತು 22 ಕೋಟಿ ಖಾಸಗಿಯವರಿಗೆ ಹಾಗೂ ಉಳಿದ 8 ಕೋಟಿ ಸಂಸ್ಥೆಯ ನೌಕರರಿಗೆ ನೀಡಲು ಹೊರಟಿದೆ. 22 ಕೋಟಿ ಷೇರುಗಳನ್ನು ಒಬ್ಬ ಖಾಸಗಿ ವ್ಯಕ್ತಿ ಖರೀದಿಸುವ ಸಾಧ್ಯತೆಯಿದೆ. ಆದರೆ 8 ಕೋಟಿ ರೂ. ಷೇರುಗಳನ್ನು ಒಬ್ಬ ನೌಕರ ಕೊಳ್ಳಲು ಸಾಧ್ಯವೇ? ಅಂದರೆ ಇದರ ಹಿಂದಿರುವ ಉದ್ದೇಶ ಸ್ಪಷ್ಟವಾಗುತ್ತದೆ.

ಷೇರು ವಿಕ್ರಯದ ಕುರಿತಾಗಿ ಯಾವ ಉದ್ದೇಶಕ್ಕೆ ಎಂಬ ಸ್ಪಷ್ಟ ಉತ್ತರ ಸರ್ಕಾರದ ಹತ್ತಿರ ಇಲ್ಲ. ಈಗಾಗಲೇ ಸಂಸ್ಥೆಯು 560 ಕೋಟಿ ಹಣ ಬ್ಯಾಂಕ್‌ನಲ್ಲಿದೆ. ಒಂದು ವೇಳೆ ಹಣಕಾಸು ವ್ಯತ್ಯಯವಾದಲ್ಲಿ ವ್ಯತ್ಯಯ ನಿಭಾಯಿಸಲು ಯಾವುದೇ ಸಮಸ್ಯೆಯಿಲ್ಲ. ಆದರೂ ಸರ್ಕಾರ ಈ ಬಗ್ಗೆ ಆತುರದ ಮುತುವರ್ಜಿ ವಹಿಸುತ್ತಿರುವುದು ಸಂಸ್ಥೆಯನ್ನು ಖಾಸಗೀಕರಿಸುವ ಬಹುದೊಡ್ಡ ಹುನ್ನಾರ ಅಡಗಿದೆ ಎಂಬುದು ಸುಸ್ಪಷ್ಟ.

10 ಸಾವಿರ ಕೋಟಿಗೂ ಹೆಚ್ಚು ಸ್ಥಿರಾಸ್ತಿ ಹೊಂದಿರುವ ಕೆಎಸ್‌ಆರ್‌ಟಿಸಿಯನ್ನು ನುಂಗಲು ಖಾಸಗಿ ಭಕಪಕ್ಷಿಗಳು ಹೊಂಚುಹಾಕುತ್ತಿರುವಾಗ ಸರ್ಕಾರ ಇವರ ನೆರವಿಗೆ ಧಾವಿಸಿರುವುದು ಇವರೊಂದಿಗೆ ಹೊಂದಾಣಿಕೆಯ ಹಿಂದೆ ಎಷ್ಟು ಸೂಟ್‌ಕೇಸ್‌ಗಳು ಚಲಾವಣೆಯಾಗಿವೆ ಎಂಬುದು ಮುಂದೆ ಕಾದುನೋಡಬೇಕು.

ಜನಸಾಮಾನ್ಯರಿಂದ ದೂರ ಸರಿಯುತ್ತಿರುವ ಬಿ.ಎಂ.ಟಿ.ಸಿ

ಆಧುನೀಕರಣದ ಹೆಸರಲ್ಲಿ ಬಿಎಂಟಿಸಿ ಜನಸಾಮಾನ್ಯರಿಂದ ದೂರವಾಗುತ್ತಿದೆಯೇ ಎಂಬ ಪ್ರಶ್ನೆ ಬಿಎಂಟಿಸಿ ಪ್ರಯಾಣಿಸುವ ಪ್ರಯಾಣಿಕರಿಗೆ ಕಾಡಿರುವುದರಲ್ಲಿ ಆಶ್ಚರ್ಯವಿಲ್ಲ. ನಿಧಾನವಾಗಿ ಬ್ಲ್ಯಾಕ್ ಬೋರ್ಡ್ ಮತ್ತು ರೆಡ್ ಬೋರ್ಡ್ ಬಸ್‌ಗಳು ಕಾಣೆಯಾಗುತ್ತಿವೆ. ಇವುಗಳ ಜಾಗದಲ್ಲಿ ಸುವರ್ಣ ಬಸ್‌ಗಳು, ವಾಯು, ವಜ್ರ ಹೆಸರಿನ ವೋಲ್ವೊ ಬಸ್‌ಗಳು ಬಂದು ನಿಲ್ಲುತ್ತವೆ. ಸುವರ್ಣದಲ್ಲಿ ಸಾಮಾನ್ಯ ದರಕ್ಕಿಂತ 1.5 ಪಟ್ಟು ಹೆಚ್ಚು. ವೋಲ್ವೊ ಬಸ್ ದರಗಳಂತೂ ಭಯ ಹುಟ್ಟಿಸುತ್ತವೆ. ಕನಿಷ್ಠ ದರ ರೂ.10 ಗರಿಷ್ಠ ದರ ರೂ.125 ರೂ.

ಉದಾಹರಣೆಗೆ

- ಬ್ಲ್ಯಾಕ್ ಬೋರ್ಡ್ ಬಸ್ - ಬೆಂ.ಬಸ್‌ನಿಲ್ದಾಣ - ಎಲೆಕ್ಟ್ರಾನಿಕ್ ಸಿಟಿ - **ರೂ.9**
- ರೆಡ್ ಬೋರ್ಡ್ ಬಸ್- ಬೆಂ.ಬಸ್ ನಿಲ್ದಾಣ - ಎಲೆಕ್ಟ್ರಾನಿಕ್ ಸಿಟಿ- **ರೂ.11**
- ಸುವರ್ಣ ಬಸ್ - ಬೆಂ.ಬಸ್.ನಿಲ್ದಾಣ - ಎಲೆಕ್ಟ್ರಾನಿಕ್ ಸಿಟಿ - **ರೂ.16**
- ವಾಯುವಜ್ರ ಬಸ್- ಬೆಂ.ಬಸ್ ನಿಲ್ದಾಣ - ಎಲೆಕ್ಟ್ರಾನಿಕ್ ಸಿಟಿ - **ರೂ.45**

ಬ್ಲ್ಯಾಕ್ ಬೋರ್ಡ್ ಮತ್ತು ರೆಡ್ ಬೋರ್ಡ್‌ಗಳನ್ನು ಗುಜರಿಗೆ ಹಾಕಿ ಮೇಲ್ನೋಟಕ್ಕೆ ಅಂದವಾಗಿ ಕಾಣುವ ಸುವರ್ಣ, ವಾಯುವಜ್ರ ಬಸ್‌ಗಳನ್ನು ಹೆಚ್ಚಿಸಲಾಗುತ್ತಿದೆ. ಇದರಿಂದಾಗಿ ಸಾಮಾನ್ಯ ಜನ ಬಿಎಂಟಿಸಿಯಲ್ಲಿ ಸಂಚರಿಸಲು ಭಯಪಡುವಂಥ ಸ್ಥಿತಿ ಉಂಟಾಗಿದೆ. ಈ ಸುವರ್ಣ ಬಸ್‌ಗಳಲ್ಲಿ, ವಾಯು, ವಜ್ರಗಳಲ್ಲಿ ಸಾಮಾನ್ಯ ಮಾಸಿಕ ಪಾಸ್, ದಿನದ ಪಾಸ್ ಯಾವುದಕ್ಕೂ ಅವಕಾಶವಿಲ್ಲ. ಮೊದಲೇ ದುಡ್ಡು ಕೊಟ್ಟ ಜನರಿಗೆ ಪಂಗನಾಮ.

ಬಸ್‌ಗಿಂತ ಆಟೋ ಬೆಸ್ಟ್ ....!

ಹೀಗೊಂದು ಚರ್ಚೆ ನಡೆದಿತ್ತು. ಬಸ್ ಸ್ಟ್ಯಾಂಡ್ ಬಳಿ. ಇದು ಇಬ್ಬರು ಸಾಮಾನ್ಯ ಮಹಿಳೆಯರ ನಡುವೆ ನಡೆದ ಸಂಭಾಷಣೆಯಾಗಿತ್ತು.



ಬೆಂಗಳೂರಿನಲ್ಲಿ ಈಗ ಎಲ್ಲೆಲ್ಲೂ ದುಬಾರಿಯಾದ, ಆದರೆ ಪಾಸ್‌ಗೆ ಅವಕಾಶವಿಲ್ಲದ ಸುವರ್ಣದ್ದೇ ಕಾರುಬಾರು


"ಇಲ್ಲಿಂದ ರಾಜಾಜಿನಗರಕ್ಕೆ 7 ರೂ ಇದೆ. ಇಬ್ಬರೂ ಸೇರಿ ಆಟೋ ಮಾಡಿದರೆ ಕನಿಷ್ಠ 14 ರೂಪಾಯಿ. ಹೀಗಾಗಿ ಆಟೋದಲ್ಲಿ ಹೋಗೋದು ಬೆಸ್ಟ್. ಮನೆ ಬಾಗಿಲಿಗೆ ಬೇಗನೆ ತಲುಪಬಹುದು ಎಂದು. ಹೀಗೆ ಸಾಮಾನ್ಯ ಜನರಿಂದ ಬಿಎಂಟಿಸಿ ದೂರ ಸರಿಯುತ್ತಿರುವುದು ಸ್ಪಷ್ಟವಾಗುತ್ತದೆ.

ಪ್ರಬಲ ಪ್ರತಿರೋಧಕ್ಕೆ ಸಜ್ಜಾಗುತ್ತಿರುವ ಕಾರ್ಮಿಕ ವರ್ಗ

ಈ ಎಲ್ಲಾ ಬೆಳವಣಿಗೆಗಳ ಕುರಿತು ಸಿಐಟಿಯು ನೇತೃತ್ವದ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘಟನೆ ಮುಖಂಡ ಮಂಜುನಾಥ್ ಈ ರೀತಿ ಹೇಳುತ್ತಾರೆ. ಸಂಸ್ಥೆಯ ಈ ಬೆಳವಣಿಗೆಗಳು ಸಂಸ್ಥೆಯನ್ನು ಖಾಸಗೀಕರಣ ಮಾಡುವ ಪ್ರಬಲ ಯತ್ನ ಎಂಬುದರಲ್ಲಿ ಅನುಮಾನವೇ ಇಲ್ಲ. ಹಂತಹಂತವಾಗಿ ಸಂಸ್ಥೆಯನ್ನು ರಾಜ್ಯದ ದೊಡ್ಡ ಸಾರಿಗೆ ಒಡೆಯರಿಗೆ ಇಡಿಯಾಗಿ ಮಾರುವ ಹುನ್ನಾರ ನಡೆದಿದೆ. ಇದರ ವಿರುದ್ಧ ಹೋರಾಟವೂ ಅಷ್ಟೇ ಪ್ರಬಲವಾಗಿ ನಡೆಯಬೇಕಿದೆ. ಈ ನಿಟ್ಟಿನಲ್ಲಿ ಸಿಐಟಿಯು ಕಾರ್ಮಿಕರನ್ನು ಸಂಘಟಿಸುತ್ತಿದೆ. ಪ್ರತಿಭಟನೆ ತೀವ್ರಗೊಳ್ಳುತ್ತದೆ ಎಂಬ ವಿಶ್ವಾಸವೂ ನನಗಿದೆ".

ಎಲ್ಲೆಲ್ಲಿ ಜನವಿರೋಧಿ ನೀತಿಗಳು ಜಾರಿಯಾಗುತ್ತವೋ ಅಲ್ಲಿ ಅದರ ವಿರುದ್ಧದ ಪ್ರತಿಭಟನೆಗಳು ಪ್ರಬಲವಾಗಿ ಬೆಳೆದಿರುವುದು ಅಷ್ಟೇ ಸತ್ಯ. ಈ ದುಡಿಯುವ ಜನರ ಪ್ರಬಲ ಚಳುವಳಿಗೆ ಎಲ್ಲರ ಸಹಕಾರವೂ ಅತ್ಯಗತ್ಯ.

○



ಉಳ್ಳವರ ಮನೆಯ ಪಾಯಸದಲ್ಲಿ ಇವರು ಸುಲಿದ ಗೋಡಂಬಿ ರುಚಿಯಾಗಿ ಹರಿದಾಡುತ್ತದೆ. ಇವರ ಮನೆಯ ಹುಗ್ಗಿಗೆ ಬೆಲ್ಲವೂ ಇಲ್ಲ ಅಂದರೆ ಹೇಗೆ?

ಗೇರು ಕಾರ್ಮಿಕರ ಪಾಯಸದಲ್ಲಿ ಗೋಡಂಬಿ ಇಲ್ಲ

"ಯಾರು ಮಾಡಿದ್ದು ಪಾಯಸ ಇದು? ಗೋಡಂಬಿ ಕಾಳೇ ಕಾಣವಲ್ಲು" ತುಳಸಾ ಗೊಣಗುತ್ತಾ ಊಟದ ಎಲೆಗೆ ನೀರು ಹನಿಸಿದಳು. ಅಂದಿನ ಊಟಕ್ಕೆ ಕಡಿಮೆ ಗೋಡಂಬಿ ಹಾಕಿದ ಪಾಯಸ ರುಚಿಯ ಕೊರತೆಯಿಂದ ಕೂಡಿದ್ದಾಗಿತ್ತು. ತುಂಬ ದುಬಾರಿ ಬೆಲೆಯ ಗೋಡಂಬಿ ಹುಗ್ಗಿಯಲ್ಲೆಲ್ಲ ಕೈಬಿಟ್ಟು ಧಾರಾಳವಾಗಿ ಸುರಿಯಲಾದೀತೆ...? ಧಾರವಾಡದಾಚೆಯಿಂದ ದಕ್ಷಿಣ ಕನ್ನಡ, ಮೈಸೂರು, ಬೆಂಗಳೂರಿಗರೆಲ್ಲ ಭರಪೂರ ಗೋಡಂಬಿ, ದ್ರಾಕ್ಷಿ ಹಾಕಿ ರುಚಿರಸಾಯನ ಮಾಡಿಯಾರು? ಆದರೆ ಹೈದರಾಬಾದ್ ಕರ್ನಾಟಕದ ಸಾಮಾನ್ಯ ಜನತೆಗೆ ಕೈಗೆಟುಕದ ದಿನಸಿದು. ಆದ್ದರಿಂದಲೇ ಹುಗ್ಗಿಗೆ ಬೆಲ್ಲ ಜೊತೆಗೆ ಕೊಬ್ಬರಿ ತುರಿ ಮೇಲಿಷ್ಟು ಗಸಗಸೆ ಇದ್ದರಾಯ್ತು. ನಮ್ಮ ಪಾಲಿಗೆ ಶೇಂಗಾ (ಹಸಿಗಡಲೆ) ಎಂಬುದೇ ಬಡವರ ಬಾದಾಮು.

ಥೇಟ್ ಭ್ರೂಣದಂತೆ


ಈಚೆಗೆ ಮಂಗಳೂರು ಮೂಡಬಿದಿರೆ ಅಂತೆಲ್ಲ ಓಡಾಡುವಾಗ ಈ ಗೋಡಂಬಿ ತಲೆಗೆ ಹೊಕ್ಕಿತ್ತು. ಗೇರು ಕಾರ್ಖಾನೆಯಲ್ಲಿ ಕೆಲಸ ಮಾಡುವ ಅಕ್ಕಂದಿರರು ತಮ್ಮ ನೋವು- ನಲಿವು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು. ನಾವು ಎಲ್ಲರೂ ಕಣ್ಣಿಂದ ಕಾಣಲೆಂದು ಮಂಗಳೂರಿನ ಕಾರ್ಖಾನೆಯೊಂದರತ್ತ ಪಯಣ ಹೊರಟೆವು. ಟ್ರೇಡ್ ಯೂನಿಯನ್ ಲೀಡರ್ ಲತಾ ಪಾದರಸದಂತೆ ಹರಿದಾಡುವ ಗೇರುಬೀಜವು ತನ್ನ ಅನೇಕ ಪದರುಗಳನ್ನು ಕಳಚಿಕೊಂಡು ಫಳ ಫಳ ಹೊಳೆವ ಶ್ವೇತ ಗೋಡಂಬಿಯಾಗುವ ಪರಿಯನ್ನು ತೋರಿಸಿದಳು. ಸಾಲು ಸಲಾಗಿ ಕುಳಿತು ಕೆಲಸ ಮಾಡುವ ನೂರಾರು ಹೆಣ್ಣುಮಕ್ಕಳು, ಗೋಡಂಬಿ ಬೀಜದ ಗಟ್ಟಿಯಾದ ಹೊರಮೈಯನ್ನು ಚಕ್ ಚಕ್ಕೆಂದು ಕತ್ತರಿಸುತ್ತಿದ್ದರು. ಥೇಟ್ ಭ್ರೂಣದಾಕಾರದಂತೆ ಕಾಣುವ ಬೀಜದ ಮೆತ್ತನೆಯ ಮೈಗೆ ಕತ್ತರಿಯ ಚೂಪು ತಾಗದಂತೆ ಕತ್ತರಿಸುವ ಪರಿಗೆ ಬೆರಗಾಗಲೇಬೇಕು. ಕರ್ರಗೆ ಎಣ್ಣೆಯನ್ನು ಒಡಲಲ್ಲಿಟ್ಟುಕೊಂಡ ತಿರುಳಿನಿಂದ ಗೋಡಂಬಿ ಬೇರ್ಪಡಿಸಿ, ಮತ್ತೊಂದು ಪದರು ಸುಲಿಯಲು ಪೆನ್ಸಿಲಾಕಾರದ ಚೂಪು ವಸ್ತು ಹೆಂಗಳೆಯರ ಕೈಯಿಂದ ಸರ ಸರ ಚಲಿಸುತ ಗೋಡಂಬಿಯು ವೈಸುತ್ತ ಹರಿದಾಡಿ ಹೊಳಪುಗೊಳಿಸುತ್ತಿತ್ತು. ಮತ್ತೊಂದು ಶಾಖೆಯಲ್ಲಿ ಬೇರ್ಪಡಿಸುವ ಪ್ರಕ್ರಿಯೆ. ಅಂತಿಮ ಹಂತದಲ್ಲಿ ಮತ್ತೊಮ್ಮೆ ಬೇರ್ಪಡಿಸುವುದರೊಂದಿಗೆ ತೂಕ ಮಾಡಿ ಚೀಲ ತುಂಬವವರೆಗೆ ನಾವು ಎಲ್ಲವನ್ನು ಗಮನಿಸಿದೆವು. ಎಲ್ಲ ಕೆಲಸಕ್ಕೂ ಹೆಂಗಸರಿದ್ದರು. ಮೂರು ಕಡೆ ಮಾತ್ರ ಎರಡೋ-ಮೂರೋ ಜನ ಗಂಡಸರಿದ್ದರು. ಗೋಡಂಬಿ ಸ್ಟೀಮ್ ಮಾಡುವಲ್ಲಿ, ಕಟಿಂಗ್‌ಗಾಗಿ ಇರುವ ಪತ್ರಿ(ಬ್ಲೇಡ್)ಯನ್ನು ಚೂಪು (ಹರಿತ)ಗೊಳಿಸುವಲ್ಲಿ ಒಬ್ಬರು ಪುರುಷ, ಎಣ್ಣೆ ತೆಗೆಯುಲ್ಲಿ ಇಬ್ಬರು ಮತ್ತು ವಹಿವಾಟು ಗದ್ದಿಯ ಮೇಲೆ ಲೆಕ್ಕಪತ್ರ ಬರೆದುಕೊಳ್ಳುವರು. ಇಬ್ಬರು ಅಥವಾ ಮೂವರು, ಇಷ್ಟು ಜನ ಗಂಡಸರು ಬಿಟ್ಟರೆ ಉಳಿದೆಲ್ಲ ಕೆಲಸದಲ್ಲಿ ಮಹಿಳೆಯರದ್ದೇ ಭಾಗಿದಾರಿಕೆ. ಭಾರತದ ಒಟ್ಟು ದುಡಿಮೆಗಾರರು 10 ಲಕ್ಷ ಜನ. ಅವರಲ್ಲಿ ಶೇ.95 ಮಹಿಳೆಯರು. ಪ್ರತಿ ದಿನ 4 ಟನ್ ಗೋಡಂಬಿ ಸಿದ್ಧವಾಗುತ್ತವೆ. ಹಾಗೆ ನೋಡಿದರೆ ಜಗತ್ತಿನ ಒಟ್ಟು ಬೆಳೆ ಇಪ್ಪತ್ತು (20) ಲಕ್ಷ ಟನ್ ಮಾತ್ರ. ಅದರಲ್ಲಿ 5 ಲಕ್ಷ ಟನ್ ಭಾರತವೇ ಕೊಡುತ್ತದೆ. 2 ಲಕ್ಷ ಟನ್ ಗೋಡಂಬಿಯು ಬೆಳೆದ ಬ್ರೆಜಿಲ್ ಪೂರ್ತಿ ಯು.ಎಸ್.ಎ. ಗೆ ರಫ್ತು ಮಾಡುತ್ತದೆ. ಭಾರತದ 5 ಲಕ್ಷ ಟನ್ ಬೆಳೆಯು ಐದು ರಾಜ್ಯಗಳಿಂದ ಬರುತ್ತದೆ. ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕರ್ನಾಟಕದಿಂದ ಈ ರಾಜ್ಯಗಳ ಕರಾವಳಿ ಪ್ರದೇಶದಲ್ಲಿ ಗೇರು ಬೆಳೆ ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನವೊಂದರಲ್ಲಿ 15,000 ಜನರು ಕೆಲಸ ಮಾಡುತ್ತಾರೆ. ಈ ರೀತಿ ತಿಂಗಳಾನುಗಟ್ಟಲೆ ಲಕ್ಷಾಂತರ ಜನ ಈ ಗೇರು ಕಾರ್ಖಾನೆಯಲ್ಲಿ ಕೆಲಸ ಮಾಡುವವರು ಸಿಗುತ್ತಾರೆ.

ಗೇರು ಸಂಸ್ಕರಣೆಯಲ್ಲಿ ನಿರತ ಮಹಿಳೆಯರು



ಹಲವು ಪ್ರಯೋಜನ

ಗೋಡಂಬಿಯ ಪ್ರತಿ ಭಾಗವು ಪ್ರಯೋಜನಕ್ಕೆ ಬರುವಂಥದ್ದು. 100 ಕೆ.ಜಿ. ಗೋಡಂಬಿಯಲ್ಲಿ 24 ಕೆ.ಜಿ. ತಿರುಳು, 70 ಕೆ.ಜಿ. ಶೆಲ್ಲು, 2 ಕೆ.ಜಿ. ಹೊಟ್ಟು, 1 ಕೆ.ಜಿ. ರಿಜೆಕ್ಷನ್. ಹೊಟ್ಟು, ತಿರುಳು, ರಿಜೆಕ್ಷನ್ ಎಲ್ಲವು ವಿಧ ವಿಧ ಪ್ರಯೋಜನಕಾರಿ, ಚರ್ಮ ಪಾಲಿಶಿಂಗ್, ಪಶು ಆಹಾರ, ಪಾನ್ ಪರಾಗಕ್ಕೆಲ್ಲ ರಿಜೆಕ್ಷನ್ ಬಳಸಿದರೆ, ತಿರುಳಿನಿಂದ ಬೇರ್ಪಡಿಸಿದ ಎಣ್ಣೆಯು, ಪೇಂಟ್, ಎಣ್ಣೆ, ವಾರ್ನಿಶ್, ಬ್ರೇಕ್ ಆಯಿಲ್, ಶೆಲ್‌ಕೇಕ್ ಅಂತೆಲ್ಲ ಬಳಕೆಗೆ ಒದಗುತ್ತದೆ. ರಿಜೆಕ್ಷನ್ ಆಯಿಲ್‌ನಿಂದ ಸೋಪು ಸಹ ತಯಾರಿಸಲು ಬಳಸುತ್ತಾರೆ.



ಶ್ರೀಮಂತರ ಬೆಳೆ

ಗೋಡಂಬಿ ಬೀಜಗಳ ಮಾರಾಟವು ಸಮಸ್ಯೆಯೇನಲ್ಲ. ಸರಕಾರವೇ ಆಕ್ಷನ್‌ಮಾಡಿ ಶೇ.80 ರಷ್ಟು ಪಡೆದರೆ, ಎ.ಪಿ.ಎಂ.ಸಿ. ಮೂಲಕ ನೇರವಾಗಿ 20 ರಷ್ಟು ಮಾರಾಟವಾಗುತ್ತದೆ. ಜಗತ್ತಿನಾದ್ಯಂತ ಬಹು ಬೇಡಿಕೆಯ ಈ ಶ್ರೀಮಂತ ಬೆಳೆಯು ಕಾರ್ಖಾನೆ ಮಾಲಿಕರಿಗೆ ಕೈತುಂಬ ಆದಾಯ ತರುತ್ತದೆ. ದೇಶಾದ್ಯಂತ ಪೌಷ್ಟಿಕಯುಕ್ತ ಬೀಜ ಒದಗಿಸುವ 10 ಲಕ್ಷ ಕಾರ್ಮಿಕರ ಬದುಕು ಅವರ ಆದಾಯ ಹೇಗಿದೆ ಎಂಬುದು ಒಮ್ಮೆ ನೋಡಲೇಬೇಕು.

ಯಾತಕ್ಕೂ ಸಾಲದು

ಒಟ್ಟು ಕಾರ್ಮಿಕರಲ್ಲಿ 95 ದಷ್ಟಿರುವ ಮಹಿಳೆಯರು ಬೆಳಿಗ್ಗೆ 9-00 ರಿಂದ ಸಂಜೆಯವರೆಗೂ ಕೆಲಸ ಮಾಡುತ್ತಾರೆ. ಬಹುದೊಡ್ಡ ಗೋಡೌನ್‌ಗಳಲ್ಲಿ ಸಾಲು ಸಾಲು ದಿನವೆಲ್ಲ ಕಟ್ಟಿಂಗ್ ಮಾಡಿದರೆ ರೂ.8.1 ಕೆ.ಜಿ.ಗೆ ರಷ್ಟು ಕೂಲಿ ಸುಲಿಯುವವರ ಕೂಲಿಯು ಕೇಜಿ ಲೆಕ್ಕದಲ್ಲಿ 1 ಕೆ.ಜಿ. ಸುಲಿದರೆ ರೂ.9-12 ದಿನವೆಲ್ಲ ಸುಮಾರು 9 ಕೆ.ಜಿ. ಸುಲಿಯಬಹುದು. ಅಂದರೆ ಗರಿಷ್ಠ ಕೂಲಿ ರೂ.81 ಸಿಗುತ್ತದೆ. ಕೆಲವು ಸಾರಿ ರೂ.50, ರೂ.60 ಮಾತ್ರ ಗಿಟ್ಟಬಹುದು. ಫ್ರಾವಿಡೆಂಟ್ ಫಂಡ್ ಕಟ್ ಆಗಿ ಕೈಗೆ ಬರುವ ಕೂಲಿ ಯಾತಕ್ಕೂ ಸಾಲದು ಎಂಬುದು ಮಹಿಳೆಯರ ಅಳಲು. ಗಟ್ಟಿ ತೊಗಟೆಯ ಗೇರು ಸೀಳಿ, ಪೊರೆ ಹರಿದು ಒಳಗಿರುವ ಬಿಳಿ ಗೋಡಂಬಿಯನ್ನು ಜಗತ್ತಿಗೆಲ್ಲ ಕೊಡುವ ಕಾರ್ಮಿಕ ಮಾತ್ರ ಕೆಲಸ ಮಾಡುವಾಗ ನಡುವೆ ಒಂದೇ ಒಂದು ಬೀಜ ತಿಂದರೂ ದಂಡ. ಸುಲಿಯುವಾಗ ಕೈಗೆ ಗ್ಲೌಜ್ (ಕೈಚೀಲ) ತೊಡಬೇಕು. ಆದರೆ ಎಲ್ಲ ಹೆಣ್ಣುಮಕ್ಕಳ ಕೈ ಕರ್ರಗಾಗಿ ಚರ್ಮ ಸುಲಿಯುತ್ತಿತ್ತು. ಸಿಐಟಿಯು ಇರುವ ಕಡೆ ಮಾತ್ರ 20/- (ಡಿ.ಎ.) ತುಟ್ಟಿಭತ್ಯೆ ಕೊಡ್ತಾರೆ. ಹೊರಗೆ ಸುಡುವ ಬಿಸಿಲು ಒಳಗೆ ಕುದಿವ ಕಾವಲ್ಲಿ ಬೆವರು ಸುರಿಸುತ್ತ ಕೆಲಸ ಮಾಡುತ್ತಾರೆ. ಫ್ಯಾನ್ ಬಳಸುವ ಹಾಗಿಲ್ಲ. ಹೊಟ್ಟು ಮತ್ತಿತ್ತರೆ ಚೂರು ಮೇಲೇಳುತ್ತದೆ. ಹತ್ತಾರು ವರ್ಷದಿಂದ ಕೆಲಸ ಮಾಡುವ ಮಹಿಳೆಯರು ಇಲ್ಲಿರುವರು. ಅವರದೇ ಸ್ವಂತಕ್ಕೆ ಗೋಡಂಬಿ ಬೇಕೆಂದರೂ ಮಾರುಕಟ್ಟೆಯ ರೇಟಿನಲ್ಲಿ ಖರೀದಿಸಬೇಕು. ರಿಯಾಯಿತಿ ಇಲ್ಲ. ಹಾಗೆ ಮಾಡಿದರೆ ನಮಗೆ ಲಾಭ ಗಿಟ್ಟಲಿಕ್ಕುಂಟಾ? ಎಂಬುದು ಮಾಲಿಕರ ಪ್ರಶ್ನೆ. ಅಂತರಾಷ್ಟ್ರೀಯ ಮಾರುಕಟ್ಟೆಯ ಹಿಡಿತದ ಬಿಸಿ ತಮಗೂ ತಟ್ಟಿದೆ ಎಂಬುದು ವಿವರಿಸುತ್ತಾರೆ. ಆದಾಗ್ಯೂ ಸಾಮ್ರಾಜ್ಯಶಾಹಿಯ ಆರ್ಥಿಕ ನೀತಿಯನ್ನೇ ಬೆಂಬಲಿಸುವ ರಾಜ್ಯ ರಾಜಕೀಯದ ಪಕ್ಷ ವಹಿಸುವ ಮಾಲಿಕರು, ಪಕ್ಕಾ ಚಾಲುಕು ವ್ಯಾಪಾರಿಗಳೇ.

ಅದೊಂದೇ ದಾರಿ

ನಮ್ಮೊಂದಿಗೆ ಕಾರ್ಖಾನೆ ತುಂಬ ಓಡಾಡಿದ ಲತಾ "ಮನೆ ಕಡೆ ತುಂಬಾ ಕಷ್ಟ ಉಂಟು ಮಾರಾಯ್ರೇ. ಕೂಲಿ ಹೆಚ್ಚಿಲಿಕ್ಕಂತ ಹೋರಾಟ ಹಾಕಿ ನಾವೆಲ್ಲ ಬರ್ತೇವೆ" ಎಂದರು ಹೌದಲ್ಲವೇ? ಉಳ್ಳವರ ಮನೆಯ ಪಾಯಸದಲ್ಲಿ ಇವರು ಸುಲಿದ ಗೋಡಂಬಿ ರುಚಿಯಾಗಿ ಹರಿದಾಡುತ್ತದೆ. ಇವರ ಮನೆಯ ಹುಗ್ಗಿಗೆ ಬೆಲ್ಲವೂ ಇಲ್ಲ ಅಂದರೆ ಹೇಗೆ? ಈಗ ಸಿಗುವ ಕೂಲಿ ನಾಳೆ ಬಂದು ಕೆಲಸ ಮಾಡಲಿಕ್ಕೆ ಬೇಕಾದ ಶಕ್ತಿ ಸಂಚಯಿಸಿಕೊಳ್ಳಲಿಕ್ಕೆ ಸಾಕಾಗುವುದಿಲ್ಲ. ಹಾಗಾದರೆ, ಈ ಕಾರ್ಮಿಕರ ಬದುಕು ನೆಮ್ಮದಿ ದಿನಗಳನ್ನು ನೋಡುವುದು ಯಾವಾಗ? ಲತಾ ಹೇಳುವುದು ಖರೆ. ಹೋರಾಟಕ್ಕೆ ಕರೆ ಕೊಡಿ. ಎಲ್ರೂ ಬರ್ತೇವೆ ಅಂತ. ದುಡಿಮೆಯ ಜೀವನ, ಹೋರಾಟದ ಬದುಕು, ಅದೊಂದೇ ದಾರಿ.



ಅಂಗನವಾಡಿ ನೌಕರರ 4ನೇ ರಾಜ್ಯ ಸಮ್ಮೇಳನ

ತಾಯಿ ಮಕ್ಕಳ ಆರೋಗ್ಯ ರಕ್ಷಣೆಯಂತಹ ಮಹತ್ವದ ಹೊಣೆ ನಿರ್ವಹಿಸುವ ಅಂಗನವಾಡಿ ನೌಕರರು ಸೂಕ್ತ ವೇತನ, ಜೀವನ ಭದ್ರತೆ ಇಲ್ಲದೆ ನರಳುವ ದುಡಿಯುವ ವರ್ಗದ ವಿಭಾಗ. ಅವರೀಗ ಹೆಚ್ಚು ಹೆಚ್ಚು ಸುಸಂಘಟಿತರಾಗುತ್ತಿದ್ದಾರೆ. ಅದೂ ಸಿಐಟಿಯು ನಂತಹ ಸಂಘಟನೆಯ ಅಡಿಯಲ್ಲಿ. ಸಂಘಟನೆಯು ಬೆಳೆಯುತ್ತಿದೆ. ರಾಜಕೀಯ ಪ್ರಜ್ಞೆಯೂ ವಿಸ್ತರಿಸುತ್ತಿದೆ.

ವಿಸ್ತಾರಗೊಂಡ ಸಂಘಟನೆ ಚಳುವಳಿ ವಿಸ್ತರಿಸುವ ಹುರುಪು

ಅಂಗನವಾಡಿ ನೌಕರರ 4ನೇ ರಾಜ್ಯ ಸಮ್ಮೇಳನ ಕಾರವಾರದಲ್ಲಿ ನವೆಂಬರ್ 21ರಿಂದ 23ರವರೆಗೆ 3 ದಿನಗಳ ಕಾಲ ನಡೆಯಿತು. ಈ ಸಮ್ಮೇಳನಕ್ಕೆ ಒಟ್ಟು 338 ಪ್ರತಿನಿಧಿಗಳು 71 ತಾಲೂಕುಗಳಿಂದ, 20 ಜಿಲ್ಲೆಗಳಿಂದ ಪ್ರತಿನಿಧಿಸಿದ್ದರು.

ಉತ್ತರಕನ್ನಡ ಜಿಲ್ಲೆಯ ಕಾರವಾರದಲ್ಲಿ ಇಂದು ಕೋಮುವಾದಿಗಳ ತಾಣವಾಗಿದ್ದು, ಕೆಂಪು ಬಾವುಟದವರ ಕಾರ್ಯಕ್ರಮಗಳಿಗೆ ತಡೆಯೊಡ್ಡಲು ಪ್ರಯತ್ನಿಸಿ ವಿಫಲರಾಗಿದ್ದಾರೆ. ಉತ್ತರ ಕನ್ನಟ ಜಿಲ್ಲೆಯ ಅಂಗನವಾಡಿ ನೌಕರರು 6 ತಿಂಗಳಿಂದ ಈ ಸಮ್ಮೇಳನದ ಯಶಸ್ವಿಗೆ ತಮ್ಮದೇ ರೀತಿಯಲ್ಲಿ ದುಡಿದಿದ್ದಾರೆ. ಅಲ್ಲದೆ ಒಂದು ವಾರದ ಗೌರವಧನವನ್ನು ಸಮ್ಮೇಳನಕ್ಕೆ ಪಾವತಿಸಿ ನೈತಿಕ ಸ್ಥೈರ್ಯ ತುಂಬಿದ್ದಾರೆ.

ನವೆಂಬರ್ 21ರಂದು ಸುಮಾರು 2 ಸಾವಿರದಷ್ಟು ಅಂಗನವಾಡಿ ನೌಕರರು ಕೆಂಪು ಧ್ವಜಗಳೊಂದಿಗೆ ಮತ್ತು ಕೆಂಪು ಸಮವಸ್ತ್ರ ದೊಂದಿಗೆ ರ್‍ಯಾಲಿಯನ್ನು ನಡೆಸಿ ಬಹಿರಂಗ ಸಭೆಯನ್ನು ಮಾಡಲಾಯಿತು. ಈ ಸಭೆಯ ಉದ್ಘಾಟನೆಯನ್ನು ಸಂಘದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಹೇಮಲತಾರವರು ಮಾಡಿದರು. ಐಸಿಡಿಎಸ್ ಖಾಸಗೀಕರಣ ಕೇವಲ ಅಂಗನವಾಡಿ ನೌಕರರ ಕೆಲಸದ ಉಳಿವಿನ ಪ್ರಶ್ನೆಯೊಟ್ಟಿಗೆ ಗ್ರಾಮಾಂತರ ಪ್ರದೇಶದ ಜನರ, ಗರ್ಭಿಣಿ, ಬಾಣಂತಿಯರ ಮತ್ತು ಮಕ್ಕಳಿಗೆ ಸಿಗುತ್ತಿರುವ ಪೌಷ್ಠಿಕ ಆಹಾರ, ಶಿಕ್ಷಣ ಮತ್ತು ಆರೋಗ್ಯದ ಸೌಲಭ್ಯಗಳು ವಂಚಿತವಾಗುತ್ತದೆ ಎಂಬುದನ್ನು ವಿವರಿಸಿದರು ಮತ್ತು ಇದರ ವಿರುದ್ಧದ ಹೋರಾಟದಲ್ಲಿ ಎಲ್ಲಾ ಜನತೆಯ ನೆರವನ್ನು ಕೋರಿದರು.

ಬಹಿರಂಗಸಭೆಯಲ್ಲಿ "ಐಸಿಡಿಎಸ್ ಉಳಿಸಿ" ಪುಸ್ತಕವನ್ನು ಬಿಡುಗಡೆ ಮಾಡಿದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಮಾಜಿ ಶಾಸಕ ಶ್ರೀರಾಮರೆಡ್ಡಿ, ರೈತ ಸಂಘದ ಮುಖಂಡರಾದ ಶಾಂತರಾಂ ನಾಯಕ; ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿಯವರು ಮಾತನಾಡಿದರು. ಶಾಂತ ಎನ್.ಘಂಟೆ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನದಲ್ಲಿ ಕರಡು ವರದಿಯ ಮೇಲೆ 45 ಸಂಗಾತಿಗಳು ಸುಮಾರು 6 ಗಂಟೆಗಳ ಕಾಲ ಚರ್ಚೆಯನ್ನು ನಡೆಸಿದರು.

ವರದಿಯ ಪ್ರಮುಖ ಅಂಶಗಳು: 4ನೇ ಸಮ್ಮೇಳನಕ್ಕೆ ಸಂಘಟನೆ ವಿಸ್ತರಣೆಯಲ್ಲಿ ಮತ್ತು ಸದಸ್ಯತ್ವದಲ್ಲಿ ಹೆಚ್ಚಳ ಮಾಡಿಸುವಲ್ಲಿ ಮುಂದೆ ಹೋಗುತ್ತಿದೆ. 1994ರಲ್ಲಿ 3 ತಾಲೂಕುಗಳಲ್ಲಿದ್ದ ಸಂಘ ಈಗ 97 ತಾಲೂಕುಗಳಿಗೆ 22 ಜಿಲ್ಲೆಗಳಿಗೆ ವಿಸ್ತರಿಸಿದೆ. 3ನೇ ಸಮ್ಮೇಳನದಿಂದ 4 ನೇ ಸಮ್ಮೇಳನಕ್ಕೆ 73 ತಾಲೂಕಿನಿಂದ 97 ತಾಲೂಕುಗಳಿಗೆ, 11 ಜಿಲ್ಲಾ ಸಮಿತಿಗಳಿಂದ 16 ಜಿಲ್ಲಾ ಸಮಿತಿಗಳನ್ನೊಳಗೊಂಡಿದೆ. ಸಂಘಟನೆ 3 ವರ್ಷಗಳಲ್ಲಿ ಹೋರಾಟಗಳಲ್ಲಿ ಗಳಿಸಿರುವ ಒಟ್ಟು ಪ್ರಭಾವವನ್ನು ಇನ್ನು ಬೆಳೆಸುವ ದಿಕ್ಕಿನಲ್ಲಿ ಮುನ್ನಡೆಯಬೇಕಾಗಿದೆ. ಸಂಘಟನೆಯ ವ್ಯಾಪ್ತಿಯಲ್ಲಿ 58 ಸಾವಿರ ಜನರನ್ನು ಸಂಘದ ಸದಸ್ಯರನ್ನಾಗಿ ಮಾಡಲು ಯೋಜನೆಗಳನ್ನು ರೂಪಿಸಿದೆ.

ಪ್ರಮುಖ ಸಾಧನೆಗಳು: ಅಂಗನವಾಡಿ ನೌಕರರ ಅಖಿಲ ಭಾರತ ಸಮ್ಮೇಳನಕ್ಕೆ ಪ್ರತಿಯೊಬ್ಬ ಕಾರ್ಯಕರ್ತೆ ಮತ್ತು ಸಹಾಯಕಿಯನ್ನು ಕೆಲಸಕ್ಕಿಳಿಸಿ, ಅಂಗನವಾಡಿ ಕೇಂದ್ರ ಇರುವೆಡೆ ಗೋಡೆ ಬರಹ ಬರಿಸಿದ್ದು, ಸಿಐಟಿಯು ಅಖಿಲ ಭಾರತ ಸಮ್ಮೇಳನದಲ್ಲಿ ಪಂಚಾಯಿತಿವಾರು ಧ್ವಜಾರೋಹಣಗಳನ್ನು ಮಾಡಿದ ಕಾರ್ಯಕ್ರಮಗಳಲ್ಲಿ ಅಂಗನವಾಡಿ ನೌಕರರು "ಅಂಗನವಾಡಿ ಸಂಘದ ಮುಖಂಡರಷ್ಟೇ ಅಲ್ಲದೆ ಸಿಐಟಿಯು ಮುಖಂಡರಾಗಿ" ಗ್ರಾಮಾಂತರ ಪ್ರದೇಶದಲ್ಲಿ ಗುರುತಿಸಿಕೊಂಡಿದ್ದು, ಅವರ ಗೌರವವನ್ನು ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಾಯಕವಾಗಿದೆ.

ವಿಶ್ವಬ್ಯಾಂಕ್‌ನ "ಐಸಿಡಿಎಸ್ ಸುಧಾರಣಾ ಯೋಜನೆ-ಖಗಿ" ಶಿಫಾರಸ್ಸಿನಂತೆ ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳ ಪೋಷಕರು 11 ಎಕರೆ ಜಮೀನು ಹೊಂದಿರುವುದರಿಂದ ಇನ್ನು ಮುಂದೆ ಅವರ ಬಳಿಯೇ ಸಂಪನ್ಮೂಲಗಳನ್ನು ಸಂಗ್ರಹಿಸಬೇಕು, ಇದಕ್ಕೆ ಸಹಾಯಕವಾಗಿ "ಸಾರ್ವಜನಿಕ-ಖಾಸಗಿ-ಸಹಭಾಗಿತ್ವದಡಿ" ಯಲ್ಲಿ ಅಂಗನವಾಡಿ ಕೇಂದ್ರಗಳು ನಡೆಯಬೇಕು, ಇದು ಸಾಧ್ಯವಾಗಬೇಕಾದರೆ ಅಂಗನವಾಡಿ ಕೇಂದ್ರಗಳ ವಿಕೇಂದ್ರೀಕರಣ ಮತ್ತು ಜನ ಸಮುದಾಯವನ್ನು ಪಾಲ್ಗೊಳಿಸಬೇಕೆಂಬ ಸೂಚನೆಗಳನ್ನು ನೀಡಿದೆ.

ಇದರ ಆಧಾರದಲ್ಲಿ ರಾಜ್ಯದಲ್ಲಿ 1 ಬಾಲ ವಿಕಾಸ ಸಮಿತಿಯಡಿಯಲ್ಲಿ ಅಂಗನವಾಡಿ ನೌಕರರು ಕೆಲಸ ನಿರ್ವಹಿಸಬೇಕು. ಪಂಚಾಯಿತಿ ಸದಸ್ಯರು ಈ ಸಮಿತಿ ಅಧ್ಯಕ್ಷನಾ/ಳಾಗಿರಬೇಕು. ಬೆಳಿಗ್ಗೆ 9 ರಿಂದ 4.30 ರತನಕ ಕೆಲಸ ಮಾಡಬೇಕೆಂಬ ಷರತ್ತುಗಳನ್ನೊಳಗೊಂಡ ಆದೇಶ ಬಂದಿತು. ಸಂಘ ಮಧ್ಯ ಪ್ರವೇಶಿಸಿ ಸರ್ಕಾರಿ ಆದೇಶವನ್ನು ಸಂಪೂರ್ಣ ಬದಲಾಯಿಸಿತು.



ಖಾಸಗೀಕರಣ ನೀತಿಗಳ ಭಾಗವಾಗಿ

ಅಂಗನವಾಡಿ ಕೇಂದ್ರಗಳಿಗೆ ಬರುವ ಆಹಾರದ ಬದಲಿಗೆ ಬಿಸಿಯೂಟದಿಂದ ಮತ್ತು ಬೆಂಗಳೂರು,







ಬಳ್ಳಾರಿ, ಮಂಗಳೂರು, ಹುಬ್ಬಳ್ಳಿ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ಇಸ್ಕಾನ್‌ನಿಂದ ಊಟ ಕೊಡಬೇಕೆಂಬ ಪ್ರಯತ್ನವನ್ನು ಸಂಘಟನೆ ಜಾರಿ ಮಾಡಲು ಬಿಡಲಿಲ್ಲ. ಕೇಂದ್ರಗಳಿಗೆ ಬರುವ ಆಹಾರ ಸಾಮಗ್ರಿಗಳನ್ನು ಸುಪ್ರಿಂಕೋರ್ಟ್ ಆದೇಶವೆಂದೂ ಹೇಳಿ ಸ್ತ್ರೀ ಶಕ್ತಿ ಸಂಘಟನೆಗಳಿಂದ ಸರಬರಾಜು ಮಾಡಲು ಇಲಾಖೆ ಸರ್ಕಾರಿ ಆದೇಶವನ್ನು ತಂದಿತು.

ಈ ಸಮಸ್ಯೆಗಳ ವಿರುದ್ಧ ಸಂಘಟನೆ ನಡೆಸಿದ ಹಗಲಿರುಳ ಹೋರಾಟ ಶ್ರಮದಿಂದ ಈ ಸುತ್ತೋಲೆಗಳನ್ನು ನೌಕರರ ಪರವಾಗಿ ಬದಲಾವಣೆ ಮಾಡಲು ಸಾಧ್ಯವಾಯಿತು.

ಅಂಗನವಾಡಿ ನೌಕರರ ಮೇಲೆ ದೈಹಿಕ ಹಲ್ಲೆಗಳು, ಕೇಂದ್ರ ನಡೆಸುವಾಗ ಬರುವಂತಹ ಸಮಸ್ಯೆಗಳಿಗೆ ಸಂಘಟನೆ ಸ್ಪಂಧಿಸಿದ ರೀತಿ ಇಂದು ರಾಜ್ಯ ಸಿಐಟಿಯು ನೇತೃತ್ವದ ಅಂಗನವಾಡಿ ನೌಕರರ ಪ್ರಭಾವಿಯುತವಾಗಿ ಬೆಳೆಯಲು ಸಾಧ್ಯವಾಗಿದೆ.

ವರದಿಯ ಮೇಲೆ ಪ್ರತಿನಿಧಿಗಳ ಚರ್ಚೆ:

75 ತಾಲೂಕುಗಳಲ್ಲಿ ಮತ್ತು 15 ಜಿಲ್ಲೆಗಳಲ್ಲಿ ಜಿಲ್ಲಾ ಸಮ್ಮೇಳನಗಳು ನಡೆದಿವೆ.

ರಾಜ್ಯದಲ್ಲಿ ಅಂಗನವಾಡಿ ನೌಕರರ ಸಮಸ್ಯೆಗಳಿಗಾಗಿಯಷ್ಟೇ ಅಲ್ಲದೆ ಜನವಾದಿ ಮಹಿಳಾ ಸಂಘಟನೆ, ಸ್ತ್ರೀಶಕ್ತಿ ಗುಂಪಿನ ಮಹಿಳೆಯರು, ಬಿಸಿಯೂಟ ನೌಕರರನ್ನು ಕಟ್ಟಡ, ಹಮಾಲಿ ಕಾರ್ಮಿಕರನ್ನು, ಮತ್ತು ದೇವದಾಸಿ, ಬೀಡಿ ಮಹಿಳೆಯರು ಸಂಘಟಿಸುವುದರೊಟ್ಟಿಗೆ ರೈತ ಸಂಘದ ನಾಯಕರಾಗಿ, ಸಿಐಟಿಯುವಿನ ಜಿಲ್ಲಾ ಅಧ್ಯಕ್ಷರಾಗಿ, ಪ್ರಮುಖ ಪದಾಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಿರುವುದನ್ನು ಸಮ್ಮೇಳನದ ವಿವಿಧ ಪ್ರತಿನಿಧಿಗಳು ಅತ್ಯಂತ ಹೆಮ್ಮೆಯಿಂದ ಹೇಳುತ್ತಿದ್ದರು.

ಇನ್ನು ಸಮಸ್ಯೆಗಳ ಪಟ್ಟಿ ಬೃಹದಾಕಾರವಾಗಿ ತೆರೆದುಕೊಳ್ಳುತ್ತಲೇ ಹೋಗುತ್ತಿತ್ತು. ಪ್ರಮುಖವಾಗಿ ರಾಜ್ಯದಲ್ಲಿ ತಿಂಗಳಿಗೆ ಸರಿಯಾಗಿ ಬಾರದ ಗೌರವಧನ, ಭಾಗ್ಯಲಕ್ಷ್ಮಿ ಸ್ತ್ರೀಶಕ್ತಿ, ಮತದಾರರ ಪಟ್ಟಿಯ ಪರಿಷ್ಕರಣೆ, ಸರ್ವೆ, ಪಲ್ಸ್‌ಪೋಲಿಯೋ ತರಹದ ಹಲವಾರು ಕೆಲಸ ಒತ್ತಡ ಹೆಚ್ಚಾಗಿ ಐಸಿಡಿಎಸ್ ಕೆಲಸ ಮಾಡಲು ಸಮಯವಿಲ್ಲ. ಆರ್‌ಸಿಹೆಚ್ ಯೋಜನೆಯಡಿ ಬರುವ 10 ಸಾವಿರಗಳ ಫಲವನ್ನು ಎಲ್ಲರೂ ತೆಗೆದುಕೊಳ್ಳಲು ಇವರ ಮೇಲೆ ಒತ್ತಡ, ಹೆಚ್ಚುವರಿ ಕೆಲಸ ಮಾಡಲು ಹೋಗಿ ಇವರು ಅಂಗನವಾಡಿ ಕೇಂದ್ರದಲ್ಲಿ ಇಲ್ಲದಿದ್ದಾಗ ಇವರಿಗೆ ವಿವರಣೆ ಕೇಳಿ ನೋಟಿಸು, ಅಧಿಕಾರಿಗಳ ಮುಲಾಜಿಗೆ ಲಿಖಿತ ರೂಪದಲ್ಲಿ ಕೆಲಸ ಮಾಡಬೇಕೆಂಬ ಆದೇಶವಿಲ್ಲದಿದ್ದರೂ ಕೆಲಸ ಮಾಡಿ ಏನೂ ಸಿಗದಿರುವುದು, ಭಾಗ್ಯಲಕ್ಷ್ಮಿ ಯೋಜನೆ ಮುಖ್ಯಮಂತ್ರಿಗಳ ಒಂದು ಬಿಡಿಗಾಸನ್ನು ಕೊಡದೆ ಒಬ್ಬ ಫಲಾನುಭವಿಯನ್ನು ಆಯ್ಕೆ ಮಾಡಿ ಅವರು ಸರ್ಕಾರದಲ್ಲಿ ಆಯ್ಕೆಯಾಗಬೇಕಾದರೆ 600-750 ರೂ. ಖರ್ಚು, ಈ ಖರ್ಚನ್ನು ಅಂಗನವಾಡಿ ಕಾರ್ಯಕರ್ತೆಗೆ ಕೊಟ್ಟ ಜನಪ್ರತಿನಿಧಿಗಳ ಬಳಿ ಲಂಚ ಕೊಟ್ಟೆ ಎಂಬ ಆರೋಪ, ಇದರಿಂದ ಅಂಗನವಾಡಿ ನೌಕರರು ಸಾರ್ವಜನಿಕ ಸಭೆಗಳಲ್ಲಿ ಅವಮಾನಕ್ಕೊಳಗಾಗಿ ಅಮಾನತ್ತು ಆಗುತ್ತಿದ್ದಾರೆ. ಮುಖ್ಯಮಂತ್ರಿಗಳ ಕನಸಿನ ಯೋಜನೆಗೆ ದುಡಿಯುವ ಅಂಗನವಾಡಿ ನೌಕರರಿಗೆ ಶೂನ್ಯ.

ಇದೇ ರೀತಿ ಅಂಗನವಾಡಿ ನೌಕರರಿಂದಲೇ ಜನ್ಮ ಪಡೆದ ಸ್ತ್ರೀ ಶಕ್ತಿಗಳು ಇಂದು ರಾಜ್ಯದಲ್ಲಿ 1.40 ಸಾವಿರ ಗುಂಪುಗಳಲ್ಲಿ 20 ಲಕ್ಷ ಮಹಿಳೆಯರು ಸದಸ್ಯರಾಗಿದ್ದಾರೆ. ಇವರ ಒಟ್ಟು ಉಳಿತಾಯ 553.81 ಕೋಟಿ. ಸರ್ಕಾರ ಕೇವಲ 99.628 ಗುಂಪುಗಳಿಗೆ ಮಾತ್ರ 617.50 ಕೋಟಿ ಸಾಲ ನೀಡಿದೆ. ಈ ರೀತಿ ತಾರತಮ್ಯ ಮಾಡುವುದರಿಂದ ಗುಂಪುಗಳ ಮಧ್ಯದ ಜಗಳದಿಂದ ಅಂಗನವಾಡಿ ನೌಕರರಿಗೆ ಸಮಸ್ಯೆಯಾಗುತ್ತಿದೆ.

ಸಮ್ಮೇಳನದ ನಿರ್ಣಯಗಳು:

1. ಮಾನವ ಸಂಪನ್ಮೂಲಗಳಿಗೆ ಪೂರಕವಾದ ಕೆಲಸವನ್ನು ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಖಾಯಂ, ಕನಿಷ್ಠಕೂಲಿ ಮತ್ತು ನಿವೃತ್ತಿ ವೇತನಕ್ಕಾಗಿ,
2. ಅಸಂಘಟಿತ ಕಾರ್ಮಿಕರ ಚಳುವಳಿಯನ್ನು ಬೆಂಬಲಿಸಿ
3. ಐಸಿಡಿಎಸ್ ಖಾಸಗೀಕರಣ ವಿರೋಧಿ
4. ರೇಷನ್ ವ್ಯವಸ್ಥೆಯ ಸಾರ್ವತ್ರಿಕರಣ ಮತ್ತು ವಸತಿ ಯೋಜನೆಗಾಗಿ ಒತ್ತಾಯಿಸಿ
5. ಕೋಮುವಾದ ವಿರೋಧಿಸಿ, ಸೌಹಾರ್ದ ಕರ್ನಾಟಕ ರಕ್ಷಿಸಿ
6. ದುಡಿಯುವ ಮತ್ತು ಎಲ್ಲಾ ಮಹಿಳೆಯರ ಮೇಲಾಗುತ್ತಿರುವ ಹೆಚ್ಚುತ್ತಿರುವ ಹಿಂಸಾಚಾರವನ್ನು ವಿರೋಧಿಸಿ

1. ಕಾರ್ಮಿಕವರ್ಗ ಮತ್ತು ಪ್ರಜಾಪ್ರಭುತ್ವ ಆಂದೋಲನದಲ್ಲಿ ಅಂಗನವಾಡಿ ನೌಕರರ ಪಾತ್ರ.
2. ಐಸಿಡಿಎಸ್ ಖಾಸಗೀಕರಣದ ಕುರಿತು
3. ಕೋಮುವಾದದ ಅಪಾಯಗಳ ಬಗ್ಗೆ

3 ಆಯೋಗಗಳನ್ನು ರಚಿಸ ಚರ್ಚೆಗೆ ಬಿಡಲಾಯಿತು. ಈ ಚರ್ಚೆಗಳು ಬಹಳ ಗಂಭೀರವಾಗಿ ನಡೆದು ಹಲವು ಶಿಫಾರಸ್ಸುಗಳನ್ನು ಮಾಡಿದರು.

ಕೋಮುವಾದಕ್ಕೆ ಸಂಬಂಧಿಸಿ "ಅಂಗನವಾಡಿ ಕೇಂದ್ರಗಳಲ್ಲಿ ಕೋಮು ಸೌಹಾರ್ದತೆಯನ್ನು ಮೊಳಕೆಯಿಂದಲೇ ಬೆಳೆಸಲು ಸಾಂಸ್ಕೃತಿಕ ಕಾರ್ಯಕ್ರಮಗಳಾದ ಹಾಡು, ಕುಣಿತ, ಸಣ್ಣ ಸಣ್ಣ ಕಥೆಗಳು, ನೃತ್ಯ ರೂಪಕಗಳು, ದೃಶ್ಯಗಳನ್ನು ಹೊಸೆದು ಹೇಳಿಕೊಡುವುದು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಕೂಲಿಕಾರರು ಮತ್ತು ಅಸಂಘಟಿತ ಕ್ಷೇತ್ರದ ಕಾರ್ಮಿಕರ ಮಕ್ಕಳೊಟ್ಟಿಗೆ ಇವರ ಕುಟುಂಬಗಳಲ್ಲೂ ಇಂತಹ ಸೌಹಾರ್ದ ಪ್ರಜ್ಞೆಯನ್ನು ಮೂಡಿಸುವ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಈ ಸಮ್ಮೇಳನದಲ್ಲಿ 19 ಜನ ಪದಾಧಿಕಾರಿಗಳು, 31 ಜನ ರಾಜ್ಯಸಮಿತಿ ಸದಸ್ಯರು, ಹಾಗೂ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನೊಳಗೊಂಡು ಎಲ್ಲಾ ತಾಲೂಕಿನ 154 ಜನರ ರಾಜ್ಯ ಮಂಡಳಿಯನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ **ಶಾಂತ ಎನ್ ಘಂಟೆ** (ಗುಲ್ಬರ್ಗಾ) ಪ್ರಧಾನ ಕಾರ್ಯದರ್ಶಿಯಾಗಿ **ಎಸ್.ವರಲಕ್ಷ್ಮಿ** ಮತ್ತು ಖಜಾಂಚಿಯಾಗಿ **ಕಮಲಾ** (ತುಮಕೂರು) ಆಯ್ಕೆಯಾದರು.

ದೋಸ್ತಾನಿಗೆ ಜಾತಿ ಧರ್ಮಗಳುಂಟೇ ?

ಅನ್ನ ಅರಿವೆಯಷ್ಟೇ ಅಲ್ಲ ಅನುವು-ಆಪತ್ತು ಎದುರಾದಾಗಲೂ ಇವರು ಪರಸ್ಪರ ಯಾವ ಕಲ್ಮಷವಿಲ್ಲದೆ ಬದುಕು ಹಂಚಿಕೊಳ್ಳುತ್ತಾರೆ. ಅದ್ಹೇಗೆ ಈ ಪರಿಯ ಬಾಂಧವ್ಯ ಬೆಸೆದುಕೊಂಡಿರಲು ಸಾಧ್ಯ

ಲಿಂಗಾಯಿತರ ಬಸವ್ವ, ಗಂಗಾಮತಸ್ಥ ಗುಂಡಮ್ಮ ಮತ್ತು ದಲಿತರ ಈರಮ್ಮ ಮೂವರು ಹೆಚ್ಚು ಕಡಿಮೆ 45-50 ವಯಸ್ಸಿನವರು. ಕೆದರಿದ ತಲೆ, ತೇಪೆ ಹಚ್ಚಿದ ಸೀರೆ, ನಲುಗಿದ ಶರೀರ, ತುತ್ತು ಅನ್ನಕ್ಕಾಗಿ ಪರದಾಡುವ ಕಣ್ಣುಗಳು, ಬದುಕಲೆಂದೇ ಹರತೊಟ್ಟು ಬೀಗುತ್ತಿರುವ ಭಾವ. ಈ ಎಲ್ಲ ಅಂಶಗಳನ್ನು ಸಮಾನವಾಗಿ ಮೈಗೂಡಿಸಿಕೊಂಡಿರುವ ಮೂವರನ್ನು ಬೆಸೆದ ಭಾವಬಳ್ಳಿ ಒಂದೇ. ಅದು ಗುಲ್ಬರ್ಗಾದ ಬಹುಜನತೆಯ ಆರಾಧ್ಯ ದೈವವಾಗಿರುವ ರಾಣೋ.ಜಿಪೀರ ದರ್ಗಾ ಅಥವಾ ರುಕ್ಮೋದ್ದಿನ ತೋಲಾ ಎಂಬ ಹಿಂದೂ ಮುಸ್ಲಿಂ ಭಾವೈಕ್ಯತೆಯ ಕೊಂಡಿ. ಗುಲ್ಬರ್ಗಾ ನಗರ ಕೇಂದ್ರದಿಂದ ಆಳಂದ ರಸ್ತೆಗೆ ಆತುಕೊಂಡಿರುವಂತೆ 5-6 ಕಿಲೋ ಮೀಟರ್ ಫಾಸಲೆಯಲ್ಲಿರುವ ಪ್ರಾಚೀನ ಸೂಫಿಸಂತರ ಸಮಾಧಿಸ್ಥಾನವದು. ಬಸಮ್ಮ, ಗುಂಡಮ್ಮ ಮತ್ತು ಈರಮ್ಮ ಮೂವರು ಈ ಸೂಫಿ ಸಂತರ ದರ್ಗಾದ ಫಾಳಿಯಲ್ಲಿ ಕಸಬಳಿದು, ಭಕ್ತಾದಿಗಳು ನೀಡುವ ಖೈರಾತ್ (ಭಿಕ್ಷಾನ್ನ)ದಿಂದ ಬದುಕುತ್ತಿರುವ ಭಾವುಕರು. ರುಕ್ಮೋದ್ದಿನ್ ಮತ್ತು ರಣೋಜಿಪೀರ, ಸಂತರ ದೋಸ್ತಾನಿಯ ಚರಿತ್ರೆಯ ಫಲಕುಗಳು ಇವರನ್ನು ಪರಸ್ಪರರ ಜಾತಿ-ಧರ್ಮಗಳನ್ನು ಮೀರಿ ನಿಂತು ಕರುಳಬಳ್ಳಿಯ ಬಂಧದಲ್ಲಿ ಬೆಸೆಯುವಂತೆ ಮಾಡಿವೆ. ಇವರು ಅದೆಂಥ ಆತ್ಮೀಯ ಗೆಳತಿಯರೆಂದರೆ ರಾಣೋಜಿಪೀರ ದರ್ಗಾದ ಒಂದೊಂದು ಪಾವಟಿಗೆಗಳ ಮೇಲೆ ಕುಳಿತು ಭಿಕ್ಷೆ ಪಡೆಯುತ್ತಿರುವಾಗಲೂ ಬಂದ ಧನ-ಅನ್ನ-ಇತ್ಯಾದಿ ಯಾವುದೇ ವಸ್ತುವಿರಲಿ ಹಂಚಿಕೊಂಡೇ ತಿಂದಾರು.

ಅನ್ನ ಅರಿವೆಯಷ್ಟೇ ಅಲ್ಲ ಅನುವು-ಆಪತ್ತು ಎದುರಾದಾಗಲೂ ಇವರು ಪರಸ್ಪರ ಯಾವ ಕಲ್ಮಷವಿಲ್ಲದೆ ಬದುಕು ಹಂಚಿಕೊಳ್ಳುತ್ತಾರೆ. ಅದ್ಹೇಗೆ ಈ ಪರಿಯ ಬಾಂಧವ್ಯ ಬೆಸೆದುಕೊಂಡಿರಲು ಸಾಧ್ಯ ಎಂದು ಕೆದಕುತ್ತಾ ಹೋದಂತೆ ತೆರೆದುಕೊಂಡದ್ದು ರುಕ್ಮೋದ್ದಿನ ಮತ್ತು ರಾಣೋಜಿಪೀರರ ಕಥೆಗಳು. ಹೈದ್ರಾಬಾದ್ ಕರ್ನಾಟಕವು ಶರಣ-ಸೂಫಿ, ಸಂತ-ಅವಧೂತ ಮಹಂತರ ಆಡೊಂಬಲ. ಇಲ್ಲಿಯ ಸೌಹಾರ್ದತೆಯ ಫಲಕಗಳು ಅನಂತ ಮತ್ತು ಅನ್ಯೋನ್ಯ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಾಯೋಗಿಕ ಬದುಕಿನ ಜೀವಸಂವೇದಿ ನೆಲೆಗಳನ್ನು ಮೈಗೂಡಿಸಿಕೊಂಡಿವೆ. ಹೀಗಾಗಿ ಈ ಭಾಗದಲ್ಲಿ ದರ್ಗಾ, ಮಂದಿರ, ಮಠ, ಆಶ್ರಮ, ಬಸದಿ, ವಿಹಾರ, ಚರ್ಚ್ ಮುಂತಾದ ಧಾರ್ಮಿಕ ತಾಣಗಳು ಸಮನ್ವಯತೆ ಮತ್ತು ಅಖಂಡ ಜೀವಪರ ನಂಬಿಕೆಗಳನ್ನು ಪೋಷಿಸಿಕೊಂಡುಬರುತ್ತಿವೆ. ರಾಣೋಜಿಪೀರ ದರ್ಗಾ ಕೂಡಾ ಇಂಥ ಸೂಫಿ ಪರಂಪರೆಗೆ ಸೇರಿದ ತುಂಬಾ ಮಹತ್ವಪೂರ್ಣ ನಂಬಿಕೆಗಳ ನೆಲೆಗಳಲ್ಲೊಂದಾಗಿದೆ.

ಅರಬ್‌ಸ್ತಾನದಿಂದ ಕ್ರಿ.ಶ 15ನೇ ಶತಮಾನದಲ್ಲಿ ದಖ್ಖನ್ ಭಾಗಕ್ಕೆ ಪ್ರಯಾಣ ಬೆಳೆಸಿದ್ದ "ಮೊಹಮ್ಮದ್ ಗೇಸುದರಾಜ್ ಖಾಜಾ ಬಂದಾ ನವಾಜ್" ಎಂಬ ಮಹಾನ್ ಸೂಫಿ ಸಂತನೊಂದಿಗೆ ಕಾಣಿಸಿಕೊಂಡ ರುಕ್ಮೋದ್ದಿನ್‌ರು ಅಂತರಂಗದ ಸಾಧಕರು ಸಾಧಕರು. ಅಲ್ಲಾಹುವಿನ ಕರುಣಾಮಯ ಬೆಳಕಿನ ಹೊನಲಿನಲ್ಲಿ ಸಚರಾಚರವನ್ನು ಏಕೋಭಾವದಿಂದ ಪರಿಭಾವಿಸುವ ಸಂತರು. ಇವರು ಆ ಹೊತ್ತು ಗುಲ್ಬರ್ಗಾದ ತುದಿ ದಂಡೆಯಲ್ಲಿರುವ ಪ್ರಶಸ್ತ ಸ್ಥಳವೊಂದರಲ್ಲಿ ಬಹುದಿನದವರೆಗೆ ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತುಕೊಂಡರಂತೆ. ಎಷ್ಟೋ ದಿವಸಗಳ ನಂತರ ಗೆಳೆಯನ ಭೇಟಿಗೆಂದು ಖಾಜಾ ಬಂದಾನವಾಜ್‌ರು ಬಂದರಂತೆ. ಗೆಳೆಯನ ಬರುವಿನಿಂದ ಖುಷಿಗೊಂಡ ರುಕ್ಮೋದ್ದಿನ್ ಏಳಬೇಕು ಎನ್ನುವಷ್ಟರಲ್ಲಿ ಅವರ ತೊಡೆಗಳೇ ಸರಿದಾಡಲಿಲ್ಲವಂತೆ. ಏಕೆಂದರೆ ಬಹುದಿನಗಳವರೆಗೆ ಒಂದೇ ಸ್ಥಿತಿಯಲ್ಲಿ ಕುಳಿತಿದ್ದರಿಂದ ಕಾಲುಗಳು ರಾಣೋಜಿ ರುಕ್ಮೋದ್ದಿನ್‌ರ ಯಮಳ ಸಮಾಧಿ ಇದಿರು ನಿಂತು ಪ್ರಾರ್ಥಿಸುತ್ತಿರುವ ಅಸಂಖ್ಯಾತ ಮುಗ್ಧ ಭಕ್ತರನ್ನು ಹಿಂದೂ ಯಾ ಮುಸ್ಲಿಂ ಎಂದೊ ವಿಂಗಡಿಸಲಾದಿತೇ? ಲೋಕದ ಧರ್ಮಗಳೆಲ್ಲವೂ ಅದೂ ಪ್ರವಾದಿ ಧರ್ಮವೇ ಇರಲಿ, ಅಪೌರುಷೇಯ ಧರ್ಮವೇ ಇರಲಿ ಪರಸ್ಪರ ಪ್ರೀತಿಸುವುದನ್ನು, ಗೌರವಿಸುವುದನ್ನು ಮಾತ್ರ ಕಲಿಸಬೇಕಲ್ಲವೇ? ಹೀಗೆಂದು ಹೇಳಿದವರು ದೊಡ್ಡ ಧರ್ಮ ದುರಂದರರಲ್ಲ. ರುಕ್ಮೋದ್ದಿನ್ ತೋಲಾ ದರ್ಗಾದ ಬಳಿ ಭಿಕ್ಷೆ ಬೇಡಲೆಂದು ಕುಳಿತ ಬಸಮ್ಮ, ಗುಂಡಮ್ಮ, ಈರಮ್ಮನೆಂಬ ಶ್ರೀಸಾಮಾನ್ಯ ಮಹಿಳೆಯರು. ಅವರ ಮಾತಿಗೆ ಈಗ ದಂಗಾಗುವ ಸರದಿ ನಮ್ಮದಾಗಿತ್ತು. "ಬಾಯೋರೇ.... ಈ ದರ್ಗಾದ ಪಾವಟಿಗೆ ಮುಟ್‌ದ್ರ ಸಾಕು. ದುಶ್ಮನಕಿ ತಾನೇ ಹೋತಾದ. ಇಲ್ಲಿ ಬಂದವರ್ ಬಲ್ಲಿ ದೋಸ್ತಿನೇ ಬರತಾದ. ಇಲ್ಲಿ ಕಪ್ಪ ಕಡಿ (ಮಾಂಸಾಹಾರ) ತಿಂಬವರ್ ನಡ್ಯಾಲ್ ಖರೇ ಅದಾ. ಆದ್ರ ಜಾತಿ ಭೇದಾ ಬಿಲ್‌ಕುಲ್ ನಡ್ಯಾಲ್‌ರ್ರಿ. ಬೇಕಾದವ್ರು ಬರ್‍ಲಿ ಜಾತಿ ಹಮ್ ಅಳದೇ ಇಲ್ಲಿ ಬರಬೇಕ್ರಿ" ಎಂದರು. ಕಿತ್ತುತಿನ್ನುವ ಅವರ ಬಡತನದ ನಡುವೆಯೂ ಪೋಷಿಸಿಕೊಂಡು ಬಂದಿರುವ ಅವರ ಹೃದಯ ಶ್ರೀಮಂತಿಕೆ ಕಂಡು ಎಂಥವರೂ ತಲೆ ತಗ್ಗಿಸಲೇಬೇಕು.

ರಾಣೋಜಿ, ರುಕ್ಮೋದ್ದಿನ್‌ರ ಬದುಕಿನ ಸುತ್ತ ಹೆಣೆಯಲಾದ ಉತ್ಪ್ರೇಕ್ಷಿತ ಸಂಗತಿಗಳನ್ನು ಬದಿಗಿಟ್ಟು ವಾಸ್ತವದ ನೆಲೆಯಲ್ಲಿ ನಿಂತು ನೋಡಿದಾಗಲೂ ಅವರಿಬ್ಬರ ನಡುವಿನ ದೋಸ್ತಿಯ ಗಾಢತೆ ಇದೆಯಲ್ಲ ಅದೂ ಇವತ್ತು ನಮಗೆ ಬೇಕಾಗಿರುವುದು. ಗೆಳೆಯನಿಗಾಗಿ ಬ್ರಾಹ್ಮಣನೊಬ್ಬ ಇಸ್ಲಾಂಗೆ ಪರಿವರ್ತನೆಗೊಳ್ಳುವುದು. ಅದೇ ಗೆಳೆಯನಿಗಾಗಿ ಇಸ್ಲಾಂನೊಬ್ಬ ಮಾಂಸಾಹಾರ ತ್ಯಜಿಸಿ ಹೊಸದೊಂದು ಪರಂಪರೆ ಹುಟ್ಟು ಹಾಕುವುದು ಇದೆಯಲ್ಲ ಇದೇ ಇವತ್ತು ವರ್ತಮಾನದ ಕೋಮುವಾದಕ್ಕೆ ಉತ್ತರವಾಗಬಲ್ಲದು. ದರ್ಗಾದ ದರ್ಶನ ಮಾಡಿ ಕೆಳಗೆ ಬಂದು ತಟ್ಟಿ ಹೋಟೆಲೊಂದರಲ್ಲಿ ಮಿರ್ಚಿ-ಭಜಿ, ಮಂಡಾಳ ಖಾರಾ ತಿನ್ನುತ್ತ ಕುಳಿತಿರುವಾಗಲೇ ಪಕ್ಕದ ಸಿದ್ದಪ್ಪನನ್ನು ಕರೆದು ಹೊಟೇಲ್ ಇಸ್ಮಾಯಿಲ್ ಚಾಚಾ ನಮ್ಮೆಲ್ಲರಿಗೂ ಫೇಷಲ್ ಟೀ ಕೊಡಲು ಹೇಳಿದ. ಯಾಕ ಚಾಚಾ ನೀ ಟೀ ಇಟ್ಟಿಲ್ಲೇನು? ಎಂದರೆ, ಅಯ್ಯೊ ಆ ಪಾರಭೀ ನಮ್ಮೂರಿಂದೆ ಅದಾರಿ. ಊರಾಗ ಬ್ಯಾರೆ ದಂಧ ಇಲ್ಲಾ. ಅದಕ್ ನಾನೇ ಕಿಲ್ಲಿ ರಾಣೋಜಿ ಪೀರನ ಬಲ್ಲಿ ಬಾರಲೇ ಅಂದು ಕರಕೊಂಡು ಬಂದೀನ್ರಿ' ಅಂದಾ. ನೋಡ್ರಿ ಬಾಯೋರಾ ಇರಾತನಾ ನಮ್ಮವರು, ತಮ್ಮವರು ಅಂತ ಯಾಕ ಮಾಡ್ಯಾರ್‍ರಿ, ಎಲ್ಲೋರು ಬದುಕ್‌ಬೇಕಲ್‌ರಿ. ನಾ ಒಬ್ನೆ ಭಾಳ ರೊಕ್ಕ ಫಳಿಸಿ ಏನ ಹೊತಗೊಂಡ ಹೋಗಾದದಾ ಏನ್ರೀ. ಇದ್ದಿದ್‌ರಾಗನೇ ಎಲ್ಲೋರು ಹಂಚ್‌ಕೊಂಡ ತಿನ್ನಬೇಕ್ರಿ. ಅದ್ಕೆ ಮನುಷ್ಯಾ ಅಂತಾರಿ" ಅಂದ ಇಸ್ಮಾಯಿಲ್‌ನ ಮಾತಿನಲ್ಲಿ ಅಡಗಿದ ಸರಳಸತ್ಯ ನಮ್ಮ ಎಲ್ಲರಿಗೂ ಯಾಕ ತಿಳಿವಲ್ದು. ಕೋಮುದ್ವೇಷದ ದಳ್ಳುರಿಯಲ್ಲಿ ಭಾರತವೆಂಬ ಬಹುಮುಖಿ ಸಮನ್ವಯ ಪರಂಪರೆಯ ಮುಗ್ಧರನ್ನು ಬೇಯಿಸುತ್ತಿರುವ ಸಂಘ ಪರಿವಾರಿಗಳು ಬಾಂಬ್ ಸಿಡಿಸಿ ಗುಂಡಿನ ಮಳೆ ಗರೆಯುತ್ತಿರುವ ಉಗ್ರರು ಒಂದು ಸಲ, ಒಂದೇ ಒಂದು ಸಲ 'ಇಸ್ಮಾಯಿಲ್‌ನ ಬಸಮ್ಮ, ಗುಂಡಮ್ಮ, ಈರಮ್ಮರ ಮಾತು ಕೇಳಬಾರದೇ? ರಾಣೋಜಿ, ರುಕ್ಮೋದ್ದಿನ್‌ರ ದೋಸ್ತಿಯನ್ನು ಒಂದು ಧ್ಯಾನಸ್ಥ ಸ್ಥಿತಿಯಲ್ಲಿ ಅವಲೋಕಿಸಬಾರದೇ? ಹೀಗೆಂದು ಕೇಳಿದಳು ನನ್ನೊಂದಿಗಿನ ಅಪರೂಪದ ಕ್ರಾಂತಿ ಕಂಗಳ ಗೆಳತಿ ನೀಲಾ. ಥಟ್ಟನೆ ನೆನಪಾಯ್ತು. ಹಿಂದಿ ಸಿನೆಮಾವೊಂದರ ಹಾಡಿನ ಸಾಲು, ಸಲಾಮತ್ ರಹೇ ದೋಸ್ತಾನಾ ಹಮಾರಾ।। ಬನೇ ಚಾಹೇ ದುಷ್ಮನ್ ಜಮಾನಾ ಹಮಾರಾ।।

■ ಡಾ. ಮೀನಾಕ್ಷಿ ಬಾಳಿ

ಮತಾಂಧ ಸಿದ್ಧಾಂತ ಭಯೋತ್ಪಾದನೆ....

ಪುಟ 5 ರಿಂದ

ವಿತರಣೆ, ಇವು ಎಲ್ಲಾದರೂ ಜಾರಿ ಆಗಿದೆಯೇ? ಆಗುವುದಿಲ್ಲ. ಇನ್ನೊಬ್ಬರ ಮೇಲೆ ಟೀಕೆ ಮಾಡಿಕೊಂಡು ತಿರುಗುವುದೇ ಅಭಿವೃದ್ಧಿ ಬಿಜೆಪಿಯೇ ಪರಿಹಾರ ಎಂಬುದರ ಹಿಂದಿನ ಉದ್ದೇಶ ಇದು.

3. ರಾಮಮಂದಿರ ಕಟ್ಟಲು ಸಂಗ್ರಹಿಸಿದ ಹಣ ಶ್ರೀರಾಮ ಪಾದಕ್ಕೆ ಅರ್ಪಿಸಲಾಗಿದೆ. ಈ ಸರ್ಕಾರದಲ್ಲಿರುವವರಿಗೆ ಯಾರಿಗಾದರೂ ಕರ್ನಾಟಕದ ಕೃಷಿ ಬಗ್ಗೆ ಗೊತ್ತಿದೆಯಾ...?

ಈ ದೇಶದ ಭವ್ಯ ಪರಂಪರೆಗೆ ಧಕ್ಕೆ ತರುತ್ತಿದ್ದಾರೆ. ನಮ್ಮ ಜನ ಜಾತ್ಯಾತೀತ ಪರಂಪರೆಯನ್ನು ಕಟ್ಟಿ ಬೆಳೆಸಿದವರು. ಬುದ್ಧನಿಂದ ಹಿಡಿದು ಎಲ್ಲರನ್ನು ಸೈದ್ಧಾಂತಿಕ ಭ್ರಷ್ಟರನ್ನಾಗಿಸಿದ ಸಂಘ ಪರಿವಾರ ಮೊನ್ನೆ ಕನಕದಾಸರನ್ನು ಸಾಯಿಸಿತು. ಕುವೆಂಪುರವನ್ನು ಜಾತಿಯ ಬಲೆಯಲ್ಲಿ ಕಟ್ಟಿ ಹಾಕಲು ಹವಣಿಸುತ್ತಿದ್ದಾರೆ. ನಮ್ಮ ಪರಂಪರೆಯನ್ನು ಉಳಿಸಿಕೊಳ್ಳಬೇಕಾಗಿದೆ ಎಂದರು.

ಮಾಲೆಗಾಂವ್ ಸ್ಫೋಟದಲ್ಲಿ ಭಾಗಿಯಾ 'ಅಭಿನವಭಾರತ' ಸಂಘಟನೆ ವಿ.ಡಿ.ಸಾವರ್ಕರ್ ಕಟ್ಟಿದ ಸಂಘ ಗಾಂಧೀಜಿ ಹತ್ಯೆಯಲ್ಲಿ ಆರೋಪಿ ನಂ.7 ಆಗಿತ್ತು. ಇದು ಹಿಂದೂ ಭಯೋತ್ಪಾದನೆಯನ್ನು ಬೆಳೆಸುತ್ತಿದೆ. ಭಯೋತ್ಪಾದನೆಯು ವಾಸ್ತವವಾಗಿ ಧರ್ಮ ವಿರೋಧಿಯಾದುದು.

ಹಿಟ್ಲರ್‌ನ ರಾಷ್ಟ್ರೀಯವಾದದ ಸಮಾಜವಾದಕ್ಕೂ ಹಾಗೂ ಅವನ ಅನುಯಾಯಿಗಳಾದ ಆರ್‌ಎಸ್‌ಎಸ್‌ನ ಸಾಂಸ್ಕೃತಿಕ ರಾಷ್ಟ್ರೀಯ ವಾದಕ್ಕೂ ಸಮಾನತೆ ಇದೆ. ಜರ್ಮನಿಯಲ್ಲಿ ಹಿಟ್ಲರ್ ಮಾಡಿದ್ದನ್ನೆ ಆರ್‌ಎಸ್‌ಎಸ್ ಭಾರತದಲ್ಲಿ ಮಾಡಲು ಹವಣಿಸುತ್ತಿದೆ ಎಂದು ವಿವರಿಸಿದರು. ಎಲ್ಲದಕ್ಕೂ ಮುಸ್ಲಿಂರೇ ಕಾರಣ ಎಂದು ಬಿಂಬಿಸಲಾಗುತ್ತಿದೆ. ಪಾಕಿಸ್ತಾನ- ಬಾಂಗ್ಲಾದೇಶ ಎಲ್ಲಕ್ಕೂ ಹೊಣೆ ಎಂದು ಅವೆರಡರ ಜೊತೆ ಚೀನಾವನ್ನು ಭಾರತದ ಶತ್ರುಗಳೆಂದು ಬಿಂಬಿಸಲಾಗುತ್ತಿದೆ. ಇದು ಅಪಾಯಕರ ಎಂದು ತಿಳಿಸಿದರು.

ಸರ್ವ ಭ್ರಷ್ಟಮಯ: ವಿಧಾನಸೌಧವು ಸರ್ವ ಭ್ರಷ್ಟಮಯ ಆಗಿದೆ. ಎಬಿವಿಪಿ, ಭಜರಂಗದಳದ ಜೊತೆಗೆ ಸಂಘಪರಿವಾರದ ನಾಯಕರು ಜನರಿಂದ ವಸೂಲಿ ಮಾಡುತ್ತಿದ್ದಾರೆ. ವಿಧಾನಸೌಧದಲ್ಲಿ ಇತರೇ ಭ್ರಷ್ಟ ಏಜೆಂಟ್‌ಗಳಾಗಿದ್ದಾರೆ ಎಂದು ವಾಸ್ತವತೆಯನ್ನು ಬಿಚ್ಚಿಟ್ಟರು.

ದೇಶದ ವಿರೋಧಿಯಾದ ಈ ಕೋಮುವಾದ, ಜಾತಿವಾದ, ಭಯೋತ್ಪಾದನೆ, ಭಾಷಾಂಧತೆ ಮತ್ತು ಪ್ರಾದೇಶಿಕವಾದ ವಿರುದ್ಧ ರಾಜಿ ರಹಿತ ಹೋರಾಟ ಮಾಡುತ್ತಿರುವ ಸಿಪಿಐ(ಎಂ) ಮತ್ತಿತರ ಸಂಘಟನೆಗಳಿಗೆ ಬೆಂಬಲಿಸಿ ಎಂದು ಮನವಿ ಮಾಡಿದರು.

ಪ್ರಸ್ತಾವನೆಯನ್ನು ಸಿಪಿಐ(ಎಂ)ನ ಸ್ಥಳೀಯ ಸಮಿತಿ ಕಾರ್ಯದರ್ಶಿ ಧರ್ಮೇಶ್ ನಡೆಸಿಕೊಟ್ಟು ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಜಿ.ಪಿ.ಸತ್ಯನಾರಾಯಣ, ಮಂಜುನಾಥ, ಸುರೇಶ್ ಗುರೂಜಿ, ಹೆಚ್.ಟಿ.ಗುರುರಾಜ್, ಡಿವೈಎಫ್‌ಐನ ಗಿರೀಶ್, ಎಸ್‌ಎಫ್‌ಐನ ಪೃಥ್ವಿ ಇದ್ದರು. ○

ಗಜೇಂದ್ರಗಡ : ಕ್ಷಮೆ ಕೇಳಿದ ಸಮಾಜ ಕಲ್ಯಾಣಧಿಕಾರಿ ಹಾಸ್ಟೆಲ್ ವಿದ್ಯಾರ್ಥಿನಿಯರ ಹೋರಾಟಕ್ಕೆ ಜಯ

'ನಮ್ಮ ಹಕ್ಕುಗಳನ್ನು ಕೇಳಿದರೆ ಬೈಯುವ ನಿಮಗೆ ಆ ಅಧಿಕಾರವನ್ನು ಕೊಟ್ಟವರಾರು? ನಾಚಿಕೆಯಾಗುವುದಿಲ್ಲವೇ?' ಇದು ಹೋರಾಟ ನಿರತ ಹಾಸ್ಟೆಲ್ ವಿದ್ಯಾರ್ಥಿನಿಯರ ಪ್ರಶ್ನೆ, 'ಕ್ಷಮಿಸಿ ನನ್ನಿಂದ ತಪ್ಪಾಯಿತು' ಇದು ತಪ್ಪು ಮಾಡಿದ ಗದಗ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಅವರ ಪ್ರತಿಕ್ರಿಯೆ.

ರೋಣ ತಾಲ್ಲೂಕು ವ್ಯಾಪ್ತಿಯ ಗಜೇಂದ್ರಗಡದ ಮೆಟ್ರಿಕ್ ನಂತರ ಸರ್ಕಾರಿ ಎಸ್‌ಸಿ/ಎಸ್‌ಟಿ ಹಾಸ್ಟೆಲ್ ವಿದ್ಯಾರ್ಥಿನಿಯರು ಸೌಲಭ್ಯ ಕೇಳಿದ್ದಕ್ಕೆ ಅವರನ್ನು ಮನಬಂದಂತೆ ನಿಂದಿಸಿ ಅವರ ಮೇಲೆ ಗೂಂಡಾಗಿರಿಯನ್ನು ಪ್ರದರ್ಶಿಸಿದ ಗದಗ ಜಿಲ್ಲಾ ಸಮಾಜಕಲ್ಯಾಣಾಧಿಕಾರಿ ಜೋಶಿ ಅವರನ್ನು ಕೂಡಲೇ ಅಮಾನತುಗೊಳಿಸಬೇಕೆಂದು ಒತ್ತಾಯಿಸಿ ನಗರದಲ್ಲಿ ದಿ:21-11-2008 ರಂದು ನಡೆದ ಪ್ರತಿಭಟನೆಯಲ್ಲಿ ಹೋರಾಟ ನಿರತ ವಿದ್ಯಾರ್ಥಿನಿಯರು ಹಾಗೂ ಅಧಿಕಾರಿಯ ಮಧ್ಯ ಇಂತಹದೊಂದು ಪ್ರಸಂಗ ಏರ್ಪಟ್ಟಿತ್ತು.

ಹಿನ್ನೆಲೆ: ಹನುಮಸಾಗರ, ಸೂಡಿ, ಕುಷ್ಟಗಿ, ಹನುಮನಾಳ, ಯಲಬುರ್ಗಾ ಭಾಗಗಳಿಂದ ಬರುವ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗಜೇಂದ್ರಗಡ ಪ್ರಮುಖ ಶೈಕ್ಷಣಿಕ ಕೇಂದ್ರ. ವಿದ್ಯಾರ್ಥಿಗಳ ಅವಶ್ಯಕತೆಗೆ ತಕ್ಕಂತೆ ನಗರಕ್ಕೆ ಮೆಟ್ರಿಕ್ ನಂತರದ ಬಾಲಕಿಯರ ಹಾಸ್ಟೆಲ್‌ಬೇಕೆಂದು ಸುಮಾರು ವರ್ಷಗಳಿಂದ ಎಸ್‌ಎಫ್‌ಐ ಹೋರಾಟ ನಡೆಸಿತ್ತು. ಸರ್ಕಾರ ಹೋರಾಟಕ್ಕೆ ಮಣಿದು ನಗರಕ್ಕೆ ಹಾಸ್ಟೆಲ್ ನೀಡಿತ್ತು.

ಹಾಸ್ಟೆಲ್ ಪ್ರಾರಂಭವಾಗಿ 2 ವರ್ಷ ಗತಿಸಿದರೂ ಅಲ್ಲಿ ಬರೀ ಅವ್ಯವಸ್ಥೆ. ಇದರಿಂದ ವಿದ್ಯಾರ್ಥಿನಿಯರು ರೋಸಿ ಹೋಗಿದ್ದಾರೆ. ಎಸ್‌ಎಫ್‌ಐ ನಡಿ ಬೀದಿಗಿಳಿಯಲು ಮುಂದಾಗಿದ್ದಾರೆ. ವಿಷಯ ತಿಳಿದ ಸಮಾಜಕಲ್ಯಾಣಾಧಿಕಾರಿ ಯಾರದೋ ಒತ್ತಡಕ್ಕೆ ಮಣಿದು ಹೋರಾಟ ಮಾಡದಂತೆ ಬೆದರಿಕೆ ಹಾಕಿದ್ದಾನೆ, ಬಾಯಿಗೆ ಬಂದಂತೆ ಬೈದಿದ್ದಾನೆ. ನೊಂದ ವಿದ್ಯಾರ್ಥಿಗಳು ಮರುದಿನವೇ ಎಸ್‌ಎಫ್‌ಐ ನಡಿ ಬೀದಿಗಿಳಿದು, ತಹಶೀಲ್ದಾರ್‌ರ ಕಛೇರಿಗೆ ಮುತ್ತಿಗೆ ಹಾಕಿ, ಅಧಿಕಾರಿಯನ್ನು ಕರೆಸಿ ಛಿಮಾರಿ ತಕ್ಷಣ ಪರಿಹಾರಕ್ಕೆ ಮುಂದಾಗುವಂತೆ ಆ ಅಧಿಕಾರಿ ಮುಖಾಂತರವೇ ಬರೆಸಿಕೊಂಡು ಬಸ್ ಏರಿಸಿ ಕಳಿಸಿದ್ದಾರೆ. ಇದು ಎಸ್‌ಎಫ್‌ಐ ಹಾಗೂ ವಿದ್ಯಾರ್ಥಿನಿಯರ ಹೋರಾಟಕ್ಕೆ ಸಂದ ಜಯವಾಗಿದೆ.

ನಗರದಲ್ಲಿ ಸರ್ಕಾರಿ ಮೆಟ್ರಿಕ್ ಪೂರ್ವ ಎಸ್‌ಸಿ/ಎಸ್‌ಟಿ ಬಾಲಕರ ವಸತಿ ನಿಲಯ, ಬಾಲಕಿಯರ ವಸತಿ ನಿಲಯ ಹಾಗೂ ಬಿ.ಸಿ.ಎಂ.ವಸತಿ ನಿಯಲಗಳಲ್ಲಿಯೂ ಕೂಡಾ ಇದೆ ವ್ಯವಸ್ಥೆ. ಆ ವಿದ್ಯಾರ್ಥಿಗಳ ಪಾಡು ಹೇಳತೀರದು. ಸೌಲಭ್ಯ ಸಹ ಅಷ್ಟಕ್ಕಷ್ಟೆ. ಹಾಸ್ಟೆಲ್ ಸೂಪರಿಟೆಂಡೆಂಟ್‌ನನ್ನು (ಮೇಲ್ವಿಚಾರಕ) ಕೇಳಿದರೆ ಮೇಲಾಧೀಕಾರಿಗಳತ್ತ ಬೊಟ್ಟು ಮಾಡಿ ತೋರಿಸುತ್ತಾನೆ. ಅಲ್ಲದೇ ಸರ್ಕಾರ ನಮ್ಮ ಕಡೆ ಗಮನ ಹರಸವಲ್ಲರೀ. ಅಂತ ತಲೆ ಮೇಲೆ ಕೈ ಹೊತ್ತು ಕೂಡುತ್ತಾನೆ.

ದಲಿತ, ಬಡ ಹಾಗೂ ಹಿಂದುಳಿದ ವರ್ಗಗಳ ಮತ್ತು ದೂರದಿಂದ ಬರುವಂತಹ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳೇ ಮನೆಯಿದ್ದಂತೆ. ತಂದೆ, ತಾಯಿ, ಬಂಧು-ಬಳಗ ಬಿಟ್ಟು ವಿದ್ಯಾರ್ಥಿಗಳಿಗೆ ಅಂತಹ ವಾತಾವರಣ ಇಲ್ಲಿಯೂ ಸಿಗಬೇಕು. ಆದರೆ ಸರ್ಕಾರಗಳ ವಿದ್ಯಾರ್ಥಿ ವಿರೋಧಿ ನೀತಿ ಹಾಗೂ ಅಧಿಕಾರಿಗಳ ಕರ್ತವ್ಯ ದೋಷದಿಂದ ಹಾಸ್ಟೆಲ್ ವ್ಯವಸ್ಥೆ ಹಾಳಾಗಿದೆ.



ಸರ್ಕಾರಗಳು ಪ್ರತಿವರ್ಷ ಹಾಸ್ಟೆಲ್ ಶಿಕ್ಷಣಕ್ಕಾಗಿ ಪಠ್ಯ ಪುಸ್ತಕ ವಿತರಣೆ, ನೋಟ್‌ಪುಸ್ತಕ, ಬಟ್ಟೆ, ಹಾಸಿಗೆ, ವೈದ್ಯಕೀಯ ಸೌಲಭ್ಯ ಎಲ್ಲದಕ್ಕೂ ಸಾಕಷ್ಟು ಹಣ ಬಿಡುಗಡೆ ಮಾಡುವ ಹಾಗೂ ಪೌಷ್ಟಿಕ ಆಹಾರ ನೀಡುವ ವರದಿ ತೋರಿಸುತ್ತವೆ. ಆದರೆ ಅಧಿಕಾರಿಗಳ ಕಾರ್ಯಕ್ಷಮತೆ ಕೊರತೆಯಿಂದ ವಿದ್ಯಾರ್ಥಿಗಳಿಗೆ ಸೌಲಭ್ಯ ದಕ್ಕದೆ, ಬಲಿಪಶುಗಳಾಗುತ್ತಿದ್ದಾರೆ, ನಗರದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಲಾಗದೆ ಕಡಿಮೆ ಅಂತ ತೆಗೆದುಕೊಂಡು ಎಸ್‌ಎಸ್‌ಎಲ್‌ಸಿ ಗೆ ಶಿಕ್ಷಣ ನಿಲ್ಲಿಸಿ, ಹಾದಿ ತಪ್ಪಿದ ಎಷ್ಟೋ ವಿದ್ಯಾರ್ಥಿಗಳ ಉದಾಹರಣೆ ನಮ್ಮ ಕಣ್ಣೆದುರಿಗಿದೆ. ಈ ಕುರಿತಂತೆ ಎಸ್‌ಎಫ್‌ಐ ದಶಕಗಳಿಂದ ಹಾಸ್ಟೆಲ್ ವಿದ್ಯಾರ್ಥಿನಿಯರ ಕುರಿತು, ಸಾಕಷ್ಟು ಹೋರಾಟ ರೂಪಿಸಿ ಅವರಿಗೆ ಸ್ಪಂದಿಸುತ್ತಾ ಬಂದಿದೆ.


ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ, ಸಮರ್ಪಕ ಅನುದಾನ ವಿತರಣೆಗೆ ಒತ್ತಾಯಿಸಿ 17-12-2008 ರಂದು ಪ್ರತಿಭಟನೆ ಪಠ್ಯಪುಸ್ತಕ, ಆಹಾರಧಾನ್ಯಗಳ ಸಮರ್ಪಕ ವಿತರಣೆಗಾಗಿ ಮತ್ತು ಹಾಸ್ಟೆಲ್‌ನಲ್ಲಿ ಉಚಿತ ಪ್ರವೇಶಾತಿ ನೀಡಲು ಒತ್ತಾಯಿಸಿ 12-07-2007 ರಂದು ಪ್ರತಿಭಟನೆ, ಹಾಸ್ಟೆಲ್‌ಗಳ ಖಾಸಗೀಕರಣ ವಿರೋಧಿಸಿ ಜಿಲ್ಲಾ ಮಟ್ಟದಲ್ಲಿ 5-11-2008 ರಂದು ಪ್ರತಿಭಟನೆ ಮತ್ತು ಸಮರ್ಪಕ ಅನುದಾನ ಹಾಗೂ ಮೂಲಭೂತ ಪ್ರಕರಣಕ್ಕಾಗಿ ಒತ್ತಾಯಿಸಿ 16-05-2008 ರಂದು ಪ್ರತಿಭಟನೆ ಹೀಗೆ ಸುಮಾರು ದಿನಗಳಿಂದ ಸಂಘಟನೆ ಹೋರಾಟ ರೂಪಿಸುತ್ತಾ ಸಾಗಿದೆ.

ನಗರದ ಎಸ್‌ಸಿ/ಎಸ್‌ಟಿ ಬಾಲಕರ ವಸತಿ ನಿಲಯದಲ್ಲಿ ನಡೆದ ರೇಷನ್ ಅಕ್ರಮ ವ್ಯವಸ್ಥೆಯನ್ನು ಪತ್ತೆ ಹಚ್ಚಿದ್ದನ್ನು ಇಲ್ಲಿ ಸ್ಮರಿಸಬಹುದು.

ಎಸ್‌ಎಫ್‌ಐ ನಗರದ ಎಲ್ಲ ಹಾಸ್ಟೆಲ್‌ಗಳಿಗೆ ಸರಿಯಾದ ಸೌಲಭ್ಯ ನೀಡಬೇಕೆಂದು ಒತ್ತಾಯಿಸಿದೆ. ಅಲ್ಲದೆ ದಿನೇ ದಿನೇ ಬೆಳೆಯುವ ನಗರಕ್ಕೆ ಇಲ್ಲಿನ ವಿದ್ಯಾರ್ಥಿಗಳ ಅವಶ್ಯಕತೆಗೆ ತಕ್ಕಂತೆ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಕ್ಕೆ ಸ್ವಂತ ಕಟ್ಟಡ, ಪಕ್ಕದ ಕುಂಟೋಜಿ ಸರ್ಕಾರಿ ಪಾಠಶಾಲೆಗೆ ಹಾಸ್ಟೆಲ್ ನೀಡಲು ಸರ್ಕಾರವನ್ನು ಒತ್ತಾಯಿಸಿದೆ.

ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಸಮಾಜವಾದದ ಆಶಯ ಹೊತ್ತ ಎಸ್‌ಎಫ್‌ಐ ಬಡ ವಿದ್ಯಾರ್ಥಿಗಳ ಕಣ್ಣೀರು ಒರೆಸಿದೆ. ರೈತರ, ಕಾರ್ಮಿಕರ, ಮಹಿಳೆಯರ ಪರ ಸಾಕಷ್ಟು ಹೋರಾಟ ರೂಪಿಸಿದೆ. ನಗರಕ್ಕೆ ಸರ್ಕಾರ ಪದವಿ ಪೂರ್ವ ಕಾಲೇಜು, ಪದವಿ ಕಾಲೇಜು, ಸರ್ಕಾರಿ ಪ್ರೌಢಶಾಲೆ ಮಂಜೂರಾಗಲೂ ಎಸ್‌ಎಫ್‌ಐ ರೂಪಿಸಿದ ಹೋರಾಟ ಐತಿಹಾಸಿಕವಾದವುಗಳಾಗಿವೆ.

ವರದಿ : ಗವಿಸಿದ್ದ ಬಿ.ಹೊಸಮನಿ



ವೈದ್ಯ ವೃತ್ತಿಗೆ ತಗಲಿರುವ ಶಾಪಗಳು

ವೈದ್ಯವೃತ್ತಿ ನೂರಾರು ವರ್ಷಗಳಿಂದ ಜನರ ಆರೋಗ್ಯ ಸೇವೆ ಮಾಡುತ್ತಾ ಬಂದಿದೆ. ವೈದ್ಯ ವೃತ್ತಿಯಲ್ಲಿರುವವರು ಖಾಸಗಿ ವೈದ್ಯರೇ ಹೆಚ್ಚು ಸಂಖ್ಯೆಯಲ್ಲಿ. ವೈದ್ಯರೆಂದರೆ ದೇವರಿಗೆ ಸಮಾನ ಅನ್ನುವ ಮನೋಭಾವನೆ ಜನರಲ್ಲಿದೆ. ಆದರೆ ಇತ್ತೀಚಿಗಿನ ದಶಕಗಳಲ್ಲಿ ವೈದ್ಯವೃತ್ತಿ ವ್ಯಾಪಾರೀಕರಣಗೊಳ್ಳುತ್ತಿದೆ. ಜನರು ಈಗೀಗ ಅರ್ಥಮಾಡಿಕೊಳ್ಳುತ್ತಿದ್ದಾರೆ. ಈ ವ್ಯಾಪಾರೀಕರಣ ದಿಂದಾಗಿ ವೈದ್ಯವೃತ್ತಿಯಲ್ಲಿ ಬದಲಾವಣೆಯಾಗುತ್ತಿದೆ. ಜನಸಾಮಾನ್ಯರಿಗೆ ದಿನನಿತ್ಯದ ಆರೋಗ್ಯ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ಪಡೆಯಲು ಮೊದಲಿನಷ್ಟು ಸುಲಭವಾಗಿಲ್ಲ ಹಾಗೂ ದುಬಾರಿಯಾಗುತ್ತಿದೆ. ಈ ಬದಲಾವಣೆಯಿಂದ ವೈದ್ಯವೃತ್ತಿ ಏಳು ಶಾಪಗಳಿಗೆ ಗುರಿಯಾಗಿದೆ!

ಶಾಪ - 5

5. ಅವೈಜ್ಞಾನಿಕ ಪದ್ಧತಿ : ಆಧುನಿಕ ವೈದ್ಯವೃತ್ತಿ ವೈಜ್ಞಾನಿಕ ಆಧಾರದ ಮೇಲೆ ನಿಂತಿದೆ. ಯಾವುದು ವೈಜ್ಞಾನಿಕ ವಿಧಾನ? ರೋಗಿ ವೈದ್ಯನಲ್ಲಿ ಹೋದಾಗ ಅವನ ರೋಗ ಸಮಸ್ಯೆಗಳನ್ನು ಪಟ್ಟಿ ಮಾಡಿ, ಪರೀಕ್ಷಿಸಿ, ರೋಗವೇನೆಂಬುದನ್ನು ತೀರ್ಮಾನಿಸುತ್ತಾರೆ. ಕುಟುಂಬವೈದ್ಯ, ಯಾವುದೋ ಸಮಸ್ಯೆಯನ್ನು ದೈಹಿಕ, ಮಾನಸಿಕ, ಸಾಮಾಜಿಕ ಹಿನ್ನೆಲೆಯಲ್ಲಿ ಅರ್ಥೈಸಲು ಪ್ರಯತ್ನಿಸುತ್ತಾನೆ. ರೋಗ ಪರೀಕ್ಷೆಯಿಂದ ಸ್ಪಷ್ಟತೆ ಬರದಿದ್ದರೆ, ಪ್ರಯೋಗಾಲಯದ ಪರೀಕ್ಷೆ ಮಾಡಿಸುತ್ತಾನೆ. ನಂತರ ರೋಗ ಏನೆಂಬುದನ್ನು ಖಚಿತಪಡಿಸಿಕೊಂಡು ಚಿಕಿತ್ಸೆ ಪ್ರಾರಂಭಿಸುತ್ತಾನೆ. ಸಾಮಾನ್ಯವಾಗಿ ಈ ಹಂತದಲ್ಲಿ ಬರುವ ತೀರ್ಮಾನವು ಎಲ್ಲ ಆಧುನಿಕ ವೈದ್ಯರು ಒಪ್ಪುವಂತಹದ್ದೇ ಆಗಿರುತ್ತದೆ. ಅಂದರೆ ರೋಗಿಗೆ ಒಬ್ಬ ವೈದ್ಯ ಬ್ರಾಂಕೈಟಿಸ್ ಆಗಿದೆ ಎಂದರೆ. ಇತರರೂ ಅದನ್ನು ಒಪ್ಪುವ ಸಾಧ್ಯತೆ ಹೆಚ್ಚು. ಈ ಹಂತದಲ್ಲಿ ಅನುಮಾನ ಬಂದರೆ, ವಿಶೇಷ ತಜ್ಞರ (specialist) ಅಭಿಪ್ರಾಯವನ್ನು ತೆಗೆದುಕೊಳ್ಳುತ್ತಾನೆ. ರೋಗಿಗೆ ಭೀಕರ ಕಾಯಿಲೆಯಾಗಿದ್ದರೆ, ರೋಗಿಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡುತ್ತಾನೆ. ಈ ವಿಧಾನದ ಪ್ರತಿ ಹಂತದಲ್ಲಿ ಹಿಂದೆ ದಾಖಲಿಸಿದ ಮಾಹಿತಿಯ ಆಧಾರದ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳುತ್ತಾನೆ. ಇಲ್ಲಿ ಒಬ್ಬ ವ್ಯಕ್ತಿಯ ಅನಿಸಿಕೆಯ ಆಧಾರದ ಮೇಲೆ ತೀರ್ಮಾನಗಳಾಗುವುದಿಲ್ಲ.

ಆದರೆ ಇಂದಿನ ದಿನಗಳಲ್ಲಿ ವೈದ್ಯಕೀಯ ಪರೀಕ್ಷೆಗಳು ವೈಜ್ಞಾನಿಕವಾಗಿರದೆ, ರೂಢಿಬದ್ಧವಾಗಿವೆ (stereotyped) ವೈದ್ಯರು ರೋಗಿಯೊಂದಿಗೆ ರೋಗದ ಬಗ್ಗೆ ತಿಳಿದುಕೊಳ್ಳಲು ಕೇವಲ ದೈಹಿಕ ವಿಷಯಗಳನ್ನು ಮಾತ್ರ ಗಮನಿಸುತ್ತಾರೆ. ಮಾನಸಿಕ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ಗಮನ ಹರಿಸುವುದೇ ಇಲ್ಲ. ಇದಕ್ಕೆ ಕಾರಣ ವೈದ್ಯಕೀಯ ಕಾಲೇಜಿನ ತಪ್ಪು ತರಬೇತಿ! ನಂತರ ವಿಪರೀತ ಪರೀಕ್ಷೆ (ಲ್ಯಾಬ್ ಟೆಸ್ಟ್)ಗಳನ್ನು ಮಾಡಿಸುತ್ತಾರೆ. ನಂತರ ಇಂಜೆಕ್ಷನ್ ಕೊಟ್ಟು ದೊಡ್ಡ ಆದೇಶ ಪಟ್ಟಿಯನ್ನು ನೀಡುತ್ತಾರೆ. ಈ ಅವೈಜ್ಞಾನಿಕ ಪದ್ಧತಿ ಸಾಮಾನ್ಯವಾಗಿ ಕುಟುಂಬ ವೈದ್ಯರಲ್ಲಿ ಕಂಡುಬರುತ್ತದೆ. ತಜ್ಞವೈದ್ಯರು ರೋಗ ಪರೀಕ್ಷೆ ಹಾಗೂ ಚಿಕಿತ್ಸೆಯಲ್ಲಿ ವೈಜ್ಞಾನಿಕವಾಗಿರುತ್ತಾರೆಂದು ಹೇಳಬಹುದಾಗಿದೆ. ಆದರೆ ಅವರೂ ಔಷಧಿ ಕಂಪನಿಗಳ ಹಾಗೂ ಪ್ರಯೋಗಾಲಯಗಳ (labs) ಒತ್ತಡಕ್ಕೆ ಮಣಿದು ವಿಪರೀತ ಪರೀಕ್ಷೆಗಳನ್ನು ಮಾಡಲು ಮುಂದಾಗಿದ್ದಾರೆ.

ವೈದ್ಯರಿಗೆ ಮುಂದುವರೆದ ಕಲಿಕೆಯ ತರಬೇತಿ (continuing education) ಇಲ್ಲವಾದುದರಿಂದ ಚಿಕಿತ್ಸೆ ನೀಡಿಕೆ ಹಾಗೂ ಪರೀಕ್ಷೆಗಳ ಮೇಲೆ ಯಾವುದೇ ನಿಯಂತ್ರಣ ಇಲ್ಲದಿರುವುದರಿಂದ ಈ ತರಹದ ಅವೈಜ್ಞಾನಿಕ ಪದ್ಧತಿಗಳು ಮುಂದುವರೆಯಲು ಸಾಧ್ಯ.

ಶರತ್‌ಚಂದ್ರ

ಶ್ರೀಲಂಕಾದ ಮೂರು ಲಕ್ಷ ನಿರಾಶ್ರೀತರ ಭೀಕರ ಸ್ಥಿತಿ

ಶ್ರೀಲಂಕಾದಲ್ಲಿ ಎಲ್‌.ಟಿ.ಟಿ.ಇ. ಮತ್ತು ಸೈನ್ಯದ ನಡುವೆ ಇದ್ದ ಹಲವು ತಿಂಗಳುಗಳ ಕದನ ವಿರಾಮ ಮುರಿದು 11 ವಾರಗಳಲ್ಲಿ, ಕದನಗ್ರಸ್ತ ಪ್ರದೇಶದ ತಮಿಳು ನಾಗರಿಕರ ಪರಿಸ್ಥಿತಿ ತೀರಾ ಬಿಗಡಾಯಿಸಿದೆ. ಶ್ರೀಲಂಕಾದ ಸೈನ್ಯ ಎಲ್‌.ಟಿ.ಟಿ.ಇ. ಮೇಲೆ ಭೀಕರ ದಾಳಿ ಹೂಡಿದೆ. ಪ್ರತಿ ದಿನ ಬಾಂಬ್ ದಾಳಿಗಳು ನಡೆಯುತ್ತಿವೆ. ಶ್ರೀಲಂಕಾದ ಸೈನ್ಯ ಎಲ್‌.ಟಿ.ಟಿ.ಇ. ಮೇಲೆ ಕದನದಲ್ಲಿ ಮೇಲುಗೈ ಸಾಧಿಸಿದೆ. ಎಲ್‌.ಟಿ.ಟಿ.ಇ. ಕದನವಿರಾಮದ ಪ್ರಸ್ತಾವ ಇಟ್ಟಿದೆ. ಇದು ಅದರ ದುರ್ಬಲ ಸ್ಥಿತಿಯ ಪ್ರತೀಕ. ಹಿಂದೆ ಮಾಡಿದಂತೆ ಕದನವಿರಾಮದ ಅವಕಾಶವನ್ನು ಬಳಸಿ, ಅದು ತನ್ನ ಗೆರಿಲ್ಲಾ ಪಡೆ ಮತ್ತು ಶಸ್ತ್ರಾಸ್ತ್ರ ಪೂರೈಕೆ ಪುನಃ ಗಟ್ಟಿಗೊಳಿಸಲು ಬಳಸುತ್ತದೆ. ಆದ್ದರಿಂದ ಈ ಕದನ ವಿರಾಮ ಪ್ರಸ್ತಾವ ಪ್ರಾಮಾಣಿಕವಾದದ್ದು ಅಲ್ಲ ಎಂಬುದು ಶ್ರೀಲಂಕಾದ ಸರ್ಕಾರದ ವಾದ. ಎಲ್‌.ಟಿ.ಟಿ.ಇ.ನ್ನು ನಿರ್ನಾಮಗೊಳಿಸುವ ಮೂಲಕ, ತಮಿಳು ಸಮಸ್ಯೆಗೆ ಮಿಲಿಟರಿ ಪರಿಹಾರ ಸಾಧ್ಯ ಎಂಬ ಕನಸನ್ನು ಶ್ರೀಲಂಕಾ ಸರ್ಕಾರ ಕಾಣುತ್ತಿದೆ.

ತಮಿಳು ನಾಗರಿಕರು 'ಅತ್ತ ದರಿ ಇತ್ತ ಪುಲಿ' ಎಂಬ ಸ್ಥಿತಿಯಲ್ಲಿ ಇದ್ದಾರೆ. ಶ್ರೀಲಂಕಾದ ಸೈನ್ಯ ಮತ್ತು ಎಲ್‌.ಟಿ.ಟಿ.ಇ. ಎರಡೂ ಕಡೆಗಳ ಬಲಿಪಶುವಾಗಿದ್ದಾರೆ. ಕದನದ ಪ್ರದೇಶ ಚಲಿಸಿದಂತೆ ಅವರು ಯಾವಾಗಲೂ ಅಲ್ಲಿಂದ ಓಡಿ ಹೋಗುವ ತಯಾರಿಯಲ್ಲಿ ಇರಬೇಕಾಗುತ್ತದೆ. ತಮ್ಮ ದೇಶದೊಳಗೆ ಅವರು ಆಂತರಿಕವಾಗಿ ನಿರಾಶ್ರಿತರಾಗಿದ್ದಾರೆ. ಶ್ರೀಲಂಕಾದ ಉತ್ತರದ ಮೂರು ಮತ್ತು ಪೂರ್ವದ ಐದು ಜಿಲ್ಲೆಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಇಂತಹ ಆಂತರಿಕ ನಿರಾಶ್ರಿತರಿದ್ದಾರೆ ಎಂದು ಅಲ್ಲಿ ಕೆಲಸ ಮಾಡುವ ವಿಶ್ವಸಂಸ್ಥೆ ಮತ್ತು ಎನ್‌.ಜಿ.ಒ.ಗಳ ಜಂಟಿ ಸಂಘಟನೆ ಇಂಟರ್ ಏಜೆನ್ಸಿ ಸಮಿತಿ ಹೇಳಿದೆ. ಆಹಾರ ಮತ್ತು ಅಗತ್ಯ ಔಷಧಿಗಳ ತೀವ್ರ ಅಭಾವ, ಕಾಳಸಂತೆ ಮತ್ತು ಬೆಲೆ ಏರಿಕೆ ಅವರನ್ನು ಕಾಡುತ್ತಿದೆ. ಬೆಲೆಏರಿಕೆ ಶೇ. 30 ರಷ್ಟಿದೆ. ಪರಿಸ್ಥಿತಿ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದೆ.

ಎಲ್‌.ಟಿ.ಟಿ.ಇ. ಆ ಪ್ರದೇಶದ ತಮಿಳು ಕುಟುಂಬಗಳಿಂದ ಬಾಲ ಸೈನಿಕರನ್ನು ಬಲಾತ್ಕಾರವಾಗಿ ಸೇರಿಸಿಕೊಂಡು ಅವರನ್ನು ತರಬೇತಿಗೆ ಒಳಪಡಿಸುತ್ತಿದೆ. ಇತ್ತೀಚೆಗೆ ಒಂಬತ್ತು ಸಾವಿರಕ್ಕೂ ಹೆಚ್ಚು ಬಾಲಕರನ್ನು ಈ ರೀತಿ ಸೇರಿಸಿಕೊಳ್ಳಲಾಯಿತು. ಹತ್ತು ವರ್ಷದ ಬಾಲಕರು ಸಹ ಇದರಲ್ಲಿ ಸೇರಿದ್ದಾರೆ. ಪ್ರತಿ ತಮಿಳು ಕುಟುಂಬದಲ್ಲಿರುವ ಮಕ್ಕಳ ಸಂಖ್ಯೆಯ ಮೇಲೆ ಸೈನ್ಯಕ್ಕೆ ಸೇರಬೇಕಾದ ಬಾಲಕರ ಸಂಖ್ಯೆ (ನಾಲ್ಕು ಮಕ್ಕಳಿದ್ದರೆ ಎರಡು, ಎರಡು ಇದ್ದರೆ ಒಂದು) ನಿಗದಿ ಪಡಿಸಲಾಗಿದೆ. ಸ್ವ-ಇಚ್ಛೆಯಿಂದ ಕೊಡದಿದ್ದರೆ ಅಂತಹ ಬಾಲಕರನ್ನು ಅಪಹರಿಸಲಾಗುತ್ತಿದೆ. ತರಬೇತಿ ಸಮಯದಲ್ಲಿ ಅಥವಾ ಕದನದಲ್ಲಿ ಭಾಗವಹಿಸಲು ನಿರಾಕರಿಸಿದರೆ ಅವರನ್ನು ಹಿಂಸಿಸಲಾಗುತ್ತದೆ ಅಥವಾ ಮುಗಿಸಿ ಬಿಡಲಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬಾಲಕರೂ ಇತರ ಪರಿಣತ ಸೈನಿಕರೂ ಕದನಗಳಿಂದ ಓಡಿ ಹೋಗುವುದು ಸಾಮಾನ್ಯವಾಗಿದೆ.

ಶ್ರೀಲಂಕಾ ಸೈನ್ಯ ತಮಿಳು ನಾಗರಿಕರಿಗೆ 'ಸುರಕ್ಷಿತ ಪ್ರದೇಶ'ಗಳ ಕ್ಯಾಂಪುಗಳಲ್ಲಿ ನೆಲೆಸಲು ಒತ್ತಡ ಹಾಕುತ್ತಿದೆ. ತಮಿಳರು ಈ ಪ್ರದೇಶಗಳಿಗೆ ಹೋಗುವುದನ್ನು ಎಲ್‌.ಟಿ.ಟಿ.ಇ. ತಡೆಯುತ್ತದೆ 'ಸುರಕ್ಷಿತ ಪ್ರದೇಶ'ಗಳ ಕ್ಯಾಂಪುಗಳಲ್ಲಿ ಸಹ



ತಮಿಳರಿಗೆ ಸುರಕ್ಷಿತತೆ ಭಾವನೆ ಇಲ್ಲ. ಎಲ್ಲಾ ತಮಿಳರೂ ಎಲ್‌.ಟಿ.ಟಿ.ಇ. ಏಜೆಂಟರು ಎಂದು ಸದಾ ಸಂಶಯ ಇರುವ ಸೈನಿಕರಿಂದ ತಮಿಳರಿಗೆ ಸದಾ ಕಿರುಕಳ ಕ್ಯಾಂಪುಗಳಲ್ಲಿ ಸಹ ತಪ್ಪಿದ್ದಲ್ಲ. ಎರಡೂ ಕಡೆಯ ಸೈನಿಕರು ಕದನ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ತಮಿಳು ನಾಗರಿಕರ ಲೂಟಿ, ಅತ್ಯಾಚಾರ, ಕೊಲೆಯಲ್ಲಿ ತೊಡಗಿದ್ದಾರೆ. ಇಂತಹ ಬೆಚ್ಚಿ ಬೀಳುವ ಅಂಶಗಳು 'ಮಾನವ ಹಕ್ಕುಗಳಿಗಾಗಿ ವಿಶ್ವವಿದ್ಯಾಲಯಗಳ ಅಧ್ಯಾಪಕರು - ಜಾಫ್ನಾ' ಕದನಗ್ರಸ್ತ ಪ್ರದೇಶಗಳಿಂದ ಪ್ರತ್ಯಕ್ಷದರ್ಶಿಗಳ ಆಧಾರದ ಮೇಲೆ ತಯಾರಿಸಿದ ವರದಿಯಿಂದ ಬೆಳಕಿಗೆ ಬಂದಿವೆ. ಈ ಸಂಘಟನೆ ಎರಡೂ ಪಕ್ಷಗಳ ಬಗ್ಗೆ ಯಾವುದೇ ಒಲವು ಇಲ್ಲದೆ ನಿಷ್ಪಕ್ಷಪಾತತೆಗೆ ಹೆಸರಾಗಿದೆ.

ಭಾರತ ಸರ್ಕಾರ ಈ ಮಾನವೀಯ ಬಿಕ್ಕಟ್ಟನ್ನು ಪರಿಹರಿಸಲು ಹಾಕಿದ ಒತ್ತಡ ಮತ್ತು ಶ್ರೀಲಂಕಾ ಸಕಾರದ ವಿಶೇಷ ಪ್ರತಿನಿಧಿ ಭೇಟಿ ಸಹ, ಈ ವರೆಗೆ ಫಲ ಕೊಟ್ಟಂತೆ ಕಾಣುವುದಿಲ್ಲ. ಶ್ರೀಲಂಕಾ ತಮಿಳು ಸಮಸ್ಯೆಗೆ ಮಿಲಿಟರಿ ಪರಿಹಾರ ಸಾಧ್ಯವಿಲ್ಲ; ಮಿಲಿಟರಿ ಪರಿಹಾರ ಭಯೋತಾದ್ವಕರ ಆಯ್ಕೆ. ರಾಜಕೀಯ ಪರಿಹಾರ ಒಂದೇ ಸಾಧ್ಯ ಎಂದು ವಿಶೇಷ ಪ್ರತಿನಿಧಿ ಒಪ್ಪಿಕೊಂಡರೂ ಆ ನಿಟ್ಟಿನಲ್ಲಿ ಯಾವುದೇ ಪ್ರಗತಿ ಆಗಿಲ್ಲ. ಶ್ರೀಲಂಕಾದ ಅಧ್ಯಕ್ಷರು ತಮಿಳು ಸಮಸ್ಯೆಗೆ ಪರಿಹಾರ ಸೂಚಿಸಲು ನೇಮಿಸಿದ ಸರ್ವ ಪಕ್ಷ ಸಮಿತಿ ಕೆಲಸ ಬಹಳ ನಿಧಾನ ಗತಿಯಲ್ಲಿ ಸಾಗಿದೆ. ಹಲವು ತಿಂಗಳುಗಳ ನಂತರ ಅದು ಇನ್ನೂ ಯಾವುದೇ ಆಖೈರು ಪ್ರಸ್ತಾವಗಳನ್ನು ಇಟ್ಟಿಲ್ಲ. ತಮಿಳು ಜಿಲ್ಲೆಗಳಿಗೆ ಅತ್ಯಧಿಕ ಸ್ವಾಯತ್ತತೆ ಕೊಡುವ ಸಂವಿಧಾನದ 13 ನೇ ತಿದ್ದುಪಡಿ ಜಾರಿಯ ಸ್ಥಿತಿ ಸಹ ಅದೇ. ಶ್ರೀಲಂಕಾ ಸರ್ಕಾರ ಎಲ್‌.ಟಿ.ಟಿ.ಇ. ಮತ್ತು ತಮಿಳು ನಾಗರಿಕರನ್ನು ಪ್ರತ್ಯೇಕಿಸಿ ಅವರ ಜತೆ ವರ್ತಿಸುವ ಧೋರಣೆ ಸಹ ಒಪ್ಪಿಕೊಂಡಿಲ್ಲ. ಐಕ್ಯ ಶ್ರೀಲಂಕಾದಲ್ಲಿ ತಮಿಳು ಪ್ರದೇಶಗಳಿಗೆ ಅತ್ಯಧಿಕ ಸ್ವಾಯತ್ತತೆ ಕೊಡುವ ರಾಜಕೀಯ ಪರಿಹಾರ ಮಾತ್ರ ಈ ಬಿಕ್ಕಟ್ಟಿನಿಂದ ಹೊರಗೆ ಬರುವ ಮಾರ್ಗ. ಈ ದಿಕ್ಕಿನಲ್ಲಿ ಪ್ರಗತಿ ಇನ್ನೂ ತೀರಾ ನಿರಾಶಾದಾಯಕ.

ವೆನೆಜುವೆಲಾ ಪ್ರಾದೇಶಿಕ ಚುನಾವಣೆಗಳಲ್ಲಿ ಪ್ರಗತಿಪರರ ಮುನ್ನಡೆ

ಇತ್ತೀಚೆಗೆ ನಡೆದ ಬಹು ಮುಖ್ಯ ವೆನೆಜುವೆಲಾದ ಪ್ರಾದೇಶಿಕ ಮತ್ತು ಸ್ಥಳೀಯ ಚುನಾವಣೆಗಳಲ್ಲಿ ಚವೇಜರ ನಾಯಕತ್ವದ ಸಂಯುಕ್ತ ಸೋಶಲಿಸ್ಟ್ ಪಕ್ಷ ಜಯ ಗಳಿಸಿದೆ. ವೆನೆಜುವೆಲಾದ 23 ಪ್ರಾಂತ್ಯಗಳಲ್ಲಿ 17 ಪ್ರಾಂತ್ಯಗಳಲ್ಲಿ ಅದು ಜಯ ಗಳಿಸಿದೆ. ಅದರಲ್ಲಿ ಅರ್ಧದಷ್ಟು (ಎಂಟು) ಪ್ರಾಂತ್ಯಗಳಲ್ಲಿ ಅದು ಶೇ. 60 ಮತಕ್ಕಿಂತ ಹೆಚ್ಚಿನ ಮತ ಗಳಿಸಿ ಗೆದ್ದಿದೆ. ಉಳಿದ ಪ್ರಾಂತ್ಯಗಳಲ್ಲಿ ಶೇ. 10 ರಷ್ಟು ಮತಗಳ ಅಂತರದಿಂದ ಗೆದ್ದಿದೆ. ಸೋಶಲಿಸ್ಟ್ ಪಕ್ಷ ಒಟ್ಟು ಮತಗಳ ಶೇ. 60 ರಷ್ಟು ಮತಗಳನ್ನು ಗಳಿಸಿದೆ.

ಆದರೆ ಎರಡು ದೊಡ್ಡ ಪ್ರಾಂತ್ಯಗಳಲ್ಲಿ ಮತ್ತು ರಾಜಧಾನಿಯಲ್ಲಿ ಸೋತಿದೆ. ಈ ಎರಡೂ ಪ್ರಾಂತ್ಯಗಳು ಹೆಚ್ಚಿನ ಜನಸಂಖ್ಯೆ ಇರುವವು. ರಾಜಧಾನಿ ರಾಜಕೀಯವಾಗಿ ಮಹತ್ವದ್ದು. ಉಳಿದ ಪ್ರಾಂತ್ಯಗಳಲ್ಲಿ ಆಖೈರು ಫಲಿತಾಂಶ ಇನ್ನೂ ಬರಬೇಕಾಗಿದೆ. ಚುನಾವಣೆಗಳು ಹೆಚ್ಚಿನ ಕುತೂಹಲ ಕೆರಳಿಸಿದ್ದು 1.7 ಕೋಟಿ ಜನ ಮತದಾರರಾಗಿ ರಿಜಿಸ್ಟರ್ ಮಾಡಿದ್ದರು ಮತ್ತು ಶೇ. 65.5 ಮತದಾನ ಆಗಿತ್ತು. ಇದು ಹಿಂದಿಗಿಂತ ಭಾರೀ ಹೆಚ್ಚಿನ ಸಂಖ್ಯೆ. ಈ ಚುನಾವಣೆ ನಡೆದದ್ದು 22 ಗವರ್ನರ್‌ಗಳು, 328 ಮೆಯರುಗಳು, ಪ್ರಾಂತೀಯ ಕೌನ್ಸಿಲ್‌ಗಳ 233 ಸದಸ್ಯರು ಮತ್ತು ಜಿಲ್ಲಾ ಸಮಿತಿಗಳಿಗೆ 13 ಕೌನ್ಸಿಲರ್ ಗಳ ಸ್ಥಾನಗಳಿಗೆ.

ಸೋಶಲಿಸ್ಟ್ ಪಕ್ಷದ ಜಯ ನಿರೀಕ್ಷಿತ ಮಟ್ಟ ಮುಟ್ಟದಿದ್ದರೂ ಅತ್ಯಂತ ಮಹತ್ವದ್ದು. ಮೊದಲನೆಯದಾಗಿ ಗಳಿಸಿದ ಮತ ಕಳೆದ ಹೊಸ ಸಂವಿಧಾನಕ್ಕೆ ನಡೆದ ಜನಮತಸಂಗ್ರಹದಲ್ಲಿ ಗಳಿಸಿದ ಮತಕ್ಕಿಂತ (ಶೇ. 51) ಕ್ಕಿಂತ ಬಹಳ ಹೆಚ್ಚು. ಹಿಂದೆ ನಡೆದ ಚುನಾವಣೆಗಳ (ಅಧ್ಯಕ್ಷೀಯ ಇತ್ಯಾದಿ) ಮತಗಳಿಕೆ ಮಟ್ಟ ಮುಟ್ಟಿದೆ. ಪ್ರಾದೇಶಿಕ ಮತ್ತು ಸ್ಥಳೀಯ ಚುನಾವಣೆಗಳಾದ್ದರಿಂದ ಹಲವು ಅಂಶಗಳು ಪ್ರಭಾವ ಬೀರುತ್ತವೆ. ಅಲ್ಲದೆ ಈ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವುದು ಚವೇಜರಂತಹ ಜನಪ್ರಿಯ ನಾಯಕ ಅಲ್ಲ. ಹೊಸದಾಗಿ ರಚಿತವಾದ ಸೋಶಲಿಸ್ಟ್ ಪಕ್ಷದ ಹೆಸರಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು. ಪ್ರಗತಿಪರ ಬದಲಾವಣೆ ಮೇಲೆ ಆಧಾರಿತ ಕಾರ್ಯಕ್ರಮ ಇತ್ತು ಜನರ ಮುಂದೆ.

ಅಮೆರಿಕ ಮತ್ತು ನೆರೆಯ ಕೊಲಂಬಿಯಾದಿಂದ ಭಾರೀ ಹಣದ, ಸಶಸ್ತ್ರ ಕಾರ್ಯಕರ್ತರ ಬೆಂಬಲವಿದ್ದ ಬಲಪಂಥೀಯ ವಿರೋಧ ಪಕ್ಷಗಳು ಸಂಯುಕ್ತ ರಂಗವಾಗಿ ಸ್ಪರ್ಧಿಸಿದ್ದವು. ಎಡಪಕ್ಷಗಳಲ್ಲೂ ಹೆಚ್ಚಿನವು ಸೋಶಲಿಸ್ಟ್ ಪಕ್ಷದ ಜತೆ ಸಹಕರಿಸಿದ್ದರೂ ಕೆಲವು ಎಡ ಅಭ್ಯರ್ಥಿಗಳು ಇದ್ದರು. ಚವೇಜ ನಾಯಕತ್ವದ 'ಬೊಲಿವೇರಿಯನ್ ಕ್ರಾಂತಿ' ತಣ್ಣಗಾಗಿದೆ. ಸೋಶಲಿಸ್ಟ್ ಪಕ್ಷ ಇನ್ನೂ ಸುಸಂಘಟಿತವಾಗಿಲ್ಲ. ಅವರ ಯೋಜನೆಗಳಿಗೆ ಬೆಂಬಲ ಇಲ್ಲ ಎಂದು ಕೆಲವು ಚವೇಜ ಬೆಂಬಲಿಗರೂ ಅನ್ನಲು ಆರಂಭಿಸಿದ್ದರು. ಈ ಹಿನ್ನೆಲೆಯಲ್ಲಿ ಈ ಜಯ ಅತ್ಯಂತ ಮಹತ್ವದ್ದು ಮತ್ತು ಸಕಾರಾತ್ಮಕ ಬೆಳವಣಿಗೆ. ವೆನೆಜುವೆಲಾದಲ್ಲಿ ಪ್ರಜಾಪ್ರಭುತ್ವ ಇಲ್ಲ, ಬರಿಯ ಸರ್ವಾಧಿಕಾರ ಎನ್ನುವವರಿಗೂ ತಕ್ಕ ಉತ್ತರ ನೀಡಿದೆ.

ಈ ಚುನಾವಣೆ ಕೆಲವು ಗವರ್ನರ್-ಮೇಯರ್ ಸ್ಥಾನಗಳಿಗೆ ಮಾತ್ರವಲ್ಲ. ಇದು ಚವೇಜ್ ಪಕ್ಷದ ಪ್ರಗತಿಪರ ಕಾರ್ಯಕ್ರಮಕ್ಕೆ ಜನರ ಮನ ಗೆಲ್ಲಲು, ಅವರ ರಾಜಕೀಯ ಪ್ರಜ್ಞೆ ಎತ್ತರಿಸಲು, ಸಂಘಟನೆಯ ಮಟ್ಟ ಹೆಚ್ಚಿಸಲು. ದೇಶದ ಆಳುವ ವರ್ಗ ಮತ್ತು 'ಯಾಂಕೀ ಸಾಮ್ರಾಜ್ಯಶಾಹಿ' ಸದ್ಯದಲ್ಲೇ ಹೂಡಲಿರುವ ದಾಳಿ ಎದುರಿಸಲು ಜನ ತಯಾರಾಗಬೇಕು. ಎಂದು ಚವೇಜ ಚುನಾವಣೆ ಪ್ರಚಾರದ ತುಂಬಾ ಒತ್ತಿ ಹೇಳುತ್ತಿದ್ದರು. ಸೋಶಲಿಸ್ಟ್ ಪಕ್ಷದ ಅಭ್ಯರ್ಥಿಗಳ ಆಯ್ಕೆ ದೊಡ್ಡ ಜನಸಭೆ ಮತ್ತು ಸಾಮೂಹಿಕ ಕೂಟಗಳಲ್ಲಿ ಮಾಡಲಾಯಿತು. ಪಕ್ಷ ಜನಸಾಮಾನ್ಯರಿಂದ ಮಾತ್ರವೇ ಚುನಾವಣೆಗೆ ಹಣ ಸಂಗ್ರಹಿಸಿತು. ಜನತೆಗೆ 'ಒಂದು ದಿನದ ಕೂಲಿ' ಕೊಡಲು ಕರೆ ಕೊಟ್ಟಿತು. ಮೊದಲ ಮೂರು ದಿನಗಳಲ್ಲೇ 9 ಲಕ್ಷ ಡಾಲರುಗಳಷ್ಟು ಹಣ ಸಂಗ್ರಹ ಆಯಿತು. ಸೋಶಲಿಸ್ಟ್ ಪಕ್ಷದ ಅಭ್ಯರ್ಥಿಗಳು- 'ಬೊಲಿವೇರಿಯನ್ ಕ್ರಾಂತಿ'ಗೆ ದುಡಿಯುವ, ಚವೇಜ ಸರ್ಕಾರ ಬೆಂಬಲಿಸುವ, ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡುವ, ಜನರ ಐಕ್ಯತೆ ಕಾಪಾಡುವ-ಪ್ರತಿಜ್ಞೆಯನ್ನು ಭಾರೀ ಜನಸ್ತೋಮದ ಎದುರಲ್ಲಿ ಸೈಮನ್ ಬೊಲಿವರ್(ಲ್ಯಾಟಿನ್ ಅಮೆರಿಕದ ಸಾಮ್ರಾಜ್ಯಶಾಹಿ ವಿರೋಧಿ ಜನಪ್ರಿಯ ನಾಯಕ) ಪ್ರತಿಮೆಯ ಮುಂದೆ ಮಾಡಿದರು.

○

ಜಾಥಾ ವೇಳಾಪಟ್ಟಿ.............

ಉತ್ತರ ಕನ್ನಡ ದಿಂದ ಬೆಂಗಳೂರಿಗೆ ಜಾಥಾ ಕಾರ್ಯಕ್ರಮ ಪಟ್ಟಿ

ದಿನಾಂಕ/ವಾರ	ಸಮಯ	ಉದ್ಘಾಟನೆ, ಉಳಿಯುವುದು,
13.12.2008, ಶನಿವಾರ	ಬೆಳಿಗ್ಗೆ 11-30	ಗೋಕರ್ಣ ಉದ್ಘಾಟನಾ ಸಭೆ
	ಮಧ್ಯಾಹ್ನ 3-00	ಕಾರವಾರ (ರಾತ್ರಿ ವಸತಿ)
14.12.2008, ಭಾನುವಾರ		ಅಂಕೋಲ
		ಕುಮಟ ಸಾರ್ವಜನಿಕ ಸಭೆ
	ಮಧ್ಯಾಹ್ನ 12-00	ಹೊನ್ನಾವರ ಸಾರ್ವಜನಿಕ ಸಭೆ
	ಸಂಜೆ 5-00	ಭಟ್ಕಳ ಸಾರ್ವಜನಿಕ ಸಭೆ (ರಾತ್ರಿ ವಸತಿ)
15.12.2008, ಸೋಮವಾರ	ಬೆಳಿಗ್ಗೆ 11-00	ಬೈಂದೂರು ಸಾರ್ವಜನಿಕ ಸಭೆ
	ಸಂಜೆ 5-00	ಕುಂದಾಪುರ ಸಾರ್ವಜನಿಕ ಸಭೆ (ರಾತ್ರಿ ವಸತಿ)
16.12.2008, ಮಂಗಳವಾರ	ಬೆಳಿಗ್ಗೆ 10-00	ಕೋಟೇಶ್ವರ ಸಾರ್ವಜನಿಕ ಸಭೆ
	ಬೆಳಿಗ್ಗೆ 11-30	ಕೋಟ ಸಾರ್ವಜನಿಕ ಸಭೆ
	ಮಧ್ಯಾಹ್ನ 1-00	ಸಾಲಿಗ್ರಾಮ ಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ಬ್ರಹ್ಮಾವರ ಸಾರ್ವಜನಿಕ ಸಭೆ
	ಸಂಜೆ 4-00	ಸಂತೆಕಟ್ಟೆ ಸಾರ್ವಜನಿಕ ಸಭೆ
	ಸಂಜೆ 5-00	ಉಡುಪಿ ಸಾರ್ವಜನಿಕ ಸಭೆ (ರಾತ್ರಿ ವಸತಿ)
17.12.2008	ಮಧ್ಯಾಹ್ನ 12-30	ಮಣಿಪಾಲ ಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ಕಾರ್ಕಳ ಸಾರ್ವಜನಿಕ ಸಭೆ
	ಸಂಜೆ 4-30	ಮೂಡಬಿದಿರೆ ಸಾರ್ವಜನಿಕ ಸಭೆ (ರಾತ್ರಿ ವಸತಿ)
18.12.2008	ಬೆಳಿಗ್ಗೆ 10-00	ವೇಣೂರು ಸಾರ್ವಜನಿಕ ಸಭೆ
	ಬೆಳಿಗ್ಗೆ 11-30	ಗುರುವಾಯನಕೆರೆ ಸಾರ್ವಜನಿಕ ಸಭೆ
	ಮಧ್ಯಾಹ್ನ 1-00	ಬೆಳ್ತಂಗಡಿಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ಬಿ.ಸಿ.ರಸ್ತೆ ಸಾರ್ವಜನಿಕ ಸಭೆ
	ಸಂಜೆ 4-00	ತೊಕ್ಕಟ್ಟು ಸಾರ್ವಜನಿಕ ಸಭೆ
	ಸಂಜೆ 6-00	ಮಂಗಳೂರು ಸಾರ್ವಜನಿಕ ಸಭೆ (ರಾತ್ರಿ ವಸತಿ)
19.12.2008		ಪುತ್ತೂರು ಸಾರ್ವಜನಿಕ ಸಭೆ
		ಸುಳ್ಯ ಸಾರ್ವಜನಿಕ ಸಭೆ
	ಮಧ್ಯಾಹ್ನ 12-30	ಮಡಿಕೇರಿ ಸಾರ್ವಜನಿಕ ಸಭೆ
	ಸಂಜೆ 4-00	ಚೆಟ್ಟಳ್ಳಿ ಸಾರ್ವಜನಿಕ ಸಭೆ
	ಸಂಜೆ 5-00	ನೆಲ್ಲುಹೊದಿಕೇರಿ ಸಾರ್ವಜನಿಕ ಸಭೆ
	ಸಂಜೆ 6-00	ಸಿದ್ದಾಪುರ ಸಾರ್ವಜನಿಕ ಸಭೆ (ರಾತ್ರಿ ವಸತಿ)
20.12.2008	ಬೆಳಿಗ್ಗೆ 10-00	ಪಿರಿಯಾಪಟ್ಟಣ ಸಾರ್ವಜನಿಕ ಸಭೆ
	ಮಧ್ಯಾಹ್ನ 12-00	ಹುಣಸೂರು ಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ನಂಜನಗೂಡು ಸಾರ್ವಜನಿಕ ಸಭೆ
	ಸಂಜೆ 5-00	ಮೈಸೂರು ಸಾರ್ವಜನಿಕ ಸಭೆ (ರಾತ್ರಿ ವಸತಿ)
21.12.2008	ಬೆಳಿಗ್ಗೆ 10-00	ಶ್ರೀರಂಗಪಟ್ಟಣ ಸಾರ್ವಜನಿಕ ಸಭೆ
	ಮಧ್ಯಾಹ್ನ 12-30	ಮಳವಳ್ಳಿ ಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ಭಾರತ ನಗರ ಸಾರ್ವಜನಿಕ ಸಭೆ
	ಸಂಜೆ 4-00	ಮಂಡ್ಯ ಸಾರ್ವಜನಿಕ ಸಭೆ
	ಸಂಜೆ 6-30	ಮದ್ದೂರು ಸಾರ್ವಜನಿಕ ಸಭೆ (ರಾತ್ರಿ ವಸತಿ)
22.12.2008	ಬೆಳಿಗ್ಗೆ 10-00	ಚೆನ್ನಪಟ್ಟಣ ಸಾರ್ವಜನಿಕ ಸಭೆ
	ಬೆಳಿಗ್ಗೆ 11-00	ರಾಮನಗರ ಸಾರ್ವಜನಿಕ ಸಭೆ
	ಮಧ್ಯಾಹ್ನ 12-00	ಕೆಂಗೇರಿ ಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ಗಂಗೊಂಡನಹಳ್ಳಿ ಸಾರ್ವಜನಿಕ ಸಭೆ
	ಸಂಜೆ 4-00	ಗೌರಿಪಾಳ್ಯ ಸಾರ್ವಜನಿಕ ಸಭೆ
	ಸಂಜೆ 5-00	ಯಾರಬ್ ನಗರ ಸಾರ್ವಜನಿಕ ಸಭೆ
	ಸಂಜೆ 6-00	ಕುಮಾರ ಸ್ವಾಮಿ ಲೇಔಟ್ ಸಾರ್ವಜನಿಕ ಸಭೆ
23.12.2008	ಬೆಳಿಗ್ಗೆ	ಬೆಂಗಳೂರು ನಗರ

ಕೂಡಲ ಸಂಗಮದಿಂದ ಹಾವೇರಿಗೆ ಜಾಥಾ ಕಾರ್ಯಕ್ರಮ ಪಟ್ಟಿ

ದಿನಾಂಕ/ವಾರ	ಸಮಯ	ಉದ್ಘಾಟನೆ, ಉಳಿಯುವುದು,
15.12.2008, ಶನಿವಾರ	ಬೆಳಿಗ್ಗೆ 10-00 ಕ್ಕೆ	ಕೂಡಲ ಸಂಗಮ ಸಾರ್ವಜನಿಕ ಸಭೆ
	ಮಧ್ಯಾಹ್ನ 12-30 ಕ್ಕೆ	ಬಾಗಲಕೋಟೆ ಸಾರ್ವಜನಿಕ ಸಭೆ
	ಸಂಜೆ 4-00 ಕ್ಕೆ	ಬಾಗೇವಾಡಿ ಸಾರ್ವಜನಿಕ ಸಭೆ
	ಸಂಜೆ 6-30 ಕ್ಕೆ	ಸಿಂಧಗಿ ಸಾರ್ವಜನಿಕ ಸಭೆ (ರಾತ್ರಿ ವಸತಿ)
16.12.2008, ಭಾನುವಾರ	ಬೆಳಿಗ್ಗೆ 11 ಕ್ಕೆ	ಇಂಡಿ ಸಾರ್ವಜನಿಕ ಸಭೆ
	ಸಂಜೆ 5-00	ಬಿಜಾಪುರ ಸಾರ್ವಜನಿಕ ಸಭೆ
	ರಾತ್ರಿ 9-00	ಅಥಣಿ (ರಾತ್ರಿ ವಸತಿ)
17.12.2008, ಸೋಮವಾರ	ಬೆಳಿಗ್ಗೆ 10-00	ಅಥಣಿ ಸಾರ್ವಜನಿಕ ಸಭೆ
	ಬೆಳಿಗ್ಗೆ 12-30	ಚಿಕ್ಕೋಡಿ ಸಾರ್ವಜನಿಕ ಸಭೆ
	ಸಂಜೆ 4-00	ನಿಪ್ಪಾಣಿ ಸಾರ್ವಜನಿಕ ಸಭೆ
	ರಾತ್ರಿ 8-00	ಬೆಳಗಾವಿ (ರಾತ್ರಿ ವಸತಿ)
18.12.2008, ಮಂಗಳವಾರ	ಬೆಳಿಗ್ಗೆ 11-00	ಬೆಳಗಾವಿ ಸಾರ್ವಜನಿಕ ಸಭೆ
	ಮಧ್ಯಾಹ್ನ 1-00	ಗೋಕಾಕ ಸಾರ್ವಜನಿಕ ಸಭೆ
	ಸಂಜೆ 6-00	ರಾಮದುರ್ಗ ಸಾರ್ವಜನಿಕ ಸಭೆ
	ರಾತ್ರಿ 8-00	ಸವದತ್ತಿ (ರಾತ್ರಿ ವಸತಿ)
19.12.2008	ಬೆಳಿಗ್ಗೆ 10-30	ಸವದತ್ತಿ ಸಾರ್ವಜನಿಕ ಸಭೆ
	ಮಧ್ಯಾಹ್ನ 12-30	ಧಾರವಾಡ ಸಾರ್ವಜನಿಕ ಸಭೆ
	ಮಧ್ಯಾಹ್ನ 3-00	ಹುಬ್ಬಳ್ಳಿ ಸಾರ್ವಜನಿಕ ಸಭೆ
	ಸಂಜೆ 5-30	ನವಲಗುಂದ ಸಾರ್ವಜನಿಕ ಸಭೆ
	ಸಂಜೆ 7-00	ಬೆಳವಣಿಕೆ ಸಾರ್ವಜನಿಕ ಸಭೆ (ರಾತ್ರಿ ವಸತಿ)
20.12.2008	ಬೆಳಿಗ್ಗೆ 10-00	ಗಜೇಂದ್ರಗಡ ಸಾರ್ವಜನಿಕ ಸಭೆ
	ಮಧ್ಯಾಹ್ನ 1-00	ಗದಗ ಸಾರ್ವಜನಿಕ ಸಭೆ
	ಸಂಜೆ 4-00	ಲಕ್ಷ್ಮೇಶ್ವರ/ಶಿರಹಟ್ಟಿ ಸಾರ್ವಜನಿಕ ಸಭೆ
	ರಾತ್ರಿ	ಹಾವೇರಿ (ರಾತ್ರಿ ವಸತಿ)
21.12.2008	ಬೆಳಿಗ್ಗೆ 11-00	ಹಾವೇರಿ ಸಮಾರೋಪ ಕಾರ್ಯಕ್ರಮ

ಕೃಷಿ ಕಾರ್ಮಿಕರಿಗೆ ಕೇಂದ್ರೀಯ ಶಾಸನ ಅಗತ್ಯ

ಕೃಷಿ ಕೂಲಿಕಾರರಿಗಾಗಿ ಕೇಂದ್ರೀಯ ಶಾಸನವನ್ನು ಕೇಂದ್ರ ಸರಕಾರ ಜಾರಿಗೊಳಿಸುವ ಮೂಲಕ ಕೃಷಿ ಕೂಲಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಬೇಕು ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸತ್ ಸದಸ್ಯ ಎ. ವಿಜಯರಾಘವನ್ ಆಗ್ರಹಿಸಿದರು. ಕೃಷಿ ಕೂಲಿಕಾರರ ಸಂಘಟನೆಯ ನೇತೃತ್ವದ ಅಖಿಲ ಭಾರತ ಜಾಥಾ ಬೆಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ನವೆಂಬರ್ 28 ರಂದು ಟೌನ್‌ಹಾಲ್ ಮುಂದೆ ನಡೆದ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಕೇಂದ್ರ ಸರಕಾರ ಕಟ್ಟಡ ನಿರ್ಮಾಣ ಮುಂತಾದ ಕೂಲಿ ಕಾರ್ಮಿಕರ ಹಿತರಕ್ಷಣೆಗಾಗಿ ಶಾಸನವನ್ನು ರೂಪಿಸಿ ಜಾರಿಗೊಳಿಸಿದೆ. ಆದರೆ ಕೃಷಿ ಕೂಲಿ ಕಾರ್ಮಿಕರಿಗೆ ಶಾಸನ ರೂಪಿಸಿದೆಯಾದರೂ, ಅದನ್ನು ಜಾರಿಗೊಳಿಸುವಲ್ಲಿ ಮೀನಮೇಷ ಎಣಿಸುತ್ತಿದೆ ಎಂದು ಅವರು ಟೀಕಿಸಿದರು.

ಕೇಂದ್ರ ಸರಕಾರ ಕೂಡಲೇ ಕೃಷಿ ಕೂಲಿ ಕಾರ್ಮಿಕರಿಗಾಗಿ ಕೇಂದ್ರೀಯ ಶಾಸನವನ್ನು ಜಾರಿಗೊಳಿಸಿ ಕನಿಷ್ಠ ಕೂಲಿ, ಪಿಂಚಣಿ, ಆರೋಗ್ಯ ಕಲ್ಯಾಣ ನಿಧಿ ಮುಂತಾದ ಸೌಲಭ್ಯ ಕಲ್ಪಿಸುವ ಮೂಲಕ ಸಾಮಾಜಿಕ ಭದ್ರತೆ ಒದಗಿಸಬೇಕು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಪ್ರಸ್ತುತ 100 ದಿನ ಮಾತ್ರ ಉದ್ಯೋಗ ನೀಡುವ ಸೌಲಭ್ಯವಿದ್ದು, ಇದನ್ನು 150 ದಿನಗಳಿಗೆ ಏರಿಸಬೇಕು. ಅಲ್ಲದೆ 150 ರೂ. ಕೂಲಿ ನೀಡಬೇಕೆಂದು ಅವರು ಒತ್ತಾಯಿಸಿದರು.

ರಾಜ್ಯ ಕೃಷಿ ಕೂಲಿಕಾರರ ಸಂಘದ ಉಪಾಧ್ಯಕ್ಷ ಜಿ.ಎನ್.ನಾಗರಾಜ್ ಮಾತನಾಡಿ, ರಾಜ್ಯದಲ್ಲಿ ಸುಮಾರು 1 ಕೋಟಿ ಕೃಷಿ ಕೂಲಿ ಕಾರ್ಮಿಕರಿದ್ದಾರೆ. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಕೃಷಿ ಕೂಲಿ ಕಾರ್ಮಿಕರಿಗೆ ಯಾವುದೇ ಸೌಲಭ್ಯ ನೀಡದೆ, ರಾಜ್ಯದಲ್ಲಿ ಕೃಷಿ ಕೂಲಿ ಕಾರ್ಮಿಕರು ಇಲ್ಲವೇನೋ ಎಂಬಂತೆ ವರ್ತಿಸುತ್ತಿದ್ದಾರೆ. 2008-09ನೇ ಸಾಲಿನ ಬಜೆಟ್‌ನಲ್ಲೂ ಕೂಲಿ ಕಾರ್ಮಿಕರ ಅಭಿವೃದ್ಧಿಗಾಗಿ ಹಣ ಮೀಸಲಿಡದೆ ನಿರ್ಲಕ್ಷಿಸಿದ್ದಾರೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದರೆ 2 ರೂ.ಗೆ ಅಕ್ಕಿ ನೀಡುತ್ತೇವೆಂದು, ಬಿಪಿಎಲ್ ಮಿತಿಯನ್ನು ಕಡಿಮೆ ಮಾಡುತ್ತೇವೆಂದೂ ಅನೇಕ ಭರವಸೆಗಳನ್ನು ನೀಡಿದರು. ಆದರೆ ಅವರು ಕೊಟ್ಟ ಮಾತುನಂತೆ ನಡೆದುಕೊಳ್ಳಲಿಲ್ಲ. ಅಲ್ಲದೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಮಿಕರಿಗೆ ದಿನಗೂಲಿ 110 ರೂ. ನೀಡುತ್ತೇವೆಂದು ಘೋಷಿಸಿದ್ದರು. ಆದರೆ ಈಗ 82 ರೂ.ಗಿಂತಲೂ ಹೆಚ್ಚಿಗೆ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಹೀಗೆ ಬಿಜೆಪಿ ಸರಕಾರ ಕೂಲಿ ಕಾರ್ಮಿಕರ ಹಿತ ಕಾಯ್ದುಕೊಳ್ಳುವಲ್ಲಿ ಸಂಪೂರ್ಣ ನಿರ್ಲಕ್ಷಿಸಿದೆ ಎಂದು ಅವರು ಖಂಡಿಸಿದರು.

ಕೃಷಿ ಕೂಲಿ ಕಾರ್ಮಿಕರಿಗೆ ಸಮಗ್ರ ಕೇಂದ್ರೀಯ ಶಾಸನ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿ, ನಿವೇಶನ ರಹಿತ ಕೂಲಿಕಾರರಿಗೆ ಮನೆಗಳನ್ನು ಒದಗಿಸಬೇಕು ಎಂಬ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಿ ನವೆಂಬರ್ 15 ರಿಂದ ದೇಶಾದ್ಯಂತ ಜಾಥಾವನ್ನು ಹಮ್ಮಿಕೊಂಡಿದ್ದು, ಇದು ಡಿಸೆಂಬರ್ 2 ರಂದು ಆಂಧ್ರ ಪ್ರದೇಶದ ಹೈದರಾಬಾದ್‌ನಲ್ಲಿ ಸಮಾವೇಶಗೊಳ್ಳಲಿದೆ ಎಂದು ಅವರು ತಿಳಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳೂ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳೂ ಆದ ವಿ.ಜೆ.ಕೆ.ನಾಯರ್ ಈ ಸಂದರ್ಭದಲ್ಲಿ ಮಾತನಾಡಿ ಜಾಥಾ ಉದ್ದೇಶವನ್ನು ಬೆಂಬಲಿಸಿದರು. ಸಂಘದಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು.

ಮುಂಬೈಯಲ್ಲಿ ಕಂಡ ಉಗ್ರರ ಕ್ರೌರ್ಯದ ಕರಾಳಮುಖ



ನೂರು ವರ್ಷ ದಾಟಿದ ಬಾಂಬೆಯ ಪ್ರಸಿದ್ಧ ಹೋಟೆಲ್‌ನ ಮುಂದೆ ನೂರಾರು ಪಾರಿವಾಳಗಳು ಅತ್ತಿಂದತ್ತ, ಇತ್ತಿಂದತ್ತ ಹಾರಾಡುತ್ತಿದ್ದವು. ತಾಜ್ ಎಂಬ ಆ ಹೋಟೆಲಿನಲ್ಲಿ ಭಯೋತ್ಪಾದಕ ಉಗ್ರರಿಗೂ, ಭದ್ರತಾ ಪಡೆಯ ಸಿಬ್ಬಂದಿಗೂ ನಡೆಯುತ್ತಿದ್ದ ಭೀಕರ ಗುಂಡಿನ ವಿನಿಮಯ, ಉಗ್ರರು ಸಿಡಿಸುತ್ತಲಿದ್ದ ಗ್ರೇನೇಡ್‌ಗಳ ಅಪಾಯಗಳ ಕಿಂಚಿತ್ತೂ ಅರಿವಿಲ್ಲದಂತೆ ಅವು ಆ ಹೋಟೆಲ್‌ನ ಸುತ್ತಲೂ ಹಾರುತ್ತಲೇ ಇದ್ದವು.

ಕಡೆಗೆ ನವೆಂಬರ್ 29, 2008 ರಂದು ಶನಿವಾರ ಮದ್ಯಾಹ್ನ ದೂರದರ್ಶನದಲ್ಲಿ ಉಗ್ರರಿಂದ ಮುಕ್ತವಾದ ತಾಜ್ ಹೊಟೆಲ್‌ನ ಚಿತ್ರವನ್ನು ನೊಡುವಾಗ ಚಿಲ್ಲಾಪಿಲ್ಲಿಯಾದ ಪಿಠೋಪಕರಣ ಎಲ್ಲೆಲ್ಲೋ ಹರಡಿ ಬಿದ್ದಿರುವ ಚಪ್ಪಲಿ, ಷೂಗಳ ನಡುವೆ ಒಂದು ಪಾರಿವಾಳದ ದೇಹ ಬಿದ್ದಿತ್ತು. ಬಹುಶ: ಆ ಹೊತ್ತಿಗಾಗಲೇ ಆ ಜಾಗದಲ್ಲಿ ಆ ಕಟ್ಟಡದಲ್ಲಿ ಹರಿದ ರಕ್ತವೆಷ್ಟೋ? ಉರುಳಿದ ಹೆಣಗಳೆಷ್ಟೋ? ಒಟ್ಟು ಇನ್ನೂರಕ್ಕಿಂತ ಹೆಚ್ಚು ಹೆಣಗಳು ಮುಂಬೈಯಲ್ಲಿ ಉರುಳಿ ಬಿದ್ದಿವೆ.





ಇವರಲ್ಲಿ ಬಹಲಷ್ಟು ಮಂದಿ ಮುಗ್ಧ ನಾಗರೀಕರು. ಭಯೋತ್ಪಾದನಾ ನಿಗ್ರಹ ದಳದ ಅಧಿಕಾರಿಗಳು, ರಾಷ್ಟ್ರೀಯ ಭದ್ರತಾದಳದ (ಎನ್‌ಎಸ್‌ಜಿ)ದ ಯೋಧರು ಉಗ್ರರ ಬಂದೂಕು ಗ್ರೇನೈಡ್ ದಾಳಿಗೆ ಬಲಿಯಾಗಿದ್ದಾರೆ. ಬಲಿಯಾದ ನಾಗರೀಕರಲ್ಲಿ ವಿದೇಶೀಯರು ಸ್ವದೇಶಿಯರು ಇಬ್ಬರೂ ಇದ್ದಾರೆ. ಭಯೋತ್ಪಾದನಾ ನಿಗ್ರಹದಳ ಮತ್ತು ಎನ್‌ಎಸ್‌ಜಿಯ ಧೀಮಂತ ಅಧಿಕಾರಿಗಳು, ಯೋಧರೂ ಉಗ್ರರಿಂದ ನಾಗರೀಕರನ್ನು ರಕ್ಷಿಸುವ ಕೆಚ್ಚೆದೆಯ ಹೋರಾಟದಲ್ಲಿ ಹುತಾತ್ಮರಾಗಿದ್ದಾರೆ.

ಇಂತದ್ದೊಂದು ಅನಾಗರೀಕ ಹಿಂಸಾಚಾರದಿಂದ ಈ ಉಗ್ರರಾದರೂ ಏನು ಸಾಧಿಸುತ್ತಾರೆ? ಇದಕ್ಕೆ ಉತ್ತರ ಏನಾದರೂ ಇರಲಿ ಮತಾಂಧತೆ, ಮೂಲಭೂತವಾದಗಳು ತಲೆಗೆ ಏರಿದರೆ ಮನುಷ್ಯ ಎಂತಹ ನೀಚತನಕ್ಕೆ ಎಂತಹ ಕ್ರೌರ್ಯಕ್ಕೆ ಇಳಿಯಬಹುದು ಎಂಬುದಕ್ಕೆ ಮುಂಬೈ ಮೇಲಿನ ಈ ಉಗ್ರರ ಭಯೋತ್ಪಾದಕ ದಾಳಿಯೇ ಸಾಕ್ಷಿಯಾಗಿದೆ. ಇದನ್ನು ಕೇವಲ ಭಯೋತ್ಪಾದನೆ ಎಂದು ಕರೆದರೆ ತೀರಾ ಪೇಲವವಾಗುತ್ತದೆ. ಇದು ಭಯೋತ್ಪಾದನೆಯನ್ನು ಮೀರಿದ್ದು. ಮನುಷ್ಯತ್ವದ ಮೌಲ್ಯಗಳನ್ನು ಗಾಳಿಗೆ ತೂರಿದ ನಗ್ನ ರಾಕ್ಷಸಿ ದಾಳಿ.

ಬಾಂಬ್ ಸ್ಫೋಟ, ಗ್ರನೇಡ್ ದಾಳಿ, ಗುಂಡಿನ ಮಳೆ

ಮುಂಬೈನ ಸಸೋನ್ ಸಮುದ್ರ ತೀರದಿಂದ ಸುಮಾರು 12ಯುವಕರ ತಂಡ ಭಾರವಾದ ಬ್ಯಾಗುಗಳೊಂದಿಗೆ ನವೆಂಬರ್ 26 ಬುಧುವಾರದಂದು ನಡೆದು ಬರುವವರನ್ನು ಕಂಡೆವೆಂದು ಕೆಲವು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆಂಬ ವರದಿ ಇದೆ. ಯುವಕರು ಎರಡು ತಂಡಗಳಾಗಿ ಭಾಗವಾಗಿ ಹೋದರಂತೆ.

ಆ ರಾತ್ರಿ 10.33ರ ಸುಮಾರಿಗೆ ಮುಂಬೈನ ಛತ್ರಪತಿ ಶಿವಾಜಿ ರೈಲ್ವೆ ನಿಲ್ದಾನಕ್ಕೆ ನುಗ್ಗಿದ ಉಗ್ರರ ತಂಡ ಮನಸ್ಸಿಗೆ ತೋಚಿದಂತೆ ಗುಂಡು ಹಾರಿಸಿದೆ. ಅಲ್ಲಿಂದ ಆರಂಭವಾದ ದಾಳಿಗಳು ಅಮಾಯಕರು, ಮಕ್ಕಳು, ಮಹಿಳೆಯರು ಎನ್ನದೆ, ವೀದೇಶಿಯರು, ಭಾರತೀಯರು ಎಲ್ಲಾರನ್ನು ಬಲಿ ಪಡೆದುಕೊಂಡಿದೆ. ಮೆಟ್ರೋ ಸಿನಿಮಾ ಮಂದಿರ ಬಳಿದಾಳಿ, ಮುಜೆಗಾಂವ್ ಎಂಬಲ್ಲಿ ಮೇಲ್ಸೆತುವೆ ಕೆಳಗೆ ಟ್ಯಾಕ್ಸಿಯಲ್ಲಿ ಬಾಂಬ್ ಇಟ್ಟು ಸ್ಫೋಟ, ಹೀಗೆ ನಗರದ ಒಟ್ಟು 12 ಕಡೆ ಭೀಕರ ದಾಳಿ ನಡೆದಿದೆ.

ಮುಂಬೈನ ಪಂಚತಾರಾ ಹೋಟೆಲ್‌ಗಳಾದ ತಾಜ್, ಒಬೇರಾಯ್ ಟ್ರೈಡೆಂಟ್ ಗಳಿಗೆ ನುಗ್ಗಿದ ಉಗ್ರರ ತಂಡ ಅಲ್ಲಿನ ಹಲವು ಸಿಬ್ಬಂದಿಗಳನ್ನು ಸಾರ್ವಜನಿಕರನ್ನು ಕೊಂದು ದೊಡ್ಡ ಸಂಖ್ಯೆಯ ಜನರನ್ನು ಸೆರೆಗೆ ತೆಗೆದುಕೊಂಡಿದೆ. ಹೋಟೆಲುಗಳ ಕೊಠಡಿಗಳು, ಮಹಡಿಗಳು, ಕಟ್ಟಡದ ವಿನ್ಯಾಸ ಎಲ್ಲವನ್ನು ಚೆನ್ನಾಗಿ ಬಲ್ಲವರಂತೆ ನುಗ್ಗಿ ಸಾಕಷ್ಟು ಹಿಂಸಾಚಾರ, ಕಗ್ಗೊಲೆಗಳನ್ನು ನಡೆಸಿದ ಉಗ್ರರ ದುಷ್ಕೃತ್ಯವನ್ನು ನೋಡಿದರೆ ಅದಕ್ಕಾಗಿ ಈ ಹಿಂದೆಯೇ ಈ ಪ್ರದೇಶಗಳಿಗೆ ಭೇಟಿ ನೀಡಿ ಸಾಕಷ್ಟು ಮಾಹಿತಿ ಸಂಗ್ರಹ, ಸಮೀಕ್ಷೆ ನಡೆಸಿದಂತೆ ತೋರುತ್ತದೆ.

ಕೇಂದ್ರ ಸರ್ಕಾರವು ಮುಂಬೈ ಉಗ್ರರ ದುಷ್ಕೃತ್ಯದ ಹಿಂದೆ ಪಾಕಿಸ್ತಾನದ ಕೈವಾಡವಿದೆ ಎಂದಿದೆ. ಲಷ್ಕರ್-ಎ-ತೋಯ್ಬಾ ಈ ದುಷ್ಕೃತ್ಯದ ಹಿಂದಿದೆ ಎಂಬ ವರದಿಗಳು ಬರುತ್ತಿವೆ. ಕಡಲ ತೀರದ ಮೂಲಕ ದೇಶದ ಮೇಲೆ ದೇಶದ ಹೊರಗಿನ ಶತೃಗಳಿಂದ ಭಯೋತ್ಪಾದಕ ದಾಳಿ ಆಗವ ಸಾಧ್ಯತೆ ಇದೆ ಎಂಬ ಸೂಚನೆಯನ್ನು ಕೇಂದ್ರ ಸರ್ಕಾರವು ಈ ಹಿಂದೆಯೇ ರಾಜ್ಯಗಳಿಗೆ ನೀಡಿತ್ತಂತೆ. ಆದರೂ ಇಂತಹ ಭೀಕರ ದಾಳಿಯೊಂದು ನಡೆಸಲು ಅವಕಾಶವಾದದ್ದರೂ ಹೇಗೆ ? ದೇಶದ ಗುಪ್ತಚಾರ ವ್ಯವಸ್ಥೆ, ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಉತ್ತಮಗೊಳಿಸಬೇಕಾದ ಮತ್ತು ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಜ್ಜುಗೊಳಿಸಬೇಕಾದ ಅಗತ್ಯವನ್ನಂತೂ ಈ ಘಟನಾವಳಿಗಳು ಸಾರುತ್ತವೆ. ಇಡಿ ಘಟನಾವಳಿಗಳ ಬಗೆಗೆ ಸಮಗ್ರವಾದ ತನಿಖೆಯಾಗುವುದು. ಸಮಸ್ಯೆ,ಲೋಪ ಎಲ್ಲಿದೆ ಎಂಬುದನ್ನು ಕಂಡುಕೊಳ್ಳುವುದು ತುರ್ತಾಗಿ ಆಗಬೇಕಾದ ಕೆಲಸ.

ಆದರೆ ಇವುಗಳಲ್ಲದರ ಜೊತೆಗೆ ಭಾರತ ಜನತೆ ಜಾತಿ, ಧರ್ಮ, ಭಾಷೆಗಳ ಬೇಧವಿಲ್ಲದೆ ಅರಿತುಕೊಳ್ಳುಬೇಕಾದ ಮತ್ತೊಂದು ಬಾರಿ ಮಹತ್ವ ಸಂಗತಿಯೊಂದಿದೆ. ಅಯೋಧ್ಯಾ ಚಳುವಳಿಯಂತಹ ಒಂದು ಮತಾಂಧ ಚಳುವಳಿ, ಬಾಬರಿ ಮಸೀದಿ ನಾಶ, ಬಾಂಬೆ,ಗುಜರಾತ್ ಹಿಂಸಾಚಾರದಂತಹ ಅಮಾನುಷ ದೌರ್ಜನ್ಯಗಳು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ನಡೆಯುತ್ತಾ ಇರುವವರೆಗೆ, ಪ್ರಗ್ಯಾಸಿಂಗ್, ಪುರೋಹಿತರಂತಹ ಭಯೋತ್ಪಾದಕ ಉಗ್ರರನ್ನು ಕೇಸರಿ ಪಡೆ ಸಮರ್ಥಿಸಿ ಬೆಂಬಲಿಸುವುದನ್ನು ಮುಂದುವರಿಸುವವರೆಗೆ ಇಂತಹ ಭಯೋತ್ಪಾದಕ ಕೃತ್ಯಗಳನ್ನು ಸಂಪೂರ್ಣವಾಗಿ ನಿಗ್ರಹಿಸುತ್ತೇವೆಂಬುದು ಅಸಾಧ್ಯದ ಮಾತು. ಕೋಮುವಾದಿಗಳ ಹಾಗೂ ಮತಾಂಧರ 'ಕ್ರಿಯೆಗೆ ಪ್ರತಿಕ್ರಿಯೆ' ಸಿದ್ಧಾಂತಕ್ಕೆ ಕೊನೆ ಹಾಡುವುದು ಹೇಗೆ ಎಂಬುದು ಭಾರತದ ಜನತೆಯ ಮುಂದಿರುವ ಗಂಭಿರ ಸವಾಲಾಗಿದೆ. ○

ಅಮೂಲ್ಯ ಜೀವಗಳ ಬಲಿದಾನ

ಒಬೇರಾಯ್ ಹೋಟೆಲ್ ಇರಲಿ, ತಾಜ್ ಹೋಟೆಲ್ ಇರಲಿ, ನಾರಿಮನ್ ಭವನ ಇರಲಿ ಬೆಳಿಗ್ಗೆ ಉಗ್ರರ ಕಪಿಮುಷ್ಠಿಯಿಲ್ಲಿ ಸಿಲುಕಿದ ಜನರನ್ನು ರಕ್ಷಿಸುವವಲ್ಲಿ ರಾಷ್ಟ್ರೀಯ ಭದ್ರತಾ ಪಡೆ ಯೋಧರು ಭಯೋತ್ಪಾದಕ ನಿಗ್ರಹ ದಳದ ಅಧಿಕಾರಿಗಳು ತೋರಿದ ಧೈರ್ಯ ಮೆರೆದ ಸಹಾಸ ಅಭಿನಂದಾರ್ಹ. ತಮ್ಮ ಪ್ರಾಣದ ಹಂಗನ್ನು ತೊರೆದು ನೂರಾರು ಸೆರೆಯಾಳುಗಳನ್ನು ಬಿಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹಲವರು ತಮ್ಮ ಅಮೂಲ್ಯ ಪ್ರಾಣವನ್ನು ಈ ಹೋರಾಟದಲ್ಲಿ ಅರ್ಪಿಸಿದ್ದಾರೆ.

ಭಯೋತ್ಪಾದನಾ ನಿಗ್ರಹ ದಳದ ಮುಖ್ಯಸ್ಥರಾದ ಹೇಮಂತ್ ಕರ್ಕರೆ ಉಗ್ರರ ಗುಂಡಿಗೆ ಬಲಿಯಾದರಲ್ಲಿ ಪ್ರಮುಖರಾಗುದ್ದಾರೆ. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಒಬ್ಬ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಯಾಗಿ ಖ್ಯಾತರಾಗಿದ್ದ ಹೇಮಂತ್ ಕರ್ಕರೆ ಇತ್ತೀಚಿನ ಮಾಲೇಗಾಂವ್ ಸ್ಫೋಟ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಡೆಸುತ್ತಿದ್ದರು. ಪ್ರಗ್ಯಾ ಸಿಂಗ್, ಪುರೋಹಿತ್ ಮುಂತಾದವರ ಬಂಧನ,



ಹೇಮಂತ್ ಕರ್ಕರೆ



ಮೇಜರ್ ಸಂದೀಪ್

ತನಿಖೆಗೆ ವಿರೋಧವಾಗಿ ಹಿಂದೂತ್ವವಾದಿಗಳು ಹಾಗೂ ಸಂಘ ಪರಿವಾರದಿಂದ ಬಂದ ಭಾರಿ ಪ್ರತಿರೋಧವನ್ನು ಲೆಕ್ಕಿಸದೇ ಅವರು ನಿಷ್ಟುರವಾಗಿ ತನಿಖೆ ಮುಂದುವರಿಸಿದ್ದರು. ಅಂತಹ ದಕ್ಷ ಅಧಿಕಾರಿ ಉಗ್ರರಿಗೆ ಬಲಿಯಾಗಿದ್ದಾರೆ. ಇದೇ ರೀತಿ ಎನ್‌ಕಾಂಟರ್ ತಜ್ಞ ಎನ್ನಲಾದ ವಿಜಯ ಸಲಾಸ್ಕರ್, ಅಸಿಸ್ಟೆಂಟ್ ಕಮಿಷನರ್ ಅಶೋಕ್ ಕಾಮ್ಟೆ ಪ್ರಾಣ ತೆತ್ತಿದ್ದಾರೆ.

ರಾಷ್ಟ್ರೀಯ ಭದ್ರತಾ ದಳ(ಎನ್.ಎಸ್.ಜಿ.) ಯೋಧರು ಒಟ್ಟು ಕಾಂರ್ಯಾಚರಣೆಯಲ್ಲಿ ಪ್ರಾಣ ತೆತ್ತಿದ್ದಾರೆ. ಬೆಂಗಳೂರಿನ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಹಲವಾರು ಸಾರ್ವಜನಿಕರನ್ನು ರಕ್ಷಿಸಿದ ನಂತರ, ಗಾಯಗೊಂಡ ಸಹೋದ್ಯೋಗಿಯ ರಕ್ಷಣೆಯ ಯತ್ನದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ.

ಒಟ್ಟು ಪ್ರಕರಣದಲ್ಲಿ ಪ್ರಾಣ ಕಳೆದುಕೊಂಡ 195 ಜನರಲ್ಲಿ ಹಲವಾರು ಜನ ವಿದೇಶಿಯರಿದ್ದಾರೆ. ಸಾರ್ವಜನಿಕರಿಗೆ ರಕ್ಷಣೆ ನೀಡುವಲ್ಲಿ ಬಹುವಾಗಿ ಶ್ರಮಿಸಿದ ಹೋಟೆಲ್ ಸಿಬ್ಬಂದಿಯಲ್ಲಿ ಹಲವರು ಉಗ್ರರ ಗುಂಡೇಟಿಗಳಿಗೆ ಬಲಿಯಾಗಿದ್ದಾರೆ.

ತಾಜ್ ಹೋಟೆಲ್‌ನಲ್ಲಿ ಮೇನೆಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಉಡುಪಿ ಮೂಲದ ಫೌಸಿನ್ ಮಾರ್ಬಿಸ್ ಸಹ ಉಗ್ರರ ದಾಳಿಯಲ್ಲಿ ಪ್ರಾಣ ಕಳದುಕೊಂಡಿದ್ದಾರೆ. ○

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH